
ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ಡಿಸೆಂಬರ್ 1, 2010 ರೂ. 12/-



ಸೂಕಿ ಎಂಬ ಸುಂದರ ಹೂ





ಯಡ್ಡಿ ಬದಲು ಚೆಡ್ಡಿ ಸಂತೋಷ್?

RSS: ಕಪಿಮುಷ್ಟಿಯಲ್ಲಿ ಜಯದೇವ್



ಾರಾಯಣ
ೌಡನ ವಿರುದ್ಧ
ವಸೂಲಿ



ಮೂರು ಸಾವಿರ ಮಠ
ಮತ್ತೆ ಸಿಕ್ಕಿಬಿದ್ದ
ಗುರುಸಿದ್ಧ

ಬೆಂಗಳೂರು
ಡೈಮಂಡ್ ಬಾಬು
ಹತ್ಯೆ ಹಿಂದೆ
ಪಾಲಿಕೆ
ಪಾಲಿಟಿಕ್ಸ್




ಇತ್ತೀಚೆಗೆ ಈ ಆಂದೋಲನದಲ್ಲಿದ್ದವರು ಸಮಾನಮನಸ್ಕರೊಡನೆ ಸೇರಿ ಒಂದು ರಾಜಕೀಯ ಪಕ್ಷವಾಗುವ ಪ್ರಯತ್ನವನ್ನೂ ಮಾಡಲಾಯಿತು. ಹೀಗಾಗಿ ನಾವೂ ಒಂದು ರಾಜಕೀಯ ಪಕ್ಷವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಪ್ರಭುತ್ವದ ಈ ಜನವಿರೋಧಿತನವನ್ನು ಬದಲಿಸಬಹುದೇ? ಇಂದು ಇಡೀ ವ್ಯವಸ್ಥೆಯನ್ನೇ ಆಮೂಲಾಗ್ರವಾಗಿ ಬದಲಾಯಿಸುವ ಮತ್ತೊಂದು ಸ್ವಾತಂತ್ರ್ಯ ಹೋರಾಟದ ಅಗತ್ಯವಿದೆಯಲ್ಲವೇ?

ನರ್ಮದಾ ಬಚಾವ್ ಆಂದೋಲನ್–25

ಮಿಣುಕು ಹಣತೆಯ ಮುಂದಿರುವ ಸವಾಲುಗಳು!

ಜ್ಯೋತಿಯೆಂಬುದು ಕತ್ತಲ ಮೇಲೆ ಬೆಳಕು ಚೆಲ್ಲುವ್ವುದಲ್ಲ, ಬದಲಿಗೆ ಬೆಳಕಿನಲ್ಲಿರುವ ಕತ್ತಲನ್ನು ತೋರುವುದು ಎಂದು 12ನೇ ಶತಮಾನದ ಅನುಭಾವೀ ವಚನಕಾರ ಅಲ್ಲಮ ಹೇಳುತ್ತಾನೆ. ಅಲ್ಲಮನ ಈ ಅರಿವಿನ ಬೆಳಕಲ್ಲಿ ನೋಡಿದರೆ "ನರ್ಮದಾ ಬಚಾವ್ ಆಂದೋಲನ" ತನ್ನ ಸುದೀರ್ಘ 25 ವರ್ಷಗಳಲ್ಲಿ ಭಾರತದ ಅಭಿವೃದ್ಧಿ ಯೆಂಬ ಹುಸಿ ಬೆಳಕಿನಲ್ಲಿರುವ ಕತ್ತಲನ್ನು ಜಗತ್ತಿಗೇ ಎತ್ತಿ ತೋರಿಸುತ್ತಾ ನಿಜವಾದ ಅರಿವಿನ ಜ್ಯೋತಿಯಾಗಿ ಕೆಲಸ ಮಾಡಿಕೊಂಡು ಬಂದಿದೆಯೆಂದು ನಿಸ್ಸಂಶಯವಾಗಿ ಹೇಳ ಬಹುದು. 1985ರ ಅಕ್ಟೋಬರ್‌ನಲ್ಲಿ ನರ್ಮದಾ ಬೃಹತ್ ಡ್ಯಾಂ ಸರಣಿಗಳ ವಿರುದ್ಧ ತನ್ನ ಧ್ವನಿ ಎತ್ತಿದ ನರ್ಮದಾ ಬಚಾವ್ ಆಂದೋಲನ ಕಳೆದ 25 ವರ್ಷಗಳಲ್ಲಿ ಈ ದೇಶದ ಅಭಿವೃದ್ಧಿ ರಾಜಕಾರಣದ ಹೂರಣವನ್ನೆಲ್ಲಾ ಬಯಲು ಮಾಡಿದೆ. ಇಂದು ನರ್ಮದಾ ಚಳವಳಿಯು ನಾಗರಿಕ ಪ್ರತಿರೋಧಕ್ಕೆ ರೂಪಕ ಆಗಿದ್ದು ಭಾರತದ ಎಚ್ಚೆತ್ತ ನಾಗರಿಕ ಪ್ರಜ್ಞೆಯ ಭಾಗವಾಗಿದೆ.



ಆದರೆ ಅದೇ ಸಮಯದಲ್ಲಿ ಭಾರತವು ಕಂಡಂಥ ಅತ್ಯಂತ ಅಹಿಂಸಾತ್ಮಕ ಹಾಗೂ ಅಭೂತಪೂರ್ವ ಜನ ಸಂಘರ್ಷ, ರಾಷ್ಟ್ರವ್ಯಾಪಿ ಬೆಂಬಲ ಮತ್ತು ಅಂತಾರಾಷ್ಟ್ರೀಯ ಸಹಾನುಭೂತಿ ಎಲ್ಲವನ್ನೂ ಹೊಂದಿದ್ದ ನರ್ಮದಾ ಆಂದೋಲನ ಯಶಸ್ಸು ಕಂಡಿತೇ ಎಂಬುದಕ್ಕೆ ಹೌದು ಅಥವಾ ಇಲ್ಲ ಎಂಬ ಎರಡಕ್ಷರದ ಉತ್ತರ ಕೊಡುವುದು ಕಷ್ಟ. ಮೇಲೆ ಹೇಳಿದಂತೆ ಈ ದೇಶದ ಅಭಿವೃದ್ಧಿ ರಾಜಕಾರಣವೂ ಮೂಲಭೂತವಾಗಿ ಕಾರ್ಪೊರೇಟ್ ಬಂಡವಾಳಶಾಹಿ ಆದೇಶದನುಗುಣವಾಗಿ ನಡೆದು ಶ್ರೀಮಂತ ವರ್ಗಗಳಿಗೆ ಅನುಕೂಲ ಮಾಡಿಕೊಡುವ ರಾಜಕಾರಣವೇ ಹೊರತು ಸಾಮಾನ್ಯ ಜನರು ಈ ಅಭಿವೃದ್ಧಿ ಯೋಜನೆಯಲ್ಲಿ ಅಡಿಟಿಪ್ಪಣಿಯಾಗಿಯೂ ಬರುವುದಿಲ್ಲವೆಂಬುದನ್ನು ನರ್ಮದಾ ಆಂದೋಲನ ಸ್ಪಷ್ಟವಾಗಿ ಎತ್ತಿ ತೋರಿಸಿತೇನೋ ನಿಜ. ಆದರೆ ವಾಸ್ತವವೆಂದರೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಾಡಿನಲ್ಲಿ ಬದುಕುವ ಸ್ವಾತಂತ್ರ್ಯವನ್ನೇ ಕಳೆದುಕೊಂಡಿದ್ದ ಲಕ್ಷಾಂತರ ಆದಿವಾಸಿಗಳನ್ನು ಮತ್ತೊಮ್ಮೆ ಎತ್ತಂಗಡಿ ಮಾಡುವ ಹಾಗೂ ಪರಿಸರಕ್ಕೆ ತೀವ್ರವಾದ ಆಘಾತ ಉಂಟುಮಾಡುವ ಈ ಬೃಹತ್ ಡ್ಯಾಂ ಯೋಜನೆಗಳನ್ನು ರದ್ದುಮಾಡಬೇಕೆಂಬ ಆಂದೋಲನದ ಮೂಲ ಆಗ್ರಹವನ್ನು ಮಾತ್ರ ಪ್ರಭುತ್ವದ ಎಲ್ಲಾ ಅಂಗಗಳೂ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಒಟ್ಟಾಗಿ ಸೋಲಿಸಿದವು. ಇಡೀ ಪ್ರಭುತ್ವವೇ ಹೇಗೆ ಕಾರ್ಪೊರೇಟ್ ಹಿತಾಸಕ್ತಿಗಳ ಏಜೆಂಟ್ ಆಗಿದೆ ಎಂದು ನರ್ಮದಾ ಆಂದೋಲನ ಮತ್ತೊಮ್ಮೆ ತನ್ನ ಸುದೀರ್ಘ ಹೋರಾಟದ ಮೂಲಕ ತೋರಿಸಿಕೊಟ್ಟಿತು. ಆದರೆ ಅದೇ ಸಮಯದಲ್ಲಿ ಅದು ಇಂಥಾ ಪ್ರಭುತ್ವವನ್ನು ಮಣಿಸಲು ಹಲವು ಆಯಾಮ ಮತ್ತು ವ್ಯಾಪ್ತಿಯನ್ನು ಹೊಂದಿದ್ದ "ನರ್ಮದಾ ಆಂದೋಲನ"ದಂಥಾ ನರ್ಮದಾ ಆಂದೋಲನವೂ ಸಾಲದು ಎಂಬ ಪಾಠವನ್ನು ಹೇಳಿಕೊಟ್ಟಿತು. ಅದನ್ನು ಕಲಿಯುವವರು ಬೇಕಷ್ಟೆ!

ಹೀಗಾಗಿ ನರ್ಮದಾ ಆಂದೋಲನಕ್ಕೆ 25 ವರ್ಷ ತುಂಬಿರುವ ಈ ಹೊತ್ತು ಸಂಭ್ರಮದ ಜೊತೆಗೆ ಸರಿಯಾದ ಪಾಠಗಳನ್ನು ಕಲಿಯುವ ಸಮಯವೂ ಆಗಿದೆ. ನರ್ಮದಾ ಚಳವಳಿಯು ಎದುರಿಸಿದ ಸವಾಲು ಮತ್ತು ಸಮಸ್ಯೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳದೆ ಆಂದೋಲನದ ಸಾಧನೆಯನ್ನು ಮೆಚ್ಚಿಕೊಳ್ಳಲಾಗಲೀ, ವೈಫಲ್ಯತೆಯ ಕಾರಣಗಳನ್ನು ಅರಿತುಕೊಳ್ಳಲಾಗಲೀ ಸಾಧ್ಯವಾಗುವುದಿಲ್ಲ, ಹೀಗಾಗಿ ಸಂಕ್ಷಿಪ್ತವಾಗಿ ನರ್ಮದಾ ಅಂದೋಲನ ಮತ್ತದರ ಹಿನ್ನೆಲೆಯನ್ನು ಪರಶೀಲಿಸುವುದು ಅಗತ್ಯ.

"ಡ್ಯಾಂಗಳು ಆಧುನಿಕ ದೇವಸ್ಥಾನಗಳು" ಎಂದು ದೇಶದ ಮೊದಲ ಪ್ರಧಾನಿ ನೆಹರೂ ಘೋಷಿಸಿದಾಗ ಅವರ ಕಣ್ಣಮುಂದೆ ಇದ್ದದ್ದು ಹಚ್ಚ ಹಸಿರಿನ ಪೈರುಗಳು ಮತ್ತು ಭರ್ತಿಯಾಗಿದ್ದ ಗೋದಾಮುಗಳೇ ವಿನಃ ಆದಿವಾಸಿಗಳು, ಬಡ ರೈತರು ಮತ್ತು ಪರಿಸರವಲ್ಲ, ಭಾರತದ ಅಭಿವೃದ್ಧಿ ಯೋಜನೆಯು ರೂಪುಗೊಂಡಿದ್ದೇ ಹೀಗೆ. ಅವು ತಂತ್ರಜ್ಞಾನ ಕೇಂದ್ರಿತವಾದವೇ ವಿನಃ "ಕಟ್ಟ ಕಡೆಯ ಮನುಷ್ಯನನ್ನು" ಕೇಂದ್ರದಲ್ಲಿಟ್ಟು ಕೊಂಡಿರಲಿಲ್ಲ. (ಆದರೆ 1959ರ ಸುಮಾರಿಗೆ ನೆಹರೂರವರೇ "ಈ ಬೃಹತ್ ಡ್ಯಾಂಗಳು ದೇವಸ್ಥಾನಗಳಲ್ಲ, ದೈತ್ಯ ರೋಗಗಳು" ಎಂದು ಅಭಿಪ್ರಾಯಪಟ್ಟರೆಂದೂ ಹೇಳಲಾಗುತ್ತದೆ!) ಕೃಷಿಗೆ ಸಂಬಂಧಪಟ್ಟಂತೆ ಈ ಅಭಿವೃದ್ಧಿ ರಾಜಕಾರಣ ಸಹಸ್ರಮಾನಗಳಿಂದ ಈ ದೇಶದ ಜನತೆ ರೂಢಿಸಿಕೊಂಡು ಬಂದಿದ್ದ ಕೃಷಿ ತಂತ್ರಜ್ಞಾನವನ್ನೆಲ್ಲಾ ಅವಗಣನೆ ಮಾಡಿಬಿಟ್ಟಿತು. ಮತ್ತು ಅಮೆರಿಕದ ಬೃಹತ್ ಕಾರ್ಪೊರೇಟ್ ಕಂಪನಿಗಳು ಚಾಲನೆಗೆ ತಂದ ಹಸಿರುಕ್ರಾಂತಿ ಮಾದರಿಯ ಕೃಷಿಯನ್ನು ಜಾರಿಗೆ ತಂದಿತು. ಇದಕ್ಕೆ ಸಣ್ಣಪುಟ್ಟ ಅಣೆಕಟ್ಟುಗಳ ಬದಲಿಗೆ ಬೃಹತ್ ಡ್ಯಾಂಗಳೇ ಬೇಕಿತ್ತು, ಸಣ್ಣಪುಟ್ಟ ರೈತರಿಗಿಂತ ರೈತಾಪಿಯಲ್ಲಿ ಒಂದು ದೊಡ್ಡ ಶ್ರೀಮಂತವರ್ಗವನ್ನು ಸೃಷ್ಟಿಸಿ ತನ್ನ ಗ್ರಾಹಕರನ್ನಾಗಿ ಮಾಡಿಕೊಳ್ಳುವುದು ಅದರ ಉದ್ದೇಶವಾಗಿತ್ತು, ಶತಾಯಗತಾಯ ಉತ್ಪಾದನೆ ಜಾಸ್ತಿ ಮಾಡುವುದು ಅದರ ಉದ್ದೇಶವಾಗಿತ್ತೇ ವಿನಃ ಅದರ ನ್ಯಾಯೋಚಿತ ವಿತರಣೆಯಲ್ಲ, ಹೀಗಾಗಿ ಬೃಹತ್ ಡ್ಯಾಂಗಳ ಪರಿಯೋಜನೆಯಲ್ಲೇ ಜನಸಾಮಾನ್ಯರ, ಬಡ ರೈತಾಪಿ, ಆದಿವಾಸಿಗಳ ಹಿತಾಸಕ್ತಿ ಅಡಕವಾಗಿರಲಿಲ್ಲ.

ಸ್ವಾತಂತ್ರ್ಯಾನಂತರದಲ್ಲಿ ಬೃಹತ್ ಕೃಷಿ ಕಾರ್ಪೊರೇಟ್ ಕಂಪನಿಗಳ, ಕಾಂಟ್ರಾಕ್ಟರುಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಭಾರತದಾದ್ಯಂತ ಬೃಹತ್ ಡ್ಯಾಂಗಳ ನಿರ್ಮಾಣ ಪ್ರಾರಂಭವಾಯಿತು. ಅದರಲ್ಲಿ ಪ್ರಮುಖವಾದದ್ದು ನರ್ಮದಾ ನದಿ ಯೋಜನೆಗಳು. ನರ್ಮದೆಯು ಮಧ್ಯಪ್ರದೇಶದ "ಅಮರ್‌ಕಂಟಕ್" ಎಂಬಲ್ಲಿ ಹುಟ್ಟಿ ಮಧ್ಯಪ್ರದೇಶ,



ಚಾರ್ವಾಕ

▸ ಶಿವಸುಂದರ್

ಮಹಾರಾಷ್ಟ್ರದ ಗಡಿಗಳುದ್ದಕ್ಕೂ ಸಾಗಿ 1312 ಕಿಮೀ ಉದ್ದದ ಪ್ರಯಾಣ ಮುಗಿಸಿ ಗುಜರಾತ್‌ನಲ್ಲಿ ಸಮುದ್ರ ಸೇರುತ್ತದೆ. ಆದರೆ ಈ ನದಿ ಪಾತ್ರದ ಶೇ.63 ಭಾಗ ಮಧ್ಯಪ್ರದೇಶದ ಗುಡ್ಡಗಾಡು ಮತ್ತು ಅರೆಬಯಲು. ಶತಮಾನಗಳಿಂದಲೂ ಈ ನದಿ ತೀರಕ್ಕೆ ಅಂಟಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಮತ್ತು ಬಯಲಿನಲ್ಲಿ ಆದಿವಾಸಿಗಳು ಜೀವಿಸುತ್ತಾ ಬಂದಿದ್ದಾರೆ. ಹೀಗಾಗಿ ಈ ನದಿಯ ಮೇಲೆ ಬೃಹತ್ ಅಣೆಕಟ್ಟನ್ನು ಕಟ್ಟಿದರೆ ಈ ಬಡ ಮತ್ತು ನಿರ್ಗತಿಕ ಆದಿವಾಸಿಗಳ ಬದುಕೇ ಮೊದಲು ಮುಳುಗಡೆಯಾಗುತ್ತದೆ.

ಹಾಗಿದ್ದರೂ "ನರ್ಮದಾ ನದಿನೀರು ಹಂಚಿಕೆ ವ್ಯಾಜ್ಯ ತೀರ್ಮಾನ ಮಂಡಳಿ" ಟ್ರಿಬ್ಯುನಲ್ ಅನ್ನು 1969ರಲ್ಲಿ ನಿವೃತ್ತ ನ್ಯಾಯಮೂರ್ತಿ ರಾಮಸ್ವಾಮಿಯವರ ನೇತೃತ್ವ[...] ರಚಿಸಲಾಯಿತು. ಈ ಮಂಡಳಿಯು ಯಾವು[...] ಸಾರ್ವಜನಿಕ ಅಹವಾಲು ವಿಚಾರಿಸದೆ, ಕೇ[...] ಲಾಯರುಗಳ ಮತ್ತು ಪರಿಣಿತರ ಸಲಹೆಯ ಮೇ[...] ಸುಮಾರು ಹತ್ತು ವರ್ಷಗಳ ನಂತರ 1979ರಲ್ಲಿ [...] ತೀರ್ಮಾನವನ್ನು ಘೋಷಿಸಿತು.

ಈ ಟ್ರಿಬ್ಯುನಲ್ ನರ್ಮದಾ ನದಿಗುಂಟ 30 ದೊ[...] 135 ಮಧ್ಯಮ ಮತ್ತು 3000 ಸಣ್ಣ ಡ್ಯಾಮುಗ[...] ನಿರ್ಮಾಣ ಮಾಡಲು ಅನುಮತಿ ನೀಡಿತು. ಅ[...] ಮಧ್ಯಪ್ರದೇಶದ ನವಗಾಂ ಎಂಬಲ್ಲಿ 455 ಅಡಿ (13[...] ಮೀಟರ್) ಎತ್ತರದ ಬೃಹತ್ ಡ್ಯಾಂ ಹಾಗೂ ಅಲ್ಲಿ[...] ರಾಜಸ್ಥಾನಕ್ಕೆ ನೀರನ್ನು ಸಾಗಿಸಲು 532 ಕಿಮೀ ಉ[...] ಕಾಲುವೆಯನ್ನು ಕಟ್ಟಲೂ ಸಹ ಒಪ್ಪಿಗೆ ನೀಡಿತು. ಸರ್ಕಾ[...] ಪ್ರಕಾರ ಈ ಡ್ಯಾಮಿನಿಂದ ಗುಜರಾತ್, ರಾಜಸ್ಥಾನ ಮ[...] ಮಹಾರಾಷ್ಟ್ರಗಳ 5 ಕೋಟಿ ಜನರಿಗೆ ಕುಡಿಯುವ ನೀ[...] 60 ಲಕ್ಷ ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಮ[...] ಇಡೀ ಮಧ್ಯಭಾರತಕ್ಕೆ ವಿದ್ಯುತ್ತನ್ನು ಒದಗಿಸುತ್ತದೆ. ಇದರಿ[...] ಒಂದಷ್ಟು ಕಾಡು ನಾಶ ಮತ್ತು ಹಲ[...] ಎತ್ತಂಗಡಿಯಾಗುತ್ತದಾದರೂ ಯೋಜನೆಯಿಂದ ದೊರ[...] "ಸಾರ್ವತ್ರಿಕ ಲಾಭ"ವನ್ನು ಗಮನದಲ್ಲಿಟ್ಟುಕೊಂಡರೆ ಇ[...] ನಗಣ್ಯ ಮತ್ತು ಅನಿವಾರ್ಯ!

ಆದರೆ ಆಂದೋಲನವು ತನ್ನ ಸ್ವತಂತ್ರ ಅಧ್ಯಯನದಿ[...] ಹೊರತಂದ ವರದಿಯ ಪ್ರಕಾರ ಈ ಡ್ಯಾಂ ಸರಣಿಯ[...] ಪ್ರಮುಖವಾದ ಸರ್ದಾರ್ ಸರೋವರ್ ಯೋಜನೆಯೊ[...]ರಿಂದಲೇ ಕನಿಷ್ಠ 3,20,000 ಜನರು ಎತ್ತಂಗಡಿಯಾ[...]ತ್ತಾರೆ. ಅವರಲ್ಲಿ ಬಹುಪಾಲು ಆದಿವಾಸಿಗಳು. ಅ[...] ಈ ಯೋಜನೆಯ ಸ್ವರೂಪವೇ ಹೇಗಿದೆಯೆಂದ[...] ಮಧ್ಯಪ್ರದೇಶದ ನೀರು ಕಚ್ ಪ್ರಾಂತ್ಯದ ಶೇ. [...] ಪ್ರದೇಶವನ್ನೂ ತಲುಪುವುದಿಲ್ಲ ಮತ್ತು ಅದು ಈಗಾಗ[...] ನೀರಾವರಿಯ ಲಾಭ ಉಂಡ ಪ್ರದೇಶಗಳ ಶ್ರೀಮ[...] ಮತ್ತು ಮಧ್ಯಮವರ್ಗದ ರೈತಾಪಿಗೆ ಅನುಕೂಲವಾ[...]ತ್ತದೆಯೇ ವಿನಃ ಸಣ್ಣ ರೈತರಿಗೆ ಇದರಿಂದ ಯಾವ ಅ[...]ಕೂಲವೂ ಇಲ್ಲ. ಹಾಗೂ 400ಕ್ಕೂ ಹೆಚ್ಚು ಕಿ.ಮಿ[...] ದೂರ ಪಯಣಿಸಿ ರಾಜಸ್ಥಾನಕ್ಕೆ ನೀರುಣಿಸುವುದೂ ಸ[...] ಅಷ್ಟೇ ದೂರದ ಮಾತು. ಎಲ್ಲಕ್ಕಿಂತ ಹೆಚ್ಚಾಗಿ ಈ ಬೃಹ[...] ಡ್ಯಾಂ ಸರಣಿಗಳಿಂದ ಇಡೀ ಪ್ರದೇಶದ ಪರಿಸ[...] ಅಪಾಯವಿದೆಯೆಂಬುದನ್ನು ಸರ್ಕಾರ ಪರಿಗಣನೆ[...] ತೆಗೆದುಕೊಳ್ಳಲಿಲ್ಲ.

ಇವೆಲ್ಲದರ ನಡುವೆ ಸರ್ಕಾರ ಈ ಡ್ಯಾಂ ನಿರ್ಮಾ[...] ವಿಶ್ವಬ್ಯಾಂಕ್ ಸಹಾಯವನ್ನೂ ಕೋರಿತು. ವಿಶ್ವಬ್ಯಾಂ[...] ಇರುವುದೇ ಬಡದೇಶಗಳಲ್ಲಿ ಕಾರ್ಪೊರೇಟ್ ಹಿತಾಸಕ್ತಿಯ[...] ಎತ್ತಿಹಿಡಿಯುವ ಯೋಜನೆಗಳನ್ನು ಜಾರಿಗೆ ತರುವುದಕ[...]ರಿಂದ ಕೂಡಲೇ ಈ ಯೋಜನೆ[...] ಒಟ್ಟಾರೆ ವೆಚ್ಚದ ಶೇ.10 ಭಾಗವ[...] ಕೊಡಲು ಒಪ್ಪಿತು.

ಡ್ಯಾಂ ನಿರ್ಮಾಣ ನಿಧಾನವ[...] ಪ್ರಾರಂಭವಾಗುತ್ತಿದ್ದಂತೆ ಗುಜರಾತಿನ[...] ಕೆಲವು ಎನ್‌ಜಿಒಗಳು ಮತ್ತು ಕೆಲ[...] ಅಧ್ಯಯನ ಸಂಸ್ಥೆಗಳು ಡ್ಯಾಂನಿ[...] ನಿರ್ವಸಿತರಾಗುತ್ತಿರುವವರ ಪರವಾಗಿ ಧ್ವನಿ ಎತ್ತಲು ಪ್ರಾರಂ[...]ದರು. 1984ರಲ್ಲಿ ಗುಜರಾತಿನಲ್ಲಿ ನೆಲೆ ಕಳೆದುಕೊಳ್ಳುತ್ತಿ[...] 19 ಹಳ್ಳಿಗಳ ಜನರು ಡ್ಯಾಂ ವಿರೋಧಿಸಿ ಪ್ರತಿಭಟ[...] ಮಾಡಿದ್ದು ರಾಷ್ಟ್ರೀಯ ಗಮನ ಸೆಳೆಯಿತು. 1985[...] ಈ ಯೋಜನೆಯ ಆಮೂಲಾಗ್ರ ಅಧ್ಯಯನ ಕೈಗೊ[...] ತಂಡದಲ್ಲಿ ಆನಂತರ ಆಂದೋಲನದ ಪ್ರಮುಖ ಭಾಗವ[...] ಮೇಧಾ ಪಾಟ್ಕರ್ ಹಾಗೂ ಇನ್ನಿತರರು ಇದ್ದರು. [...] ಯೋಜನೆಯ ಬಗ್ಗೆ ಗುಜರಾತಿನಲ್ಲಿ ಅಲ್ಪಸ್ವಲ್ಪ ತಿಳಿವ[...] ಇದ್ದರೂ ಯೋಜನೆಯಿಂದ ಅಪಾರ ಪ್ರಮಾಣದಲ್ಲಿ ವಿನಾ[...] ಒಳಗಾಗುವ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಹೆ[...]

▸▸ 1

ನೋ ಕಾಮೆಂಟ್ಸ್

"ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯ ಸ್ಥಾನ ಸಿಗಬೇಕು. ಆದರೆ ಅದು ನಮ್ಮ ಒಳ್ಳೆಯ ನಡತೆಗೆ ಸಿಗುವ ಪ್ರಶಸ್ತಿಯ ರೂಪದಲ್ಲೋ ಅಥವಾ ಒಂದು "ವಿಶೇಷ ಜನರ ಮಂಡಳಿ"ಯಲ್ಲಿ ನಮಗೂ ಸ್ಥಾನ ದಯಪಾಲಿಸಿದ ರೀತಿಯಲ್ಲೋ ಅಲ್ಲ, ಬದಲಿಗೆ ಈವರೆಗೆ ಅಂತರರಾಷ್ಟ್ರೀಯ ವಿದ್ಯಮಾನಗಳ ತೀರ್ಮಾನದಲ್ಲಿ ತಮ್ಮ ಧ್ವನಿಯನ್ನು ದಾಖಲಾಗಿಸಲಾಗದವರ ಪರವಾಗಿ ಆ ಧ್ವನಿ ಇರಬೇಕು. ಭಾರತವು ಒಂದು ವಿಶ್ವಶಕ್ತಿಯಾಗಬೇಕಿರುವುದು ಈಗಿರುವ ಅಸಮಾನ ಸಂಬಂಧಗಳನ್ನು ಮತ್ತಷ್ಟು ಗಟ್ಟಿಗೊಳಿಸುವುದಕ್ಕಲ್ಲ, ಬದಲಿಗೆ ಅಂಥಾ ಅಸಮಾನ ಸಂಬಂಧದ ನೀತಿಗಳನ್ನು ಬದಲಾಯಿಸಲು."

- ಫೈಸಲ್ ದೇವ್‌ಜಿ, ಆಕ್ಸ್‌ಫರ್ಡ್ ವಿವಿ ವಿದ್ವಾಂಸ

"ಲಂಚ ಹಗರಣಗಳಿಂದ ರಾಜೀನಾಮೆ ಕೊಡುತ್ತಿರುವವರು ತ್ಯಾಗವನ್ನೇನೂ ಮಾಡುತ್ತಿಲ್ಲ, ಸಾಕ್ಷ್ಯಾಧಾರಗಳು ದೊರಕಿದ್ದರಿಂದಲೇ ಅವರು ರಾಜೀನಾಮೆ ನೀಡುತ್ತಿದ್ದಾರೆ. ಇಂಥವರನ್ನು ಗಲ್ಲಿಗೇರಿಸಬೇಕು. ಬಿಜೆಪಿ ಪರಮಭ್ರಷ್ಟ ಪಕ್ಷ ಎಂದು ನಾವೆಲ್ಲರೂ ಹೇಳುತ್ತೇವೆ. ಅದು ನಿಜ ಕೂಡ. ಆದರೆ ಅದಕ್ಕೆ ಪರ್ಯಾಯವಾಗಿ ನೀಡಲು ಕಾಂಗ್ರೆಸ್ ಬಳಿ ಏನಿದೆ? ಕಾಂಗ್ರೆಸ್ ಅಂದರೆ ಸೋನಿಯಾ ಗಾಂಧಿಯೇ? ಬಾವುಟವೇ? ಕಾಂಗ್ರೆಸ್ ಎಂಬುದು ಪರ್ಯಾಯ ಕಾರ್ಯಕ್ರಮವಾಗಬೇಕು."

- ರಮೇಶ್ ಕುಮಾರ್, ಕಾಂಗ್ರೆಸ್ ನಾಯಕ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ನನ್ನ ಹೆಂಡತಿಯ ಕುಟುಂಬದವರಿಗೆ ಕಾರ್ಗಿಲ್ ಯೋಧರಿಗೆ ಕಟ್ಟಲಾ[...] ಅಪಾರ್ಟ್‌ಮೆಂಟುಗಳಲ್ಲಿ ಮೂರು ಫ್ಲಾಟ್‌ಗಳನ್ನು ಕೊಡಿಸಿದ್ದೇನೆ ಎನ್ನುವುದು ನಿ[...] ಇದರಲ್ಲಿ ಕಾನೂನುಬಾಹಿರವಾದದ್ದು ಏನೂ ಇಲ್ಲ, ಏಕೆಂದರೆ ನನ್ನ ಮಾ[...]ವಾಯುಪಡೆಯಲ್ಲಿದ್ದರು. ಹೀಗಾಗಿ ನನ್ನ ವಿರುದ್ಧ ಸಂಚು ನಡೆದಿದೆ."

- ಅಶೋಕ್‌ರಾವ್ ಚವ್ಹಾಣ್, ಮಹಾರಾಷ್ಟ್ರದ ಮಾಜಿ ಮುಖ್ಯಮಂ[...]

ತಮ್ಮ ಎಲೆಯಲ್ಲಿ ಹೆಗ್ಗಣ ಬಿದ್ದಿದ್ದರೂ..

"ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ನಡೆಸಿ[...] ಭೂಹಗರಣವನ್ನೆಲ್ಲಾ ಬಯಲು ಮಾಡುತ್ತೇನೆ. ಕಳೆದ 10-15 ವರ್ಷಗಳಿಂದ ನಡೆ[...] ಭೂಹಗರಣವನ್ನೆಲ್ಲಾ ಜನರಿಗೆ ತಿಳಿಸುತ್ತೇನೆ."

- ಯಡಿಯೂರ[...]

"ದೂರವಾಣಿ ನಿರ್ವಾಹಕ ಕಂಪನಿಗಳಿಗೆ ಸಚಿವ ಎ. ರಾಜಾ ಅವರು ಹೆಚ್ಚುವರಿಯಾ[...] ನೀಡಿರುವುದು 12.6 ಮೆಗಾಹರ್ಟ್ಜ್ ತರಂಗಾಂತರಗಳನ್ನು ಮಾತ್ರ. ರಾಜಾ ಅವರಿಗಿ[...] ಮುಂಚೆ ಸಚಿವರಾಗಿದ್ದವರು ಯಾವುದೇ ಮುಂಗಡ ತೆಗೆದುಕೊಳ್ಳದೆ 65.2 ಮೆಗಾಹರ್ಟ್[...] ತರಂಗಾಂತರಗಳನ್ನು ಮಾರಿದ್ದರು."

-ಕೇಂದ್ರ ಸರ್ಕಾ[...]

ಸೂಕಿ ಎಂಬ ಸುಂದರ ಹೂ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಅಪ್ಪ ತುಂಬಾ ಮೆಚ್ಚಿದ್ದ ಆಂಗ್ ಸ್ಯಾನ್ ಸೂಕಿ ಅವರು ಕೆಲ ದಿನಗಳ ಹಿಂದೆ ಗೃಹಬಂಧನದಿಂದ ಬಿಡುಗಡೆ ಹೊಂದಿದ್ದಾರೆ. ಹಲವಾರು ವರ್ಷಗಳ ನಂತರ ಕಳೆದ ಭಾನುವಾರ ಸೂಕಿ ತಮ್ಮ ಮನೆಯಿಂದ ಹೊರಬಂದು ಕಾಂಪೌಂಡ್ ಹೊರಗಡೆ ಸೇರಿದ್ದ ಜನಸ್ತೋಮವನ್ನು ನೋಡುತ್ತಿದ್ದಾಗ ಟಿವಿ ಪರದೆಯ ಮೇಲಿದ್ದ ಸೂಕಿ ಅವರ ಮುಖವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ.

ಇಂಟರ್‌ನೆಟ್‌ನಲ್ಲಿ ಲಭ್ಯವಿರುವ ಅವರ ಫೋಟೋಗಳಿಗಿಂತಲೂ ಈಗ ಅವರ ಮುಖದಲ್ಲಿ ವಯಸ್ಸು ಸ್ವಲ್ಪ ಕಾಣಿಸುತ್ತಿದೆ. ಆದರೂ ಅದೇ ಮೋಹಕ ನಗು, ನೀಟಾಗಿ ಬಾಚಿದ ತಲೆಗೂದಲಿನಲ್ಲಿ ಕಂಗೊಳಿಸುತ್ತಿದ್ದ ಬಿಳಿಬಣ್ಣದ ಆರ್ಕಿಡ್ ಹೂಗಳು, ತೆಳ್ಳನೆ ದೇಹ, ಸೂಕ್ಷ್ಮ ಸಂವೇದನೆಯ ಕಣ್ಣುಗಳು... ಸೂಕಿಯ ಬಿಡುಗಡೆಯ ನೋಡಿ ಅಪ್ಪ ಎಷ್ಟು ಸಂತೋಷಪಡುತ್ತಿದ್ದರು ಎಂದು ಯೋಚಿಸಿದೆ. (ಸೂಕಿ ಕುರಿತು ಲಂಕೇಶರು ಬರೆದಿದ್ದ ಲೇಖನ 'ಸೂಕಿ ಎಂಬ ನಾಯಕಿ' ನೋಡಿ, ಟೀಕೆ-ಟಿಪ್ಪಣಿ ಸಂಪುಟ 2, ಪುಟ 170) ಸೂಕಿಯ ವ್ಯಕ್ತಿತ್ವ, ದಿಟ್ಟತನ ಮತ್ತು ಆಕೆ ಬರ್ಮಾದ ಲಷ್ಕರಿ ನಾಯಕರ ವಿರುದ್ಧ ಕಳೆದ 22 ವರ್ಷಗಳಿಂದ ನಡೆಸಿರುವ ಹೋರಾಟಗಳನ್ನೆಲ್ಲ ಅಪ್ಪನ ಲೇಖನ ಸೆರೆಹಿಡಿದಿರುವುದರಿಂದ ಅದನ್ನೆಲ್ಲ ಇಲ್ಲಿ ಮತ್ತೆ ವಿವರವಾಗಿ ಹೇಳುವ ಅವಶ್ಯಕತೆ ಇಲ್ಲ.



ಏಷ್ಯಾ ಖಂಡದಲ್ಲಿ ಜನಿಸಿದ ಜನನಾಯಕಿಯರು ಸಾಕಷ್ಟು ಇದ್ದಾರೆ. ಭಾರತದಲ್ಲಿ ನೆಹರೂ ಪುತ್ರಿ ಇಂದಿರಾ, ಪಾಕಿಸ್ತಾನದಲ್ಲಿ ಭುಟ್ಟೋ ಪುತ್ರಿ ಬೆನಜೀರ್, ಬಾಂಗ್ಲಾದೇಶದಲ್ಲಿ ಮುಜಿಬುರ್ ರೆಹಮಾನ್ ಪುತ್ರಿ ಶೇಕ್ ಹಸೀನಾ, ಇಂಡೋನೇಷಿಯಾದ ಸುಕರ್ನೋ ಪುತ್ರಿ ಮೇಘವತಿ... ಇವರೆಲ್ಲರೂ ತಮ್ಮ ದೇಶಗಳಲ್ಲಿ ಪ್ರಧಾನಿಗಳಾಗಿ ಅಧಿಕಾರ ಕಂಡವರು. ಹಾಗೆಯೇ ಏಷ್ಯಾ ಖಂಡದಲ್ಲಿ ರೂಪುಗೊಂಡ ಮಹಿಳಾ ನಾಯಕಿಯರಿಗೂ ಕೊರತೆ ಇಲ್ಲ. ಫಿಲಿಫೈನ್ಸ್‌ನ ನಾಯಕ ಅಕ್ವಿನೋನ ಪತ್ನಿ ಕೊರಜೋನ್ ಆಕ್ವಿನೋ, ರಾಜೀವ್ ಗಾಂಧಿ ಅವರ ಪತ್ನಿ ಸೋನಿಯಾ ಗಾಂಧಿ, ಶ್ರೀಲಂಕಾದ ಬಂಡಾರನಾಯ್ಕೆಯವರ ವಿಧವೆ ಸಿರಿಮಾವೊ.... ಇವರುಗಳಲ್ಲಿ ಸೋನಿಯಾ ಗಾಂಧಿಯ ಹೊರತಾಗಿ ಎಲ್ಲರೂ ತಮ್ಮ ದೇಶಗಳ ಅಧ್ಯಕ್ಷೆ ಅಥವಾ ಪ್ರಧಾನಿ ಆಗಿದ್ದವರು.

ಆದರೆ ಇವರೆಲ್ಲರಿಗಿಂತ ಸೂಕಿ ಭಿನ್ನ. ಬೆನಜೀರ್‌ಳನ್ನ ಪಾಕಿಸ್ತಾನದ ಸೈನ್ಯಾಧಿಕಾರಿಗಳು ಜೈಲಿಗೆ ದೂಡಿದಂತೆ ಸೂಕಿಯನ್ನು ಬರ್ಮಾದ ಸೈನ್ಯ ಬಂಧನದಲ್ಲಿಟ್ಟಿತ್ತು. ಆದರೆ ನಂತರ ಬೆನಜೀರ್ ಅಧಿಕಾರ ಪಡೆದು ಭ್ರಷ್ಟಳಾಗಿದ್ದು, ತನ್ನ ದೇಶವನ್ನೇ ತೊರೆದುಹೋಗಿದ್ದು ಮತ್ತೆ ಅಧಿಕಾರವನ್ನು ಹಂಬಲಿಸಿ ತನ್ನ ಪರಮ ವೈರಿ ಮುಷರಫ್‌ನೊಂದಿಗೆ ರಾಜಿ ಕಬೂಲಿ ಮಾಡಿಕೊಂಡಿದ್ದು, ಕೊನೆಗೆ ತನ್ನ ವೈರಿಗಳಿಂದಲೇ ಸಾವನ್ನಪ್ಪಿದ್ದು ಎಲ್ಲರಿಗೂ ಗೊತ್ತು. ಆದರೆ ಸೂಕಿ ಎಂದೂ ಇಂತಹ ರಾಜಿ ಕಬೂಲಿಗಳಿಗೆ ಮುಂದಾದವರಲ್ಲ. ಅಧಿಕಾರಕ್ಕಾಗಿ ಪ್ರಜಾಪ್ರಭುತ್ವ ಪರವಾದ ತಮ್ಮ ನಿಲುವುಗಳನ್ನ ಸಡಿಲಗೊಳಿಸಿದವರಲ್ಲ.

ಇನ್ನು ಮೇಲೆ ಹೆಸರಿಸಲಾಗಿರುವ ಇತರೇ ಮಹಿಳಾ ರಾಜಕಾರಣಿಗಳು ಒಂದೋ ಈಗ ಇಲ್ಲವಾಗಿದ್ದಾರೆ ಅಥವಾ ಅವರ ದೇಶಗಳಲ್ಲಿನ ಪ್ರಸುತ್ತ ರಾಜಕೀಯ ವಲಯದಲ್ಲಿ ಅಪ್ರಸುತ್ತರಾಗಿದ್ದಾರೆ (ಸೋನಿಯಾರನ್ನು ಹೊರತುಪಡಿಸಿ). ಆದರೆ ಸೂಕಿ ಇಲ್ಲಿಯತನಕ ಒಂದೇ ಒಂದು ಹುದ್ದೆಯನ್ನಾಗಲಿ, ಒಂದೇ ಒಂದು ದಿನ ಅಧಿಕಾರವನ್ನಾಗಲಿ ಅನುಭವಿಸದಿದ್ದರೂ ಇವತ್ತಿಗೂ ತನ್ನ ದೇಶದಲ್ಲಿ ಅತಿಮುಖ್ಯ ಜನನಾಯಕಿಯಾಗಿ ಉಳಿದುಕೊಂಡಿದ್ದಾರೆ.

ಅದಕ್ಕೆ ಕಾರಣ ಅವರ ದಿಟ್ಟ, ನೈತಿಕ ನಿಲುವು. ಪ್ರತಾಪ್ ಬಾನು ಮೆಹ್ತಾ ಎಂಬ ಚಿಂತಕರು ಇತ್ತೀಚಿನ ಲೇಖನದಲ್ಲಿ ಸೂಕಿಯ ಹೋರಾಟವು ಆದರ್ಶಗಳ ಶಕ್ತಿಯ ಸಂಕೇತ ಎಂದಿದ್ದಾರೆ. ನೈತಿಕತೆಯನ್ನುಳಿಸಿಕೊಂಡು, ತಾವು ನಂಬಿರುವ ಆದರ್ಶಗಳಿಗಾಗಿ ನಿಜವಾಗಲೂ ಹೋರಾಡುವವರು ಎಂದೂ ಯಾವ ಸೈನ್ಯಕ್ಕೂ, ಯಾವ ಕಷ್ಟಕಾರ್ಪಣ್ಯಗಳಿಗೂ ಹೆದರುವುದಿಲ್ಲ ಎಂದಿರುವ ಮೆಹ್ತಾ ಅಂತಹ ವ್ಯಕ್ತಿಗಳಲ್ಲಿ ಮಹಾತ್ಮ ಗಾಂಧಿ ಮತ್ತು ನೆಲ್ಸನ್ ಮಂಡೇಲಾ ಪ್ರಮುಖರು ಎಂದು ಸ್ಮರಿಸುತ್ತಾರೆ.

ಆದರೆ ಸೂಕಿ ಕೂಡಾ ಗಾಂಧಿ ಮತ್ತು ಮಂಡೇಲಾ ಇರುವ ಪಟ್ಟಿಗೆ ಸೇರುತ್ತಾರೆಯೇ? ಈ ಪ್ರಶ್ನೆಗೆ ಈಗಲೇ ಉತ್ತರ ಸಿಗುವುದು ಕಷ್ಟ. ಏಕೆಂದರೆ ಈಗ ತಾನೇ ಸುಮಾರು 20 ವರ್ಷಗಳ ನಂತರ ಹೊರಬಂದಿರುವ ಸೂಕಿ ಈಗಿನ ಬರ್ಮಾದ ಜನರ ನೋವುಗಳಿಗೆ, ಕಷ್ಟಗಳಿಗೆ, ಅಗತ್ಯಗಳಿಗೆ ಹೇಗೆ ಸ್ಪಂದಿಸುತ್ತಾರೆಂದು ನೋಡಬೇಕಿದ. ಹಾಗೆಯೇ ಬರ್ಮಾದ ಸೈನ್ಯಾಡಳಿತ ಸೂಕಿಗೆ ಎಷ್ಟು ಸ್ವಾತಂತ್ರ್ಯ ಕೊಡುತ್ತದೆ ಎಂಬುದನ್ನೂ ಕಾದುನೋಡಬೇಕು.

ಆದರೆ ಒಂದಂತೂ ಸತ್ಯ. ಸೂಕಿ ತಮ್ಮ ನಿಲುವುಗಳಲ್ಲಿ ಕಿಂಚಿತ್ತೂ ಬದಲಾವಣೆಗಳನ್ನು ಮಾಡಿಕೊಂಡಿಲ್ಲ. ಒಂದು ನಿಜವಾದ ಪ್ರಜಾಪ್ರಭುತ್ವಕ್ಕೆ ಅಗತ್ಯವಾಗಿರುವುದು ವಾಕ್ ಸ್ವಾತಂತ್ರ್ಯವೆಂದು ಬಿಡುಗಡೆಗೊಂಡ ದಿನವೇ ಮತ್ತೆ ಉಚ್ಚರಿಸಿರುವ ಸೂಕಿ "ನಾಯಕರು ಎಂದೂ ಜನರ ನಿಯಂತ್ರಣದಲ್ಲಿರಬೇಕೇ ಹೊರತು ನಾಯಕರ ನಿಯಂತ್ರಣದಲ್ಲಿ ಜನ ಇರಬಾರದು. ನನ್ನನ್ನು ಜನರೇ ನಿಯಂತ್ರಿಸಲಿ ಎಂದು ಆಶಿಸುತ್ತೇನೆ. ನಿಜವಾದ ಪ್ರಜಾಪ್ರಭುತ್ವ ಕಾರ್ಯರೂಪಕ್ಕೆ ಬರುವುದೇ ಅಂತಹ ನಿಯಂತ್ರಣದಿಂದ" ಎಂದಿದ್ದಾರೆ.

ಆದರೆ ಬರ್ಮಾ ಜನರ ಮೇಲೆ ಸೂಕಿಯವರ ಪ್ರಭಾವವನ್ನು ನಿಯಂತ್ರಿಸುವುದನ್ನೇ ಅಲ್ಲಿನ ಲಷ್ಕರಿ ಸರ್ಕಾರ ತನ್ನ ಮುಖ್ಯ ಗುರಿಯಾಗಿಸಿಕೊಂಡಿದೆ. ಅವರನ್ನು ಗೃಹಬಂಧನದಲ್ಲಿಟ್ಟಿದ್ದಾಗ ದೇಶದ ಯಾವ ಭಾಗದಲ್ಲೂ ಯಾರೂ ಸೂಕಿ ಹೆಸರನ್ನು ಎತ್ತದಂತೆ, ಅವರ ಭಾವಚಿತ್ರಗಳನ್ನು ನೋಡದಂತೆ ನಿಷೇಧವನ್ನು ಹೇರಲಾಗಿತ್ತು. ಹಾಗೆಯೇ ಇತ್ತೀಚೆಗೆ 20 ವರ್ಷಗಳ ನಂತರ ನಡೆದ ಚುನಾವಣೆಗಳಲ್ಲಿ ಸೂಕಿಯವರ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ (ಎನ್‌ಎಲ್‌ಡಿ) ಪಕ್ಷ ಸ್ಪರ್ಧಿಸದಂತೆ ಕಾನೂನನ್ನು ಜಾರಿಗೆ ತಂದಿದೆ. ಅಷ್ಟೇ ಅಲ್ಲ; ಬರ್ಮಾದ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಶೇಕಡ 25 ಜನಪ್ರತಿನಿಧಿಗಳು ಸೈನ್ಯದವರೇ ಆಗಿರಬೇಕೆಂದು, ಯಾವುದೇ ಮುಖ್ಯ ನಿರ್ಧಾರಕ್ಕೆ ಶೇಕಡ 75ರಷ್ಟು ಜನಪ್ರತಿನಿಧಿಗಳ ಒಪ್ಪಿಗೆಯಿರಬೇಕು ಎಂದು ಸಂವಿಧಾನವನ್ನು ತಿರುಚಲಾಗಿದೆ. ಇದೆಲ್ಲದರ ಅರ್ಥ ಸೂಕಿ ಮತ್ತು ಬರ್ಮಾದ ಜನ ತಮ್ಮ ನ್ಯಾಯಸಮ್ಮತ ಹಕ್ಕು ಮತ್ತು ನೈಜ ಪ್ರಜಾಪ್ರಭುತ್ವಕ್ಕೆ ಎಷ್ಟೇ ಹೋರಾಡಿದರೂ ಎಲ್ಲದರ ಮೇಲೆ ಸೈನಾಧಿಕಾರಿಗಳೇ ನಿಯಂತ್ರಣ ಹೊಂದಿರುವಂತೆ ನೋಡಿಕೊಳ್ಳಲಾಗಿದೆ.

ಇದೆಲ್ಲದರ ಮಧ್ಯೆ ಕಳೆದ ಎರಡು ದಶಕಗಳಲ್ಲಿ ಬರ್ಮಾ ಸೇರಿದಂತೆ ಇಡೀ ಜಗತ್ತಿನ ಆರ್ಥಿಕ ಮತ್ತು ರಾಜಕೀಯ ನೀತಿಗಳು ಬದಲಾಗಿವೆ. ಒಂದೆಡೆ ಸರ್ವಾಧಿಕಾರಿಗಳನ್ನು ಬೆಂಬಲಿಸುವ ಜಗತ್ತಿನ ದೊಡ್ಡಣ್ಣ ಅಮೆರಿಕಾ ಇನ್ನೊಂದೆಡೆ ಸೂಕಿಯವರ ಹೋರಾಟವನ್ನು ಬೆಂಬಲಿಸುತ್ತಿದೆ. ಆದರೆ ಅದೇ ಹೊತ್ತಿಗೆ ಬರ್ಮಾದಲ್ಲಿರುವ ಹೇರಳ ನೈಸರ್ಗಿಕ ಸಂಪತ್ತಿನ ಮೇಲೆ ಕಣ್ಣುಹಾಕಿರುವ ಚೀನಾ ಬರ್ಮಾದ ಸೈನ್ಯಾಡಳಿತವನ್ನು ಬೆಂಬಲಿಸುತ್ತಿದೆ. ಈ ಮಧ್ಯೆ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಕರೆಸಿಕೊಂಡಿರುವ ಭಾರತ ಕೂಡಾ ತನ್ನ ಹಿಂದಿನ ನಿಲುವನ್ನು ಬದಲಾಯಿಸಿಕೊಂಡು ಸೂಕಿಯ ಹೋರಾಟವನ್ನು ಕಡೆಗಣಿಸಿ ಆ ದೇಶದ ಲಷ್ಕರಿ ಆಡಳಿತದೊಂದಿಗೆ ಹಲವಾರು ಒಪ್ಪಂದಗಳಿಗೆ ಸಹಿ ಹಾಕಿದೆ.

ಕಳೆದ 20 ವರ್ಷಗಳಲ್ಲಿ ಸೂಕಿ ತನ್ನ ಮಕ್ಕಳನ್ನು, ಮೊಮ್ಮಕ್ಕಳನ್ನು ನೋಡಿಲ್ಲ, ಮಾತನಾಡಿಸಿಲ್ಲ. ಟಿವಿ, ಕಂಪ್ಯೂಟರ್, ಮೊಬೈಲ್‌ನಂತಹ ಸಂಪರ್ಕ ಸಾಧನಗಳಿಂದಲೂ ದೂರವಿದ್ದ ಅವರಿಗೆ ಜಗತ್ತು ಎಷ್ಟು ಬದಲಾಗಿದೆ ಎಂಬುದರ ಅರಿವಿಲ್ಲ. ಮುಖ್ಯವಾಗಿ ಇವತ್ತಿನ ಬರ್ಮಾದ ಲಕ್ಷಾಂತರ ಯುವಕರಿಗೆ ಸೂಕಿಯ ಪರಿಚಯವಿಲ್ಲ... ಎಲ್ಲದಕ್ಕಿಂತ ಮುಖ್ಯವಾಗಿ ಅವರನ್ನು ಎಷ್ಟುಕಾಲ ಸ್ವತಂತ್ರರಾಗಿರಲು ಬರ್ಮಾದ ಲಷ್ಕರಿ ಆಡಳಿತ ಬಿಟ್ಟಿರುತ್ತದೆ ಎಂಬ ಗ್ಯಾರಂಟಿಯೂ ಇಲ್ಲ.

ಇಂತಹ ಪರಿಸ್ಥಿತಿಯಲ್ಲೂ ಅದೇ ಮುಗ್ಧ ನಗು ಬೀರುತ್ತಾ, ಅದೇ ಮುಕ್ತ ಮನೋಭಾವವನ್ನು ತೋರುತ್ತಾ, ತನ್ನ ದೇಶದಲ್ಲಿ ದಬ್ಬಾಳಿಕೆ ನಿಂತು ನೈಜವಾದ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರಬೇಕೆಂದು ಒತ್ತಾಯಿಸಿದ್ದಾರೆ ಸೂಕಿ. ಅದು ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ.

ಆದರೆ ಸೂಕಿ ಬಿಡುಗಡೆಗೊಂಡಿದ್ದನ್ನು ನೋಡಿ ಜಗತ್ತಿನಾದ್ಯಂತ ಲೆಕ್ಕವಿಲ್ಲದಷ್ಟು ಜನರಿಗೆ ನನಗಾದಷ್ಟೇ ಸಂತೋಷವಾಗಿದ್ದು ಮಾತ್ರ ನಿಜ... ●


ರೆಡ್ಡಿಗಳ ಎನ್‌ಸಿಪಿ ಪಕ್ಷ ಠುಸ್ ಅಂತು!

ರಾಜ್ಯ ಬಿಜೆಪಿಗಳ ನಿತ್ಯ ಕದನದಲ್ಲಿ ಭಾಗಿಯಾಗುತ್ತಲೇ ಬಳ್ಳಾರಿ ರೆಡ್ಡಿಗಳು ಕಳೆದ ವಾರ ಒಂದು ರಾಜಕೀಯ ಸರ್ಕಸ್ ನಡೆಸಲು ಹೋಗಿ ವಿಫಲರಾಗಿದ್ದಾರೆ.

ಕೇಂದ್ರ ಕೃಷಿ ಸಚಿವ ಶರದ್ ಪವಾರ್‌ರ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) ಯ ಶಾಖೆಯನ್ನು ಕರ್ನಾಟಕದಲ್ಲಿ ಆರಂಭಿಸಿ ತಾವು ಅದರ ನಾಯಕರಾಗುವ ಪ್ಲಾನ್ ಅದಾಗಿತ್ತು. ಆದರೆ ಶರದ್ ಪವಾರ್ 'ನೋ' ಅಂದಿದ್ದಾರೆ.

ಯಡ್ಡಿಯ ಕಿರುಕುಳ, ಗಣಿ ಹಗರಣಗಳು, ಐ.ಟಿ. ದಾಳಿ, ಅಪಖ್ಯಾತಿಗಳಿಂದ ಈಗ ಕುಗ್ಗಿಹೋಗಿರುವ ರೆಡ್ಡಿಗಳು ತಾವು ಮತ್ತೆ ತಲೆಎತ್ತಬೇಕೆಂದರೆ ತಮ್ಮದೇ ನಾಯಕತ್ವದಲ್ಲಿ ಒಂದು ರಾಜಕೀಯ ಪಕ್ಷ ಇದ್ದರೆ ಲೇಸು ಎಂಬ ನಿರ್ಧಾರಕ್ಕೆ ಬಂದಿದ್ದರು. ನವೆಂಬರ್ ತಿಂಗಳ ಮೊದಲ ವಾರದಲ್ಲಿ ಅದರ ಪ್ರಯತ್ನಗಳಿಗೂ ಚಾಲನೆ ನೀಡಲಾಗಿತ್ತು. ಎಲಾ ಅವಿವೇಕಿ ಬಿಜೆಪಿಗಳಂತೆಯೇ ಈ ರೆಡ್ಡಿಗಳೂ ಅದಕ್ಕಾಗಿ ಶಾಸ್ತ್ರ ಕೇಳುವ ಶಾಸ್ತ್ರವನ್ನೂ ಮಾಡಿಸಿದ್ದಾರೆ. ಟಿವಿಯಲ್ಲಿ ಕಣಿ ಹೇಳುವ ಸಚ್ಚಿದಾನಂದ ಬಾಬು ಎಂಬಾತನನ್ನು ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಬಳ್ಳಾರಿಗೆ ಕರೆಸಿಕೊಂಡ ರೆಡ್ಡಿಗಳು ಏನೇನೋ ಹೋಮ ಹವನ ಮಾಡಿಸಿದ್ದಾರೆ. ತಮ್ಮ ಜಾತಕ, ವಾಸ್ತು ಇತ್ಯಾದಿ ಹಾಳುಮೂಳುಗಳನ್ನೇ ರಾಶಿ ಹಾಕಿಕೊಂಡು ಜ್ಯೋತಿಷಿಯ ಸಲಹೆ ಕೇಳಿದ್ದಾರೆ.

ಆದರೆ ಕರ್ನಾಟಕದಲ್ಲಿ ಎನ್‌ಸಿಪಿ ಶುರುಮಾಡಬೇಕೆಂಬ ರೆಡ್ಡಿಗಳ ಬೇಡಿಕೆಗೆ ಶರದ್ ಪವಾರ್ ಉತ್ಸಾಹ ತೋರಲಿಲ್ಲ. ಪವಾರ್‌ಗೆ ಎಂದಾದರೂ ಒಂದು ದಿನ ಭಾರತದ ಪ್ರಧಾನಿಯಾಗಬೇಕೆಂಬ ಬಯಕೆ ಇದೆಯಾದರೂ ಅದು ರೆಡ್ಡಿಗಳ ಸಹವಾಸದಿಂದೇನೂ ಈಡೇರುವುದಿಲ್ಲ ಎನ್ನುವುದು ಪವಾರ್‌ಗೆ ಗೊತ್ತಿದೆ. ಅಲ್ಲದೆ ರೆಡ್ಡಿಗಳ ಕಳ್ಳಗಣಿ ದಂಧೆ, ಜಾತಿ ಬೆಂಬಲ ಇರದಿರುವುದೂ, ಇನ್ನೊಂದು ಕಾರಣವಾಗಿತ್ತು ಪವಾರ್ 'ನೋ' ಅನ್ನಲು.



ಈಗ ರೆಡ್ಡಿಗಳು ಎನ್‌ಸಿಪಿ ಕನಸನ್ನು ಬಿಟ್ಟು ಮುಂದಿನ ಹೆಜ್ಜೆ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದಾರೆ. ಅವರಿಗಿರುವ ಭಯ ಏನೆಂದರೆ ಯಡ್ಡಿ-ಈಶ್ವರಪ್ಪನಂತೆಯೇ 'ಕಂದಾಯ' ಮಂತ್ರಿ ಕರುಣಾಕರ ರೆಡ್ಡಿಯೂ ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ನೂರಾರು ಎಕರೆ ಸರ್ಕಾರಿ ಭೂಮಿ ಕದ್ದಿದ್ದು ಆ ಹಗರಣಗಳು ಬಯಲಾದರೆ ಹೊಸ ಕಷ್ಟ ಬರುತ್ತದಲ್ಲಾ ಎಂಬುದೇ ಆಗಿದೆ. ನಾಳೆ ಬಿಜೆಪಿ ಸರ್ಕಾರ ಆರ್‌ಎಸ್‌ಎಸ್‌ನವರ ಹಿಡಿತಕ್ಕೆ ಹೋದರೆ ರೆಡ್ಡಿಗಳ ಕಷ್ಟ ಇನ್ನೂ ಜಾಸ್ತಿಯಾಗಲಿದೆ. ಅವರ ಕಳ್ಳ ಗಣಿಗಾರಿಕೆಯಿಂದ ಮೊದಲಿನಂತೆ ಹಣ ಹರಿದುಬರುತ್ತಿಲ್ಲ. ಓಬಳಾಪುರಂ ಮೈನಿಂಗ್ ಕಂಪೆನಿಯ ನೌಕರರಿಗೆ ಕಳೆದ ಎರಡು ಮೂರು ತಿಂಗಳಿನಿಂದ ಸಂಬಳವನ್ನೇ ಕೊಟ್ಟಿಲ್ಲ ಈ ರೆಡ್ಡಿಗಳು. ಅವರ ಮಹತ್ವಾಕಾಂಕ್ಷೆಯ ಬ್ರಾಹ್ಮಿಣಿ ಸ್ಟೀಲ್ಸ್ ಕಾರ್ಖಾನೆ ಈಗಲೂ ಕೋಮಾ ಸ್ಥಿತಿಯಲ್ಲಿದೆ. ರೆಡ್ಡಿ ರಾಮುಲು ದಂಪತಿಗಳ 'ಜನಶ್ರೀ' ಟಿವಿ ಈಗ ಪ್ರಚಾರದಲ್ಲೂ ಇಲ್ಲ.

ಇದೆಲ್ಲ ಇಕ್ಕಟ್ಟು ಬಿಕ್ಕಟ್ಟುಗಳಿಂದ ಪಾರಾಗುವ ಸಲುವಾಗಿ ರೆಡ್ಡಿ ಗ್ಯಾಂಗ್ ಹುಡುಕಾಡುತ್ತಿದೆ. ರೆಡ್ಡಿಗಳ ಆಪ್ತವಲಯದಲ್ಲಿ ಈಗ ಕೇಳಿಬರುತ್ತಿರುವ ಮಾತೆಂದರೆ ಕೂಡ್ಲಿಗಿಯ ಶಾಸಕ ನಾಗೇಂದ್ರ ಹಾಗೂ ಕಂಪ್ಲಿಯ ಶಾಸಕ ಸುರೇಶ್ ಬಾಬುರವರನ್ನು ಏನಾದರೂ ನೆಪಮಾಡಿ ಹೊರಹಾಕಿದಂತೆ ಸೀನ್ ಸೃಷ್ಟಿಸಿ ಅವರಲ್ಲೊಬ್ಬ ಜೆಡಿಎಸ್‌ಗೂ ಮತ್ತೊಬ್ಬ ಕಾಂಗ್ರೆಸ್‌ಗೂ ಹೋಗಿ ಸೇರಿಕೊಳ್ಳುವಂತೆ ಮಾಡುವುದು. ಮುಂದೆ ತಮ್ಮ ಗ್ಯಾಂಗ್‌ನ ಸದಸ್ಯರೇ ಬಳ್ಳಾರಿಯ ಮಟ್ಟಿಗೆ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇರುವಂತೆ ವ್ಯವಸ್ಥೆ ಮಾಡಿಕೊಳ್ಳುವುದೇ ಆಗಿದೆ.

ಈ ಮಧ್ಯೆ, ಕುಮಾರಸ್ವಾಮಿಯ ಜೊತೆಗಿರುವ ಬಳ್ಳಾರಿಯವನೇ ಆದ ಕುಡಿತಿನಿ ಸೀನ ಎಂಬುವನನ್ನು ರೆಡ್ಡಿಗಳು ಬುಟ್ಟಿಗೆ ಹಾಕಿಕೊಂಡಿದ್ದಾರೆ. ಈ ಸೀನ ಡಬಲ್ ಏಜೆಂಟ್ ರೀತಿ ಕೆಲಸ ಮಾಡುತ್ತಾ ಕುಮಾರಸ್ವಾಮಿಯ ಆಪ್ತ ವಲಯದೊಳಗೆ ನಡೆಯುವ ಚರ್ಚೆ, ರಾಜಕೀಯ ತಂತ್ರಗಳ ಮಾಹಿತಿ ಪಡೆದು ಅದನ್ನೇ ರೆಡ್ಡಿಗಳಿಗೂ ತಲುಪಿಸಿ ಕಾಸು ಮಾಡಿಕೊಳ್ಳುತ್ತಿದ್ದಾನೆ. ಬಿಜೆಪಿ ಭಿನ್ನರೊಂದಿಗೆ ಕುಮಾರಸ್ವಾಮಿ ಯಾವಾಗ್ಯಾವಾಗ ಹೇಗೆ ವ್ಯವಹರಿಸುತ್ತಿದ್ದರೆಂಬ ಮಾಹಿತಿಗಳನ್ನೂ ರೆಡ್ಡಿಗೆ ತಲುಪಿಸಿದವನೇ ಈ ಕುಡಿತಿನಿ ಸೀನ. ಕುಮಾರಸ್ವಾಮಿಯ ಗೋವಾ ಯಾತ್ರೆ ಯಶಸ್ವಿಯಾಗದಿರಲು ಈ ಸೀನ ರೆಡ್ಡಿಗಳಿಗೆ ಕೊಟ್ಟಿದ್ದ ರಹಸ್ಯ ಮಾಹಿತಿಗಳೇ ಕಾರಣ ಎನ್ನಲಾಗಿದೆ.

ಈ ಮಧ್ಯೆ ಕೇಂದ್ರ ಚುನಾವಣಾ ಆಯೋಗ ರೆಡ್ಡಿ ಗ್ಯಾಂಗಿನ ವಿರುದ್ಧದ ದೂರುಗಳ ತನಿಖೆಯನ್ನು ಆರಂಭಿಸಿದೆ. ಒಟ್ಟಾರೆ ರೆಡ್ಡಿಗಳಿಗೀಗ ಎತ್ತ ನೋಡಿದರೂ ಆಪತ್ತೇ! ●

ಅಸೀಮ ದೇಶಭಕ್ತಿಯ ಪೋಸು ಕೊಡುತ್ತಲೇ ಅಧಿಕಾರಕ್ಕೇರಿದ ಬಿಜೆಪಿ ಇಂಚಿಂಚು ಬೆತ್ತಲಾಗುತ್ತಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರ ಹಗರಣಗಳು ಮಣಗಟ್ಟಲೆ ಹೊರಬೀಳುತ್ತಾ ಅಸಹ್ಯ ಹುಟ್ಟಿಸುತ್ತಿವೆ. ಇಂಥಾ ಸಂದರ್ಭದಲ್ಲಿ ಲಾಗಾಯ್ತಿನಿಂದಲೂ, ಪಾವಿತ್ರ್ಯ, ಶಿಸ್ತು ಮುಂತಾಗಿ ಒರಳಾಡುತ್ತಾ ಬಂದಿರುವ ಆರೆಸ್ಸೆಸ್ ಕೂಡಾ ತೆಪ್ಪಗಿದೆ. ಇದೆಲ್ಲದರ ಬಗ್ಗ ಒಂದು ಕಾಲದಲ್ಲಿ ಆರೆಸ್ಸೆಸ್‌ನಲ್ಲೇ ಇದ್ದು ಹೊರಬಂದವರು 'ಪತ್ರಿಕೆ'ಯೊಂದಿಗೆ ಹಂಚಿಕೊಂಡ ಅಭಿಪ್ರಾಯಗಳು ಇಲ್ಲಿವೆ...



ಆರೆಸ್ಸೆಸ್: ಹುಚ್ಚು ಹಿಡಿದ ಮುದಿಯರ ಸಂಘ

ಆರೆಸ್ಸೆಸ್‌ನ ಮಾಜಿ ದೊಣ್ಣೆ ನಾಯಕ ಮತ್ತು ಅದರ ಪಿತೃಸಮಾನನಾದ ಕೆ. ಸುದರ್ಶನ್ ಎಂಬ ಮುದಿಯ ಇತ್ತೀಚೆಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಬಗ್ಗೆ ಸಜ್ಜನರಾದ ಎಲ್ಲರಲ್ಲೂ ಹೇಸಿಗೆ ಹುಟ್ಟಿಸುವಂತಹ ಕಪೋಲಕಲ್ಪಿತ ಆರೋಪಗಳನ್ನು ಮಾಡಿದ್ದಾನೆ. ಆತ ಮಾಡಿದ ಆರೋಪಗಳು ಎಷ್ಟು ಅಸಹ್ಯ ಹುಟ್ಟಿಸುವಂತಿವೆ ಎಂದರೆ ಅವುಗಳನ್ನು ಪ್ರಕಟಿಸಲು / ಪ್ರಸಾರ ಮಾಡಲು ಬಹಳಷ್ಟು ಮಾಧ್ಯಮಗಳು ಹಿಂಜರಿದವು.


ಕೆಲ ಮಾಧ್ಯಮಗಳು ಸಂಘ ಪರಿವಾರದ ಜೊತೆ ಹೊಕ್ಕು ಬಳ್ಳಿ ಸಂಬಂಧ ಹೊಂದಿರುವುದರಿಂದ ಆರೆಸ್ಸೆಸ್‌ನ ಈ ಮಾಜಿ ನಾಯಕನ 'ಅಸಹ್ಯ'ವನ್ನು ವರದಿ ಮಾಡಿದರೆ ಚೆಡ್ಡಿಗಳ ನಿಜಬಣ್ಣ ಸಾಮಾನ್ಯ ಜನರಿಗೆ ಗೊತ್ತಾಗಿಬಿಡುತ್ತದೆ ಎಂಬ ಆತಂಕದಿಂದಲೂ ಅದನ್ನು ಮರೆಮಾಚಿದ್ದೂ ಆಯಿತು.

ಆದರೆ ಆರೆಸ್ಸೆಸ್‌ನ ನೀಚ ಬುದ್ಧಿ, ಪರಧರ್ಮ ದ್ವೇಷ, ಪುರೋಹಿತ ಶಾಹಿ ಮನೋಧರ್ಮ, ಅಮಾನವೀಯ ಮತ್ತು ಅನಾಗರಿಕ ಪ್ರವೃತ್ತಿಯನ್ನು ನಾವು ಸದಾ ವಿರೋಧಿಸುತ್ತ ಬಂದಿರುವುದರಿಂದ ಸುದರ್ಶನ್ ಎಂಬ ಚೆಡ್ಡಿ ನಾಯಕ ಸೋನಿಯಾ ಗಾಂಧಿ ಬಗ್ಗೆ ಭೋಪಾಲ್‌ನಲ್ಲಿ ನಡೆದ ಸಭೆಯಲ್ಲಿ ಕಾರಿಕೊಂಡದ್ದೇನು ಎಂದು ಹೇಳುವುದುದಕ್ಕೆ ಹಿಂಜರಿಯುವುದಿಲ್ಲ.

ಅಂದು ಸುದರ್ಶನ್ ಹೇಳಿದ್ದರ ಸಾರಾಂಶ: ಸೋನಿಯಾ ಗಾಂಧಿ ಓರ್ವ ಫಾರಿನ್ ಏಜೆಂಟ್, ಆಕೆ ತನ್ನ ತಂದೆಗೆ ಹುಟ್ಟಿದವಳಲ್ಲ, ಆಕೆಯ ಅತ್ತೆ ಮಾಜಿ ಪ್ರಧಾನಿ ಇಂದಿರಾ ಗಾಂಧಿಯ ಹತ್ಯೆಯಲ್ಲೂ ಸೋನಿಯಾ ಕೈವಾಡವಿತ್ತು, ಆಕೆಯ ಪತಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಸೋನಿಯಾರನ್ನು ತೊರೆಯಬೇಕೆಂದಿದ್ದರು, ಅದಕ್ಕೆ ಅವರಿಗೆ ನೀಡಲಾಗಿದ್ದ '2' ಕ್ಯಾಟಗರಿ ಭದ್ರತೆಯನ್ನು ಹಿಂತೆಗೆಯುವಲ್ಲಿ ಸೋನಿಯಾ ಕೈವಾಡವಿತ್ತಲ್ಲದೆ ಹಾಗೆ ಮಾಡುವ ಮೂಲಕ ತನ್ನ ಪತಿ ರಾಜೀವ್ ಗಾಂಧಿಯವರ ಹತ್ಯೆಗೂ ಕಾರಣರಾದರು.

ಈ ಎಲ್ಲಾ ಆರೋಪಗಳಿಗೆ ಏನು ಸಾಕ್ಷಿ ಎಂದು ಹಲವರು ಕೇಳಿದ್ದಕ್ಕೆ ಸುದರ್ಶನ್ ಎಂಬ ದೊಗಳೆ ಚೆಡ್ಡಿ ನೀಡಿದ ಪತ್ತೇದಾರಿ ಉತ್ತರ, "ಸಾಂದರ್ಭಿಕ ಸಾಕ್ಷ್ಯಗಳು"

ಸುದರ್ಶನ್‌ನ ಇಂತಹ ಆರೋಪಗಳಿಂದ ಆತ ಎಂತಹ ದುಷ್ಟ



ಎಂಬುದು ಮಾತ್ರವಲ್ಲ, ಅದರ ಜೊತೆಗೆ ಆರೆಸ್ಸೆಸ್‌ನ ನಿಜವಾದ 'ಸಂಸ್ಕೃತಿ' ಎಂತಹದ್ದು ಎಂದೂ ಸಾಬೀತಾಗುತ್ತದೆ. ಅಷ್ಟೇ ಅಲ್ಲ, ಅದನ್ನು ಸ್ವತಃ ಆರೆಸ್ಸೆಸ್ ಕೂಡ ಸಾರ್ವಜನಿಕವಾಗಿ ದೃಢಪಡಿಸಿದೆ.

ಇಲ್ಲಿಯತನಕ ಈ ಅಸಂಬದ್ಧ, ಅಶ್ಲೀಲ ಆರೋಪಗಳಿಗೆ ಆರೆಸ್ಸೆಸ್ ಹಾಲಿ ದೊಣ್ಣೆನಾಯಕ ಭಾಗವತ್ ಹುಟಿಪಿಟಿಕ್ ಎಂದಿಲ್ಲ. ಭಾಗವತ್‌ನ ನಂತರದ ಎರಡನೇ ಮುಖ್ಯ ಚೆಡ್ಡಿ ನಾಯಕ ಸುರೇಶ್ ಜೋಷಿ ಎಂಬಾತ ಒಂದು ಹೇಳಿಕೆಯನ್ನು ನೀಡಿದ್ದಾನೆ. ಅದು ಹೀಗಿದೆ: "ಗೌರವಾನ್ವಿತ ಸುದರ್ಶನ್‌ಜೀ ಅವರು ಶ್ರೀಮತಿ ಸೋನಿಯಾ ಗಾಂಧಿ ಅವರ ಬಗ್ಗೆ ಮಾಡಿರುವ ಹೇಳಿಕೆಗಳು ಆರೆಸ್ಸೆಸ್‌ನ ಅಭಿಪ್ರಾಯಗಳಲ್ಲ, ಅವರ ಹೇಳಿಕೆ ಯಾರ ಮನಸ್ಸಿಗಾದರೂ ನೋವುಂಟು ಮಾಡಿದರೆ ಅದು ವಿಷಾದಕರ. ಆರೆಸ್ಸೆಸ್ಸಿ[ನ] ಪ್ರಧಾನ ಕಾರ್ಯದರ್ಶಿಯಾಗಿ ಇದರ ಬಗ್ಗೆ ವಿಷಾ[ದ] ವ್ಯಕ್ತಪಡಿಸುತ್ತೇನೆ ಮತ್ತು ಎಲ್ಲರೂ ಶಾಂತಿ ಮತ[್ತು] ಸುವ್ಯವಸ್ಥೆಯನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ."

ಈ ಹೇಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿ. ಇದರಲ್ಲೆಲ್ಲೂ ಸುದರ್ಶನ್ ಮಾಡಿದ್ದ ಆರೋಪಗಳನ್ನು ಸುರೇಶ್ ಜೋ[ಷಿ] ಖಂಡಿಸಿಯೇ ಇಲ್ಲ! ಅಂದರೆ: ಓರ್ವ ಮಗಳು, ಸೊಸ[ೆ,] ಮಡದಿ, ತಾಯಿ ಮತ್ತು ಈ ದೇಶದಲ್ಲಿ ಇವತ್ತು ಓವ[ರ್] ಪ್ರಮುಖ ಮಹಿಳೆಯಾಗಿರುವ ಸೋನಿಯಾ ಗಾಂಧಿ ತರಹ[ದ] ಮಹಿಳೆ ಬಗ್ಗೆ ಆರೆಸ್ಸೆಸ್ಸಿನ ಪ್ರಮುಖನಾದ ಸುದರ್ಶನ[್] ಮಾಡಿದ ಆರೋಪಗಳನ್ನು ಆರೆಸ್ಸೆಸ್ ಖಂಡಿಸುವುದಿಲ್ಲ[,] ಬದಲಾಗಿ ಆತನನ್ನು 'ಗೌರವಾನ್ವಿತ' ಎಂದೂ ಕರೆಯ[ಲಾಗುತ್ತದೆ]!! ಇಂತಹ ಪುರಷರು ಇನ್ನು ಸಾಮಾನ್ಯ ಭಾರತೀಯ ಮಹಿಳೆಯರನ್ನು ರಕ್ಷಿಸುವುದಿರಲಿ, ಅವರಿ[ಗೆ] ಕನಿಷ್ಠ ಗೌರವ ಕೊಡುವುದಾದರೂ ಹೇಗೆ?

ಮಹಿಳೆಯರ ಬಗ್ಗೆ ಇಂತಹ ತುಚ್ಛ ಮನೋಭಾವವನ್ನು ಹೊಂದಿರುವ ಆರೆಸ್ಸೆಸ್ ತಾನು ಹೇಳಿಕೊಳ್ಳುವಂತೆ ಕೇವಲ ಒಂದು 'ಸಾಂಸ್ಕೃತಿಕ ಸಂಘಟನೆ' ಆಗಿದ್ದರೆ ಸುದರ್ಶನ್ ಎಂಬ ತಲೆತಿರುಕನ ಹೇಳಿಕೆಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವ ಅಗತ್ಯವೇ ಇರಲಿಲ್ಲ, ಆದರೆ ನಮ್ಮ ದೇಶದ ಯಾವುದೋ ಮೂಲೆಯಲ್ಲಿ ಕೆಲಸ ಮಾಡುತ್ತಿರುವ ಹುಚ್ಚರ ಸಂಘಟನೆ ಆರೆಸ್ಸೆಸ್ ಆಗಿಲ್ಲ; ಬದಲಾಗಿ ಅದು ಈ ದೇಶದ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಒಂದಾದ ಬಿಜೆಪಿಯನ್ನೇ ನಿಯಂತ್ರಿಸುತ್ತಿರುವ ಸಂಘಟನೆಯಾಗಿರುವುದರಿಂದ ಅದೆಷ್ಟು ಅಪಾತಕಾರಿ ಎಂಬುದನ್ನು ಈ ಪ್ರಕರಣ ಮತ್ತೆ ಮನವರಿಕೆ ಮಾಡಿಕೊಡುತ್ತದೆ. ಅದನ್ನು ಹಿರಿಯ ಪತ್ರಕರ್ತ ವೀರ್ ಸಾಂಘ್ವಿ ತಮ್ಮ ಲೇಖನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಆ ಲೇಖನದ ಸಾರಾಂಶ ಇಂತಿದೆ:

"ಚೆಡ್ಡಿ ವಲಯದ ಈ ಶೆರ್ಲಾಕ್ ಹೋಮ್ಸ್‌ನ ಆರೋಪಗಳು ಶುದ್ಧಾಂಗ ಸುಳ್ಳುಗಳು ಮಾತ್ರವಲ್ಲ, ಅದು ರೋಗಗ್ರಸ್ತ ಮನಸ್ಸಿನ ಸಂಕೇತ. ಸಮಾಜದಲ್ಲಿ ಇಂತಹ ರೋಗಗ್ರಸ್ತ ಮನಸ್ಸುಗಳಿಗೆ ಯಾವ ಕೊರತೆಯೂ ಇಲ್ಲ. ಆದರೆ ಸುದರ್ಶನ್ ಓರ್ವ ಸಾಮಾನ್ಯ ಹುಚ್ಚನೂ ಅಲ್ಲ, ತಲೆತಿರುಕನೂ ಅಲ್ಲ, ಬದಲಾಗಿ ಆತ ಹಲವಾರು ವರ್ಷಗಳ ಕಾಲ ಆರೆಸ್ಸೆಸ್ ಅನ್ನು ಮುನ್ನಡೆಸಿದಾತ. ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಅದನ್ನು ನಿಯಂತ್ರಿಸುತ್ತಿದ್ದವನು. ಪ್ರಧಾನಿ ವಾಜಪೇಯಿಯನ್ನೇ ತರಾಟೆಗೆ ತೆಗೆದುಕೊಳ್ಳುತ್ತಿದ್ದವನು. ಇತರ[ೆ]

"ಕಪಿಮುಷ್ಠಿಯಲ್ಲಿ ಜಯದೇವ್"


● ನಾರಾಯಣ ಶರ್ಮ ಆರೋಪ

RSS ಅಂತರಂಗ

ಸಂದರ್ಶನ

ಕರ್ನಾಟಕ ಬಿಜೆಪಿ ನಾಯಕರ ಭ್ರಷ್ಟಾಚಾರ ಹಾಗೂ ದಿನನಿತ್ಯದ ಹಗರಣಗಳು ಒಳಜಗಳ-ಭಿನ್ನಮತಕ್ಕೆ ಹಾದಿ ಮಾಡಿಕೊಟ್ಟಿವೆ. ಈ ಭಿನ್ನಮತ ಈಗ RSS ಕ್ಯಾಂಪ್ ಅನ್ನು ಪ್ರವೇಶಿಸಿದೆ.

ಬಿಜೆಪಿಯ ಮಾತೃಸಂಸ್ಥೆ RSS ಹಾಗೂ ಅದರ ನಾಯಕರ ಕುರಿತಂತೆ ಹಿರಿಯ RSS ಕಾರ್ಯಕರ್ತ ನಾರಾಯಣ ಶರ್ಮ 'ಲಂಕೇಶ್'ನೊಂದಿಗೆ ಮಾತನಾಡಿರುವ ವಿವರ ಇಲ್ಲಿದೆ.



ಲಂಕೇಶ್: ನಾರಾಯಣ ಶರ್ಮ ಅವರೆ, RSSನ ಒಬ್ಬ ಹಿರಿಯ ಸಂಘಟಕರಾಗಿರುವ ನೀವು ಈಗ ಸಂಘ ಪರಿವಾರ ಹಾಗೂ ಬಿಜೆಪಿ ನಾಯಕರ ವಿರುದ್ಧ ದನಿ ಎತ್ತುತ್ತಿದ್ದೀರಿ. ನಿಮ್ಮ ಆಕ್ಷೇಪಣೆ ಯಾರ ಬಗ್ಗೆ ಮತ್ತು ಯಾಕೆ?

ನಾ. ಶರ್ಮ: ನಾನು ಹಿರಿಯನಲ್ಲ, ಸಂಘದ ಸಾಮಾನ್ಯ ಕಾರ್ಯಕರ್ತ ಮಾತ್ರ. ನಾನು ಸಂಘದ ವಿರುದ್ಧ ಮಾತಾಡಲ್ಲ, ಹಿಂದೂತ್ವದ ಬಗ್ಗೆ ಮಾತಾಡಬೇಕಿದೆ. ಇವತ್ತಿನ ರಾಜಕಾರಣದ ವಿಶ್ಲೇಷಣೆ ಆಗಬೇಕಿದೆ. ಸಂಘದ ಹೊಣೆ ಏನು ಅನ್ನುವುದು ಚರ್ಚೆಯಾಗಬೇಕಿದೆ.

ಲಂ: ಈಗಿನ ಗೊಂದಲಕ್ಕೆ ನಿಮ್ಮ ಪ್ರಕಾರ ಯಾರು ಹೊಣೆ?

ನಾ. ಶರ್ಮಾ: ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂತೋಷ್.

ಲಂ: ಹೇಗೆ?

ನಾ. ಶರ್ಮ: ಅವರಿಗೆ ರಾಜಕೀಯ ಆಕಾಂಕ್ಷೆ ಹೆಚ್ಚಾಗಿದೆ. 2000 ನೇ ಇಸವಿಯಿಂದಲೂ ನಾನವರನ್ನು ಗಮನಿಸುತ್ತಿದ್ದೇನೆ. ಆಗ ಪಂಡಿತ್ ದೀನ ದಯಾಳ್ ಉಪಾಧ್ಯಾಯರ ವೇದಿಕೆ ರಚನೆ ಸಮಯದಲ್ಲಿ ಸಂತೋಷ್ ಮುಂಚೂಣಿಯಲ್ಲಿ ಕಾಣಿಸಿಕೊಂಡಿದ್ದರು. ಆಗಲೇ ಅವರಿಗೆ ಮುಖ್ಯಮಂತ್ರಿಯಾಗುವ ಕನಸಿತ್ತು.

ಲಂ: ಅದು ಹೇಗೆ ಸಾಧ್ಯ? ಈತ ಯಾರಂತಾನೇ ಜನರಿಗೆ ಗೊತ್ತಿಲ್ಲ?

ನಾ. ಶರ್ಮ: ಇರಬಹುದು, ಆದರೆ ಪಾರ್ಟಿ ಲೆವೆಲ್‌ನಲ್ಲಿ, ಮತ್ತು ಸಂಘದೊಳಗೆ ಎಲ್ಲರಿಗೂ ಗೊತ್ತಿದೆ. ಈತನ ಹಣಕಾಸಿನ ವ್ಯವಹಾರಗಳ ಬಗ್ಗೆ 'ಲಂಕೇಶ್'ನಲ್ಲೂ ಒಮ್ಮೆ ವರದಿಯಾಗಿತ್ತು, ಸಂಘದ ಪ್ರಚಾರಕ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಕೂತರೆ ಬಹಳ ಶಕ್ತಿಶಾಲಿಯಾಗಿಬಿಡುತ್ತಾರೆ. ಎ.ಕೆ. ಸುಬ್ಬಯ್ಯ, ಬಿ. ಶಿವಪ್ಪ, ಗೋವಿಂದಾಚಾರ್ಯ, ಉಮಾ ಭಾರತಿ ಮುಂತಾದವರು ಹೊರಬರಲು ಸಂತೋಷ್ ತರಹದ ಹುದ್ದೆಯಲ್ಲಿರುವವರೇ ಕಾರಣ. ಅದಕ್ಕೇ ಬಿಜೆಪಿ ರಾಜಕಾರಣಿಗಳು ಸಂತೋಷ್ ನೋಡಿ ಹೆದರುತ್ತಾರೆ.

ಲಂ: ಅದೆಲ್ಲಾ ಇರಲಿ, ಆದರೆ ಯಡಿಯೂರಪ್ಪ ಸರ್ಕಾರದ ಭ್ರಷ್ಟಾಚಾರಕ್ಕೆ ಕೊನೆಯೇ ಇರುವಂತೆ ಕಾಣುತ್ತಿಲ್ಲ, ಸಂಘ-ಸಂತೋಷ್ ಇದನ್ನೆಲ್ಲಾ ಪ್ರಶ್ನಿಸೋಲ್ವಾ, ಅಥವಾ ಅವರೂ ಶಾಮೀಲಾಗಿದ್ದಾರಾ?

ನಾ. ಶರ್ಮ: ನಿಮಗೊಂದು ಉದಾಹರಣೆ ಹೇಳ್ತೀನಿ. ನಮ್ಮಲ್ಲಿ ಗುರುದಕ್ಷಿಣೆ ಕಾರ್ಯಕ್ರಮ ಅಂತ ಒಂದಿದೆ. ಅದು ಸಮಾಜದ ಕೆಲಸಕ್ಕೆ ಅರ್ಪಿಸುವ ಹಣ. ಮೊದಮೊದಲು 'ಯಾರು ಎಷ್ಟು ಕೊಟ್ಟರು, ಯಾವ ಶಾಖೆ ಎಷ್ಟು ಹಣ ಸಂಗ್ರಹಿಸಿತು ಅನ್ನೋದನ್ನ ಲೆಕ್ಕವಿಡುವ ಅಥವಾ ಬರೆಯುವ ಅಭ್ಯಾಸವಿರಲಿಲ್ಲ. ಆಮೇಲೆ ಕವರ್ ಕೆಳಗಡೆ ಗುಪ್ತವಾಗಿ ಸಂಖ್ಯೆ ಹಾಕೋ ಅಭ್ಯಾಸ ಶುರುವಾಯಿತು. ಆಮೇಲೆ ಹೆಚ್ಚು ಹಣ ಸಿಗುತ್ತಿದ್ದ ಶಾಖೆಗಳಿಗೆ ಟಾರ್ಗೆಟ್ ಕೊಡಲು ಶುರು ಮಾಡಿದರು. ಅದೀಗ ವಸೂಲಿ ರೀತಿ ಆಗಿದೆ. ಅಬ್ಬಾಸ್ ಆಲಿ ಬೋಹ್ರಾ ಎನ್ನುವವ ಒಮ್ಮೆ ಲಕ್ಷಗಟ್ಟಲೆ ಹಣ ಕೊಟ್ಟ. ವಿಜಯದಶಮಿಯ ದಿನ ಅವನಿಗೆ ಗಣವೇಶ ಹಾಕಿಸಿಬಿಟ್ಟರು. ಕೆಲವೇ ತಿಂಗಳಲ್ಲಿ ಅವನನ್ನೇ ರಾಜ್ಯ ಬಿಜೆಪಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷನನ್ನಾಗಿಸಿದರು. ಇದೆಲ್ಲ ಹಣಕ್ಕಾಗಿ ಮಾಡಿದ ಕೆಲಸ. ಆ ಬೋಹ್ರಾನಿಗೆ ಯಾವ ರಾಷ್ಟ್ರೀಯ ಭಾವನೆ ಹಿತಾಸಕ್ತಿಗಳಿವೆ?

ಲಂ: ರೆಡ್ಡಿ ಬ್ರದರ್ಸ್ ಬಗ್ಗೆ ಸಂಘದ ನಿಲುವೇನು?

ನಾ. ಶರ್ಮ: ನಮಗಿದೆಲ್ಲಾ ಬಹಳ ನೋವಾಗಿದೆ. ಯಾರು ಭಾರತ ಮಾತೆಯ ಪೂಜಕರು ಎಂದು ಹೇಳಿಕೊಳ್ಳುತ್ತಿದ್ದಾರೊ ಅವರು ಭಾರತ ಮಾತೆಯ ಒಡಲನ್ನೇ ಬಗೆಯುತ್ತಿರುವವರನ್ನು ಮಂತ್ರಿಗಳನ್ನಾಗಿ ಮಾಡಿದ್ದಾರೆ. ಈ ರೆಡ್ಡಿಗಳು ಅನೇಕರಿಗೆ ಹಣ ಕೊಟ್ಟಿದ್ದಾರೆ.

ಲಂ: ಯಾರಿಗೆ ಹಣ ಕೊಟ್ಟಿದ್ದಾರೆ?

ನಾ. ಶರ್ಮ: ನೀವೊಮ್ಮೆ ರಾಷ್ಟ್ರೋತ್ಥಾನ ಕಟ್ಟಡದಲ್ಲಿರುವ ವಸ್ತು-ವೈಭವ ನೋಡಿ ಬನ್ನಿ. ಎಲ್ಲಾ ತ್ಯಜಿಸಿರುವವರಿಗೆ ಯಾಕೆ ಈ ವೈಭವ? ಅಷ್ಟು ಹಣ ಯಾರು ಕೊಟ್ಟರು.

ಲಂ: ಅನೈತಿಕ ರಾಜಕಾರಣಿಗಳನ್ನು ಸಹ ಸಂಘ ಯಾಕೆ ಪ್ರಶ್ನಿಸುತ್ತಿಲ್ಲ

ನಾ. ಶರ್ಮ: ಹೌದು. ರೇಣುಕಾಚಾರ್ಯ ತರಹದವರನ್ನು ಸಂಘ ಹೇಗೆ ಒಪ್ಪುತ್ತೆ ನನಗೆ ಆಶ್ಚರ್ಯವಾಗುತ್ತೆ

ಲಂ: ನಿಮ್ಮ ಪ್ರಕಾರ ಈಗ ಪ್ರಾಮಾಣಿಕತೆ ಉಳಿಸಿಕೊಂಡಿರುವ ಹಿಂದೂತ್ವವಾದಿ ನಾಯಕ ಯಾರು?

ನಾ. ಶರ್ಮ: ಅಂದರೆ?!

ಲಂ: ಪ್ರಮೋದ್ ಮುತಾಲಿಕ್ ಭ್ರಷ್ಟನಾ?

ನಾ. ಶರ್ಮ: ಹೌದು.

ಲಂ: ಭಜರಂಗ ದಳದ ಮಹೇಂದ್ರ ಕುಮಾರ್?

ನಾ. ಶರ್ಮ: ನನಗೆ ಮಾಹಿತಿ ಇಲ್ಲ.

ಲಂ: ರಾಜ್ಯ RSS ಮುಖ್ಯಸ್ಥ ಜಯದೇವ್?

ನಾ. ಶರ್ಮ: ಅತ್ಯಂತ ಪ್ರಾಮಾಣಿಕ.

ಲಂ: ಸಂತೋಷ್?

ನಾ. ಶರ್ಮ: ರಾಜಕೀಯ ಮಹತ್ವಾಕಾಂಕ್ಷಿ

ಲಂ: ಅಷ್ಟೇನಾ?

ನಾ. ಶರ್ಮ: ಅದಕ್ಕಾಗಿ ಏನು ಬೇಕಿದ್ರು ಮಾಡ್ತಾರೆ.

ಲಂ: RSS ನ ದಾ.ಮ. ರವೀಂದ್ರ.

ನಾ. ಶರ್ಮ: ತಮ್ಮ ಮನೆಯಿಂದಲೇ ಹಣ ತಂದು ಸೇವೆ ಮಾಡುವವರು.

ಲಂ: ರಾಷ್ಟ್ರೋತ್ಥಾನದ ದಿನೇಶ್ ಹೆಗಡೆ?

ನಾ. ಶರ್ಮ: ನೀವು ದಯವಿಟ್ಟು ಒಮ್ಮೆ ರಾಷ್ಟ್ರೋತ್ಥಾನ ಕಟ್ಟಡ ನೋಡಿ ಬನ್ನಿ. ಅದು ಪೂರ್ಣಾವಧಿ ಕಾರ್ಯಕರ್ತರಿರುವ ಸ್ಥಳ ಅನ್ನಿಸಲ್ಲ, ಅಲ್ಲಿನ ಇವತ್ತಿನ ವೈಭವ ಅಷ್ಟಿದೆ.

ಲಂ: ಯಡಿಯೂರಪ್ಪನ ಮಕ್ಕಳಿಗೆ ದೇಶಭಕ್ತಿ, ಹಿಂದೂತ್ವದ ಬಗ್ಗೆ ಗೊತ್ತಿದೆಯಾ?

ನಾ. ಶರ್ಮ: ಯಡಿಯೂರಪ್ಪನವರಿಗೇ ಅವರನ್ನು ಗೊತ್ತಾ ಅಂತ ನನಗೆ ಅನುಮಾನ.

ಲಂ: ಸಂಘದಲ್ಲಿ ಜಯದೇವ್‌ರ ಸ್ಥಾನಮಾನ ಏನು?

ನಾ. ಶರ್ಮ: ಅವರನ್ನು ಉತ್ಸವ ಮೂರ್ತಿ ರೀತಿ ಮಾಡಿಬಿಟ್ಟಿದ್ದಾರೆ. ಹಿರಿಯರಾದ ಜಯದೇವ್ ಇದನ್ನೆಲ್ಲಾ ನೋಡಿಕೊಂಡು ಯಾಕೆ ಸುಮ್ಮನಿದ್ದಾರೆ ಅಂತ ನನಗೆ ದೊಡ್ಡ ಗೊಂದಲವಾಗಿದೆ. ಅವರು ಯಾವುದೋ ಒತ್ತಡದಲ್ಲಿರುವಂತಿದೆ. ಅವರು ಯಾರದ್ದೋ ಕಪಿಮುಷ್ಠಿಯಲ್ಲಿದ್ದಾರಾ ಅಂತಾ ಅನುಮಾನವಿದೆ.

ಮಂತ್ರಿಗಳ ಮೇಲೆ ಷರತ್ತುಗಳನ್ನು ವಿಧಿಸುತ್ತಿದ್ದವನೂ ಇದೇ ಸುದರ್ಶನ್. ಇವತ್ತಿಗೂ ಸುದರ್ಶನ್ ಎಂದರೆ ಬಿಜೆಪಿಯ ಹಲವಾರು ಹಿರಿಯ ನಾಯಕರೂ ನಡುಗುತ್ತಾರೆ. ಅಷ್ಟೇ ಅಲ್ಲ, ಎಲ್.ಕೆ. ಅಡ್ವಾನಿ ತರಹದ ಹಿರಿಯ ಬಿಜೆಪಿ ನಾಯಕರೂ ಸುದರ್ಶನ್‌ನನ್ನು ಸಾರ್ವಜನಿಕವಾಗಿ ಖಂಡಿಸಲು ಹಿಂಜರಿಯುತ್ತಾರೆ. ಬಿಜೆಪಿಯ ಹಿರಿ-ಕಿರಿ ನಾಯಕರೆಲ್ಲರೂ ಆರೆಸ್ಸೆಸ್‌ನ ಕೆಂಗಣ್ಣನ್ನು ನೆನೆದೇ ಸುಸ್ತಾಗುತ್ತಾರೆ.

ಇಂತಹ ಆರೆಸ್ಸೆಸ್ ಅನ್ನು ಎದುರಿಸುವ ಧೈರ್ಯ ಇದ್ದದ್ದು ವಾಜಪೇಯಿ ಅವರಿಗೆ ಅವರಿಗೆ ಮಾತ್ರ. ಆದರೆ ಅವರು ಕೂಡ ಆರೆಸ್ಸೆಸ್‌ಗೆ ಡೊಗ್ಗುಸಲಾಮು ಹೊಡೆಯುವುದರೊಂದಿಗೆ ತಮ್ಮ ಅಧಿಕಾರಾವಧಿಯನ್ನು ಪ್ರಾರಂಭಿಸಿದ್ದರು. ಉದಾಹರಣೆಗೆ ವಾಜಪೇಯಿ ತಮ್ಮ ಪ್ರಥಮ ಸಚಿವ ಸಂಪುಟವನ್ನು ರೂಪಿಸುತ್ತಿದ್ದಾಗ ಅವರನ್ನು ಭೇಟಿಯಾಗಲು ಇದೇ ಸುದರ್ಶನ್ ಹೋಗಿದ್ದ. ಭೇಟಿಗೆ ಕಾರಣ ಜಸ್ವಂತ್ ಸಿಂಗ್‌ರನ್ನು ವಾಜಪೇಯಿ ಆರ್ಥಿಕ ಮಂತ್ರಿಯನ್ನಾಗಿಸಲಿದ್ದಾರೆ ಎಂಬ ಸುದ್ದಿ ಸುದರ್ಶನ್ ಕಿವಿಗೆ ಬಿದ್ದಿತ್ತು. ಜಸ್ವಂತ್ ಸಿಂಗ್ ಬಗೆಗಿನ ತನ್ನ ಅಸಮಾಧಾನವನ್ನು ಸುದರ್ಶನ್ ವ್ಯಕ್ತಪಡಿಸಿದ ಮರುಕ್ಷಣವೇ ಕಾನೂನುಬದ್ಧವಾಗಿ ಪ್ರಧಾನಿಯಾಗಿ ಆಯ್ಕೆಯಾಗಿದ್ದ ವಾಜಪೇಯಿ ತಮ್ಮ ಸಚಿವ ಸಂಪುಟದಿಂದ ಜಸ್ವಂತ್ ಸಿಂಗ್ ಹೆಸರನ್ನು ಕೈಬಿಟ್ಟಿದ್ದರು. ಬಿಜೆಪಿ ಮೇಲೆ ಆರೆಸ್ಸೆಸ್ ಮತ್ತು ಸುದರ್ಶನ್ ಹೊಂದಿರುವ ಹಿಡಿತ ಎಂತಹುದು ಎಂಬುದಕ್ಕೆ ಇದೊಂದು ಸಾಕ್ಷಿಯೇ ಸಾಕು.

ರಾಜಕೀಯದಲ್ಲಿನ ಸಂಬಂಧಗಳು ಸಂಕೀರ್ಣವಾಗಿರುತ್ತವೆ. ಆದರೆ ಆರೆಸ್ಸೆಸ್ ಮತ್ತು ಬಿಜೆಪಿ ನಡುವಿನ ಸಂಬಂಧ ತುಂಬಾ ಸರಳವಾದದ್ದು. ಆರೆಸ್ಸೆಸ್ ರೂಪಿಸಿರುವ ಯೋಜನೆಗಳಿಂದ ಬಿಜೆಪಿ ಬಹುದೂರ ಸರಿಯದಿದ್ದರೆ ನಾಗಪುರದ ಮುದಿಯರು ಸುಮ್ಮನಿರುತ್ತಾರೆ. ಆದರೆ ಸಂಘಪರಿವಾರ ಹಾಕಿದ ಗೆರೆಯನ್ನು ದಾಟಿದರೆ ಅದು ವ್ಯಘ್ರಗೊಳ್ಳುತ್ತದೆ. ಎಲ್.ಕೆ. ಅಡ್ವಾನಿ ಪಾಕಿಸ್ತಾನಕ್ಕೆ ಹೋದ ಸಂದರ್ಭದಲ್ಲಿ ಜಿನ್ನಾ ಅವರನ್ನು ಹೊಗಳಿದ್ದಕ್ಕೆ ಕೋಪಗೊಂಡ ಆರೆಸ್ಸೆಸ್ ಅವರು ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವತನಕ ಸುಮ್ಮನಾಗಲಿಲ್ಲ.

ಇವತ್ತಿಗೂ ಬಿಜೆಪಿಯ ಎಲ್ಲಾ ಸ್ಥಾನಗಳನ್ನು ಯಾರಿಗೆ ನೀಡಬೇಕೆಂದು ನಿರ್ಧರಿಸುವುದೇ ಆರೆಸ್ಸೆಸ್. ಇತರೆ ಪಕ್ಷದಲ್ಲಿ ಪ್ರಜಾಸತ್ತೆ ಇಲ್ಲ ಎಂದು ದೊಡ್ಡ ದನಿಯಲ್ಲಿ ಖಂಡಿಸುವ ಬಿಜೆಪಿ ಕೂಡ, ಆರೆಸ್ಸೆಸ್‌ನ ನಾಯಕರು ಯಾರನ್ನು ಆಯ್ಕೆ ಮಾಡುತ್ತಾರೋ ಅವರನ್ನೇ ನೇಮಿಸುತ್ತದೆ. ಹಾಲಿ ಬಿಜೆಪಿ ಅಧ್ಯಕ್ಷನನ್ನು ಆಯ್ಕೆ ಮಾಡಿದ್ದೂ ಆರೆಸ್ಸೆಸ್, ಆ ಹುದ್ದೆಯಲ್ಲಿ ಈ ಹಿಂದೆ ಇದ್ದವನನ್ನೂ ಆಯ್ಕೆ ಮಾಡಿದ್ದೂ ಆರೆಸ್ಸೆಸ್. ಹಾಗೆಯೇ ಮುಂದೆ ಆಗಲಿರುವ ಅಧ್ಯಕ್ಷನನ್ನೂ ಇದೇ ಆರೆಸ್ಸೆಸ್ ಆಯ್ಕೆ ಮಾಡುತ್ತದೆ ಎಂಬುದರ ಬಗ್ಗೆ ಯಾವುದೇ ಅನುಮಾನಗಳಿಲ್ಲ.

ದೇಶದ ಪ್ರಮುಖ ಪಕ್ಷಗಳಲ್ಲಿ ಒಂದಾದ ಬಿಜೆಪಿ ಮೇಲೆ ಆರೆಸ್ಸೆಸ್ ಇಂತಹ ಹಿಡಿತವನ್ನು ಹೊಂದಿರುವುದರಿಂದ ಈ ಸಂಘಟನೆಯನ್ನು ನಡೆಸುತ್ತಿರುವ ಮುದಿಯರ ದೃಷ್ಟಿಕೋನ ಎಂತಹದ್ದು, ಅವರ ಬುದ್ಧಿ ಸಾಮರ್ಥ್ಯ ಎಂತಹದ್ದು ಎಂದು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

ಆರೆಸ್ಸೆಸ್ ನಾಯಕರ ಬದ್ಧತೆ ಮತ್ತು ಬುದ್ಧಿ ಸಾಮರ್ಥ್ಯದ ಬಗ್ಗೆ ಬಿಜೆಪಿ ನಾಯಕರು ಸದಾ ಕೊಚ್ಚಿಕೊಳ್ಳುತ್ತಿರುತ್ತಾರೆ. ಆದರೆ ಶಿಸ್ತುಬದ್ಧವಾದ ಮತ್ತು ಅಷ್ಟೇ ಗೌಪ್ಯವಾದ ಸಂಘಟನೆಯಾದ ಆರೆಸ್ಸೆಸ್‌ನ ನಾಯಕರು ಸಾರ್ವಜನಿಕವಾಗಿ ತುಟಿ ಪಿಟಕ್ ಎನ್ನುವುದಿಲ್ಲವಾದ್ದರಿಂದ ಅವರ ಬುದ್ಧಿ ಎಂತಹದ್ದು ಎಂಬ ಸುಳಿವುಗಳು ಸಿಗುವುದೇ ಕಷ್ಟ. ಆದರೂ ಅಪರೂಪಕ್ಕೆ ಕೆಲ ಆರೆಸ್ಸೆಸ್ ನಾಯಕರು ಬಾಯಿ ತೆರೆದು ನಿಜವಾಗಲೂ ತಮ್ಮ ಬುದ್ಧಿಮಟ್ಟ ಎಂತಹದ್ದು ಎಂಬುದನ್ನು ಬಹಿರಂಗಪಡಿಸುತ್ತಾರೆ. ಆ ಮೂಲಕ ನಾಗಪುರದ ಮುದಿ ಚೆಡ್ಡಿಗಳ ಮುಖವಾಡವನ್ನು ಕಳಚುತ್ತಾರೆ.

ಈಗ ಸುದರ್ಶನ್‌ನ ಹೇಳಿಕೆಗಳನ್ನು ನೋಡಿ ಆರೆಸ್ಸೆಸ್‌ನ ನಾಯಕರೆಲ್ಲಾ ತಲೆಕೆಟ್ಟಿರುವ ತಿಕ್ಕಲರು, ಶುದ್ಧಾಂಗ ಹುಚ್ಚರು ಮತ್ತು ದ್ವೇಷದಿಂದ ತುಂಬಿರುವ ಬುದ್ಧಿಹೀನರು ಎಂದು ಸ್ಪಷ್ಟವಾಗುತ್ತದೆ.

ಸುದರ್ಶನ್‌ನಂತೆ ಇತರೆ ಆರೆಸ್ಸೆಸ್ ನಾಯಕರು ಬಾಯಿ ತೆರೆದು ತಮ್ಮ ಅಭಿಪ್ರಾಯಗಳನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸಲಾರಂಭಿಸಿದರೆ ಜನ ಕೂಡಲೇ ಹುಚ್ಚಾಸ್ಪತ್ರೆಯ ಸಿಬ್ಬಂದಿಗಳನ್ನು ಕರೆಸಿ ಆರೆಸ್ಸೆಸ್ ನಾಯಕರನ್ನೆಲ್ಲ ಕರೆದುಕೊಂಡು ಹೋಗಿ ಎಂದು ಹೇಳುತ್ತಾರಷ್ಟೆ.

ಆರೆಸ್ಸೆಸ್‌ನ ಈ ಅಸಲಿ ಪ್ರವೃತ್ತಿಯನ್ನು ಮನವರಿಕೆ ಮಾಡಿಕೊಂಡರೆ ಬಿಜೆಪಿಯ ಮೂಲಭೂತ ಸಮಸ್ಯೆ ಏನೆಂಬುದು ಅರ್ಥವಾಗುತ್ತದೆ.

ವಾಜಪೇಯಿ ನಂತರ ಬಿಜೆಪಿಯನ್ನು ಮುಂದುವರೆಸುವ ನಾಯಕತ್ವದ ಗುಣ ಯಾವ ಬಿಜೆಪಿ ನಾಯಕರಲ್ಲೂ ಕಂಡುಬಂದಿಲ್ಲ. ಆದ್ದರಿಂದಲೇ ವಾಜಪೇಯಿ ತೆರೆಮರೆಗೆ ಸರಿದ ನಂತರ ಬಿಜೆಪಿ ಸೊರಗುತ್ತಲೇ ಸಾಗಿದೆ. ಇವತ್ತು ಗಲಾಟೆ ಮಾಡಿ ಸಂಸತ್ತಿನ ಚರ್ಚೆಗಳನ್ನು ತಡೆಯುವುದರಲ್ಲಿ ಬಿಜೆಪಿ ಅಪಾರ ಯಶಸ್ಸನ್ನು ಕಂಡಿರಬಹುದು. ಆದರೆ ಆ ಪಕ್ಷದಲ್ಲಿ ಇಂದು ಹೊಸ ಚಿಂತನೆಯಾಗಲಿ, ಹೊಸ ಯೋಚನೆಯಾಗಲಿ ಇಲ್ಲದಂತಾಗಿದೆ. ಅಷ್ಟೇ ಅಲ್ಲ, ಮುಂದಿನ ಪೀಳಿಗೆಯ ನಾಯಕತ್ವವೂ ಅದರಲ್ಲಿ ಇಲ್ಲದಂತಾಗಿದೆ.

ಬಿಜೆಪಿಯ ನಾಯಕರ ಆಯ್ಕೆಯಿಂದ ಹಿಡಿದು ಅದರ ತತ್ವಾದರ್ಶಗಳನ್ನು ಆರೆಸ್ಸೆಸ್ ರೂಪಿಸುವುದೇ ಆ ಪಕ್ಷದ ದೌರ್ಬಲ್ಯಗಳಿಗೆ ಕಾರಣ ಎಂಬ ಸಂಶಯ ನನ್ನಂಥವರಲ್ಲಿ ಮೊದಲಿನಿಂದಲೂ ಇತ್ತು. ಈಗ ಸುದರ್ಶನ್ ತನ್ನ ನಿಜ ಸ್ವರೂಪವನ್ನು ಬಹಿರಂಗಪಡಿಸಿರುವುದರಿಂದ ಬಿಜೆಪಿಯ ವೈಫಲ್ಯಗಳಿಗೆ ಆರೆಸ್ಸೆಸ್ಸೇ ಕಾರಣ ಎಂಬುದು ದೃಢಪಟ್ಟಿದೆ. ಎಲ್ಲಿಯತನಕ ಬಿಜೆಪಿಯನ್ನು ಇಂತಹ ಬುದ್ಧಿಹೀನರು ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿರುತ್ತಾರೋ ಅಲ್ಲಿಯವರೆಗೆ ಬಿಜೆಪಿಯ ಭವಿಷ್ಯ ಡೋಲಾಯಮಾನವಾಗಿಯೇ ಇರುತ್ತದೆ."

ಇದಿಷ್ಟು ವೀರ್ ಸಾಂಘ್ವಿ ಅವರ ಲೇಖನದ ಸಾರಾಂಶ.

ಅಂದಹಾಗೆ, ಇದ್ದಕ್ಕಿದ್ದಂತೆ ಚೆಡ್ಡಿಗಳು ಏಕೆ ಸೋನಿಯಾ ಗಾಂಧಿ ವಿರುದ್ಧ ತಿರುಗಿಬಿದ್ದು ಇಂತಹ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ? ಅದರ ಹಿಂದೆಯೂ ಹಲವು ತರ್ಕಗಳಿವೆ.

ಒಂದು: ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆದ ಆದರ್ಶ್ ಹೌಸಿಂಗ್ ಸೊಸೈಟಿಯ ಹಗರಣದ ವಿರುದ್ಧ ಬಿಜೆಪಿ ಅರಚಾಡುತ್ತಿತ್ತು. ಆದರೆ ಅದೇ ಹಗರಣದಲ್ಲಿ ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯ ಪಾಲೂ ಇದೆ ಎಂದು ಹಲವು ಪತ್ರಿಕೆಗಳು ವರದಿ ಮಾಡಿದ್ದವು.


ಎರಡು: ಹಲವು ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದಂತೆ ದೇಶದಾದ್ಯಂತ ಬಂಧನಕ್ಕೊಳಗಾಗಿರುವ ಎಲ್ಲಾ ಹಿಂದೂಗಳೂ ಒಂದಲ್ಲ ಒಂದು ರೀತಿಯಲ್ಲಿ ಆರೆಸ್ಸೆಸ್‌ನೊಂದಿಗೆ ನಂಟು ಹೊಂದಿರುವವರೇ. ಅಂದರೆ ಆರೆಸ್ಸೆಸ್ ಸಹವಾಸ ಇಲ್ಲದ ಯಾವ ಹಿಂದೂ ಕೂಡ ಬಾಂಬ್ ಸ್ಫೋಟಗಳಂಥ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿಲ್ಲ. ಅರ್ಥಾತ್ ಆರೆಸ್ಸೆಸ್ "ಸಮಾಜ ಸೇವೆ" ಎಂದು ಹೇಳುತ್ತಲೇ "ಸಮಾಜಘಾತುಕ" ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದೆ.

ಮೂರು: ಇತ್ತೀಚೆಗೆ ಈ ಚೆಡ್ಡಿಗಳ ಹಾವಳಿಯ ವಿರುದ್ಧ ಸೋನಿಯಾ ಗಾಂಧಿ ಮತ್ತು ಅವರ ಪುತ್ರ ರಾಹುಲ್ ಗಾಂಧಿ ಸಿಡಿದೆದ್ದು ನಿಂತಿದ್ದಾರೆ. ರಾಹುಲ್ ಗಾಂಧಿ ಆರೆಸ್ಸೆಸ್ ಅನ್ನು ಸಿಮಿಗೆ ಹೋಲಿಸಿ ಈ ಸಂಘಟನೆ ಮೇಲೂ ನಿಷೇಧವನ್ನು ಹೇರಬೇಕು ಎಂದು ಹೇಳಿದರು. ಅವರ ತಾಯಿ ಸೋನಿಯಾ ಗಾಂಧಿ ಕೂಡ ಮೊನ್ನೆ ನಡೆದ ಎಐಸಿಸಿ ಸಭೆಯಲ್ಲಿ ಆರೆಸ್ಸೆಸ್ ಅನ್ನು ದೇಶ ವಿರೋಧಿ ಸಂಘಟನೆ ಎಂದು ಬಣ್ಣಿಸಿದರು.

ಹೀಗೆ ಮೂರು ದಿಕ್ಕುಗಳಿಂದ ಒಮ್ಮೆಗೇ ಆಘಾತಕಾರಿ ದಾಳಿಗೆ ಗುರಿಯಾದ ಆರೆಸ್ಸೆಸ್ ಅವುಗಳಿಂದ ಬಚಾವಾಗಲು ಇಂತಹ ಅಸಂಬದ್ಧ ಹೇಳಿಕೆಗಳಿಗೆ ಶರಣಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಏಕೆಂದರೆ ಸುದರ್ಶನ್‌ನಂತಹ ಹುಚ್ಚರು ಆರೆಸ್ಸೆಸ್‌ನ ನಾಯಕರಾಗಿರುವಾಗ ಅದರಿಂದ ಇನ್ನೆಂತಹ ಬುದ್ಧಿವಂತಿಕೆಯನ್ನು ನಿರೀಕ್ಷಿಸಲಾದೀತು!

• ಸಾವಂತ್ರಿ



ಕಲ್ಲಡ್ಕ ಪ್ರಭಾಕರ ಭಟ್ಟರ ಶಾಲೆಗೆ 65 ಲಕ್ಷ ಕೊಟ್ಟವರ್ಯಾರು?

ರಾಜ್ಯ ಆರೆಸ್ಸೆಸ್‌ನ ಹಿರಿಯ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟರು ಬಹಳ ಹೆಸರುವಾಸಿಯಾಗಿದ್ದಾರೆ. ಕರಾವಳಿಯ ಬಿಜೆಪಿ ರಾಜಕಾರಣಿಗಳಾದ ಆಚಾರ್ಯ, ನಳಿನಿ ಕುಮಾರ್ ಕಟೀಲ್, ನಾಗರಾಜ ಶೆಟ್ಟಿ ಇನ್ನೂ ಮುಂತಾದವರು ಭಟ್ಟರು ಹಾಕಿದ ಗೆರೆ ದಾಟುವವರಲ್ಲ. ಇಂತಾ ಭಟ್ಟರು ಸಂಘ ಪರಿವಾರದ ಒಂದು ಶಿಕ್ಷಣ ಟ್ರಸ್ಟ್‌ನಲ್ಲೂ ಇದ್ದಾರೆ. ಈ ಟ್ರಸ್ಟ್ ಕಲ್ಲಡ್ಕ, ಪುತ್ತೂರು, ಹೆಬ್ರಿ ಹಾಗೂ ಬೆಂಗಳೂರಿನಲ್ಲಿ ಅನೇಕ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳ ಹೆಸರಿನಲ್ಲಿ ಇತ್ತೀಚೆಗೆ ಭ್ರಷ್ಟ ಬಿಜೆಪಿ ರಾಜಕಾರಣಿಯೊಬ್ಬ ಭಾರೀ ಹಣ ಕೊಟ್ಟಿದ್ದಾನೆಂಬ ಸುದ್ದಿಯನ್ನೂ ಆರೆಸ್ಸೆಸ್ ಕಾರ್ಯಕರ್ತರೇ ಹೇಳುತ್ತಿದ್ದಾರೆ. ಅದರ ಮೊತ್ತ 65 ಲಕ್ಷ ರೂಪಾಯಿಗಳು! ಹಣ ಕೊಟ್ಟವನು ಬಳ್ಳಾರಿ ರೆಡ್ಡಿ!!

-ಹೀಗ ಆರೆಸ್ಸೆಸ್‌ನವರೇ ಭ್ರಷ್ಟ ಬಿಜೆಪಿಗಳಿಂದ ಸಿಕ್ಕಿದಷ್ಟು ಹಣ ದೋಚಿ ಗಂಟು ಮಾಡಿಕೊಳ್ಳುತ್ತಿದ್ದಾರೆ. ವಾಸ್ತವ ಸ್ಥಿತಿ ಹೀಗಿರುವಾಗ ಬಿಜೆಪಿಯ ಭ್ರಷ್ಟಾಚಾರ ಹಾಗೂ ಲೂಟಿಗಳ ಬಗ್ಗೆ ರಾಜ್ಯ ಆರೆಸ್ಸೆಸ್‌ನವರು ಯಾಕೆ ಮಾತನಾಡುತ್ತಾರೆ ಹೇಳಿ?

ಸಿಎಂಗೆ ಆರೆಸ್ಸೆಸ್ ಹಸಿವು ಗೊತ್ತಿದೆ!




ನಿಜಕ್ಕೂ ಅಸಹ್ಯವಾಗುತ್ತೆ, ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರದ ಬಗ್ಗೆ ವಿಪರೀತ ಮಾತಾಡುತ್ತಿದ್ದ, ಅದನ್ನು ವಿರೋಧಿಸುತ್ತಿದ್ದ ಬಿಜೆಪಿಯವರಿಗೆ ಅಧಿಕಾರ ಸಿಕ್ಕಾಕ್ಷಣ ಹಸಿವು ಆರಂಭವಾಗಿದೆ. ಮಕ್ಕಳು-ಮರಿಗಳಿಗೆ, ಸಂಬಂಧಿಕರಿಗೆ ಅನುಕೂಲ ಮಾಡಿಕೊಡುವುದೇ ದೇಶಸೇವೆ ಎಂಬ ಸ್ಥಿತಿಯೂ ರೂಢಿಯಾಗಿದೆ. ಬಿಜೆಪಿ ಎಲ್ಲೆಲ್ಲಿ ಅಧಿಕಾರ ಹಿಡಿದಿತ್ತೋ, ಅಲ್ಲೆಲ್ಲಾ ಈ ರೀತಿಯ ಅಂಶಗಳೇ ಎದ್ದು ಕಾಣುತ್ತದೆ. ಯಡಿಯೂರಪ್ಪನವರ ಬಗ್ಗೆ ಹೇಳೋದಾದರೆ, ಮಕ್ಕಳ-ಮನೆಯ ಉದ್ಧಾರವೇ ಅವರಿಗೆ ಮುಖ್ಯವಾಗಿದೆ. ಕೇಂದ್ರದ ಬಿಜೆಪಿ ನಾಯಕರೂ ನಾಚುವಂತೆ ಭ್ರಷ್ಟಾಚಾರ ನಡೆಸುತ್ತಿದ್ದಾರೆ.

ಇನ್ನು ಆರೆಸ್ಸೆಸ್ ವಿಚಾರ. ಈ ಸರ್ಕಾರದ ಭ್ರಷ್ಟಾಚಾರವನ್ನು ನೋಡಿಯೂ ಅದು ಯಾಕೆ ಸುಮ್ಮನಿದೆಯೆಂದರೆ, ಯಡಿಯೂರಪ್ಪನವರಿಗೆ ಅದರ ಹಸಿವು, ಅವಶ್ಯಕತೆಗಳ ಅರಿವಿದೆ. ಅದನ್ನು ಕಾಲಕಾಲಕ್ಕೆ ಪೂರೈಸುತ್ತಿದ್ದಾರೆ. ಒಂದು ವೇಳೆ ಆರೆಸ್ಸೆಸ್‌ನವರು ಹಣ ಪಡೆಯದೇ ಇದ್ದಿದ್ರೆ ಯಡಿಯೂರಪ್ಪನವರನ್ನು ಕರೆದು ಬುದ್ಧಿ ಹೇಳ್ತಿದ್ರು.

-ಕೆ.ಎನ್.ಭಗವಾನ್, ಮಾಜಿ RSS ಮುಖಂಡ

ಇದು ಆರೆಸ್ಸೆಸ್‌ನ ಅವಶ್ಯಕತೆ!



ಪ್ರಸ್ತುತ ಬಿಜೆಪಿ ಪಕ್ಷ ಪೂರ್ತಿಯಾಗಿ ಭ್ರಷ್ಟವಾಗಿದೆ. ಅದು ಅಲ್ಪಸ್ವಲ್ಪ ಕಾಣುತ್ತಿದೆಯಷ್ಟೆ. ಅದರ ಚಟುವಟಿಕೆಗಳ ಆಳಕ್ಕಿಳಿದರೆ ಈ ವಿಚಾರ ಸ್ಪಷ್ಟವಾಗುತ್ತೆ. ಯಡಿಯೂರಪ್ಪ ಮತ್ತವರ ಸಹಚರರಿಗೆ ಈಗ ಸರಿಯಾಗಿ ಸರ್ಕಾರ ನಡೆಸುವುದಕ್ಕಿಂತ ದುಡ್ಡೇ ಮುಖ್ಯವಾಗಿದೆ. ಯಾಕೆಂದರೆ, ಮತ್ತೆ ಅಧಿಕಾರ ಹಿಡಿಯಲಾಗದೆಂಬ ವಿಚಾರ ಅವರಿಗೀಗಲೇ ಮನದಟ್ಟಾಗಿದೆ.

ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಇಷ್ಟೆಲ್ಲಾ ಭ್ರಷ್ಟಾಚಾರ ಮಾಡಿದರೂ ಆರೆಸ್ಸೆಸ್ ಯಾಕೆ ಸುಮ್ಮನಿದೆ ಅಂದಿರಲ್ಲಾ? ವಾಸ್ತವವೆಂದರೆ ಈ ಪ್ರಶ್ನೆ ಅಪ್ರಸ್ತುತ. ಆರೆಸ್ಸೆಸ್ ಮಂದಿಯ ಗಮನಕ್ಕೆ ಬಾರದೆ ಯಾವುದೂ ನಡೆಯುತ್ತಿಲ್ಲ. ಯಾಕೆಂದರೆ, ಆರೆಸ್ಸೆಸ್‌ನವರೇ ಬಿಜೆಪಿಯಲ್ಲಿದ್ದಾರೆ, ಬಿಜೆಪಿಯವರೇ ಆರೆಸ್ಸೆಸ್ ಕಾರ್ಯಕರ್ತರಾಗಿದ್ದಾರೆ! ಆದುದರಿಂದಲೇ ಎರಡೂ ಕಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಒಟ್ಟಾರೆ ಹೇಳಬೇಕೆಂದರೆ ಆರೆಸ್ಸೆಸ್ ರಾಜಕೀಯ ಚಟುವಟಿಕೆಯಿಂದ ದೂರವಿರುವಂತೆ ನಟಿಸುತ್ತಾ ತನ್ನನ್ನು ತಾನು ಪವಿತ್ರ ಅಂತ ಬಿಂಬಿಸಿಕೊಳ್ಳುತ್ತಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವ ಭಾರೀ ಭ್ರಷ್ಟಾಚಾರ ಬಿಜೆಪಿ ಮತ್ತು ಆರೆಸ್ಸೆಸ್ ತಕ್ಷಣದ ಅವಶ್ಯಕತೆ!

-ಎ.ಕೆ.ಸುಬ್ಬಯ್ಯ, ಹಿರಿಯ ರಾಜಕಾರಣಿ


ಸಂದರ್ಶನ

ಕಾಂಗ್ರೆಸ್ ಅನ್ನೂ ಮೀರಿಸುವ ಭ್ರಷ್ಟ ಸರ್ಕಾರ

ನನಗೆ ಬಿಜೆಪಿಯೇತರ ರಾಜಕಾರಣಿಗಳೂ ಗೊತ್ತಿದ್ದಾರೆ; ಸ್ನೇಹಿತರಾಗಿದ್ದಾರೆ. ಅಲ್ಲಿ ಸಂಘ ಪರಿವಾರದ ಬಗ್ಗೆ ಹಿಂದೆ ಇದ್ದ ಅಚಲ ವಿಶ್ವಾಸ (ಈ ಹಿಂದೆ ಸಂಘ ಪರಿವಾರ ಎಂದರೆ 'ಬಿಡಪ್ಪ, ಅವರೆಲ್ಲ ಸಾಧುಗಳು, ಪ್ರಾಮಾಣಿಕರು' ಎಂದು ಸಂಘವಿರೋಧಿಗಳು ಹೇಳುತ್ತಿದ್ದರು) ಸಂಪೂರ್ಣವಾಗಿ ಕುಸಿದಿದೆ. ಪರಿವಾರದ ರಾಜಕೀಯ ನಾಯಕರ ಬಗ್ಗೆ (ಎಬಿವಿಪಿ ನಾಯಕರೂ ಸೇರಿದಂತೆ) ಈ 'ಸಂಘವಿರೋಧಿ ರಾಜಕಾರಣಿಗಳು' ಎಳ್ಳಷ್ಟೂ ಗೌರವ ಇಟ್ಟುಕೊಂಡಿಲ್ಲ. ಇವರೆಲ್ಲ ನಮ್ಮ ಥರಾನೇ ಇದಾರೆ ಬಿಡ್ರಪ್ಪ, ಕಾಸು ಕೊಟ್ರೆ ಸಾಕು ಎಂದು ಮುಸಿಮುಸಿ ನಗುತ್ತಾರೆ. ಎಲ್ಲಿಂದ ಎಲ್ಲಿಗೆ ಬಂದಿದ್ದೇವೆ ನೋಡಿ? ಸಂಘಿಗಳನ್ನು ಅಪಾರವಾಗಿ ಭಯಮಿಶ್ರಿತ ಗೌರವದಿಂದ ಕಾಣುತ್ತಿದ್ದ ಪರಿವಾರೇತರರೆಲ್ಲಿ? ಈಗ ಅವರನ್ನೂ ಖರೀದಿಸಬಹುದು ಎಂದು ಹಾಯಾಗಿರುವ ದೃಶ್ಯವೆಲ್ಲಿ? ನಮ್ಮ ಭವ್ಯ ಹಿಂದೂ ಸಮಾಜದಲ್ಲಿ ಭ್ರಷ್ಟಾಚಾರರಹಿತ ವ್ಯವಸ್ಥೆ ಇರುತ್ತದೆ; ಒಂದಿನಿತೂ ಲಂಚ ಇರುವುದಿಲ್ಲ ಎಂದು ನಾನು ಸಂಘದ ಪ್ರಾರ್ಥನೆ ಮಾಡುವಾಗ ನಂಬಿದ್ದೆ. ಆದರೆ ವಿಷಾದ ಎಂದರೆ, ಹಿಂದೂ ಸಮಾಜವು ಭ್ರಷ್ಟಾಚಾರಮುಕ್ತವಾಗಿರುತ್ತದೆ ಎಂದು ಪರಿವಾರ ಸಾಹಿತ್ಯದಲ್ಲಿ ಎಲ್ಲೂ ಬರೆದಿಲ್ಲ; ಅಥವಾ ನನಗೆ ಕಾಣಿಸಿಲ್ಲ; ಅಥವಾ ಅವರು ಹಾಗೆ ಬರೆದಿದ್ದರೂ, ಅವರಿಂದಲೇ ರೂಪುಗೊಂಡ ನಾಯಕರು ಅಪಾರ ಭ್ರಷ್ಟತನದಿಂದ ಕೂಡಿದ್ದಾರೆ; ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಕ್ರಮ ಆಸ್ತಿ - ಎಲ್ಲ ಬಗೆಯ ಸಾರ್ವಜನಿಕ ಅನಾಚಾರಗಳ ಗೂಡಾಗಿದ್ದಾರೆ. ಆರು ದಶಕಗಳ ಕಾಲ ಆಳಿದ ಕಾಂಗ್ರೆಸಿಗೆ ಆರೇ ವರ್ಷಗಳಲ್ಲಿ ಪರ್ಯಾಯವಾಗಿ ಬೆಳೆದಿದ್ದಾರೆ.

ಹಿಂದೂ ಸಮಾಜದಲ್ಲಿ ಜಾತಿ ಇಲ್ಲ ಎಂದೇ ನಾನು ಶಾಖೆಗಳಲ್ಲಿ, ಎಬಿವಿಪಿಯಲ್ಲಿ ಕೇಳಿಸಿಕೊಂಡಿದ್ದೆ. ಆದರೆ ಇವತ್ತು ನೀವು ಬಿಜೆಪಿ ಸರ್ಕಾರಗಳನ್ನು ನೋಡಿ: ಜಾತಿ ರಾಜಕೀಯ ಬಿಟ್ಟು ಬೇರೇನೂ ಇಲ್ಲ. 'ನಾನು ಸತ್ಯವನ್ನಲ್ಲದೆ ಬೇರೇನನ್ನೂ ಹೇಳುವುದಿಲ್ಲ' ಎಂಬಂತೆ, ಈಗ 'ನಾನು ಜಾತಿ ಇಲ್ಲದೆ ಯಾವ ರಾಜಕೀಯವನ್ನೂ ಮಾಡುವುದಿಲ್ಲ' ಎಂದು ಪರಿವಾರ ಪ್ರೇರಿತ ಸರ್ಕಾರಗಳ ನಾಯಕರು ಪ್ರಮಾಣವಚನ ಸ್ವೀಕರಿಸಿದಂತಿದೆ.

*****




ನಾನು ಅನಂತಕುಮಾರ್ ಬಗ್ಗೆ ಬ್ಲಾಗ್ ಬರೆದಾಗ ಒಂದು ದ್ವೇಷಕಾರುವ ಅನಾಮಿಕ ಈ ಮೈಲ್ ಬಂತು: ಅದರಲ್ಲಿ ನೀನು ಇಷ್ಟು ದಿನ ಇಂಥ ಭ್ರಷ್ಟರ ಜೊತೆ ಇದ್ದೆಯಲ್ಲವೇ ಎಂಬ ಪ್ರಶ್ನೆ ಇತ್ತು. ನಿಜವೇ, ನಾನು ಇಷ್ಟು ದಿನ ಇವರೆಲ್ಲರ ಬಳಿ ವೃತ್ತಿಪರ (ಸಂಬಳದ ಮೇಲೆ) ಸೇವೆಯಲ್ಲಿ ಇದ್ದುದು ನಿಜ. ಆದರೆ ಭ್ರಷ್ಟಾಚಾರದ ಸಮಸ್ಯೆ ನನ್ನೊಬ್ಬನದೇ ಅಲ್ಲವಲ್ಲ? ಅಲ್ಲದೆ ಈ ಭ್ರಷ್ಟತೆಯೊಳಗೇ ಏನಾದರೂ ಬದಲಾವಣೆ ಆಗಬಹುದು ಎಂದು ನಿರೀಕ್ಷಿಸಿಯೇ ಇದ್ದೆ. ಅದೆಲ್ಲ ಈಗ ಹುಸಿಯಾಗಿದೆ. ಭ್ರಷ್ಟರ ಜೊತೆಗೇ ಇರುವುದಾದರೆ ನಾವು ಈ ಆತ್ಮವಂಚನೆಯ ಚಿಂತನೆ ಮಾಡಿಕೊಂಡು ಯಾಕಿರಬೇಕು? ನೇರವಾಗಿ ಭ್ರಷ್ಟರ ಜೊತೆಗೇ ಸೇರಿಕೊಂಡರೆ ಕೆಲಸವಾದರೂ ಆಗುತ್ತದೆ.

- ಎಬಿವಿಪಿಯ ಮಾಜಿ ಸದಸ್ಯರಾದ ಬೇಳೂರು ಸುದರ್ಶನ ಅವರ 'ಮಿತ್ರಮಾಧ್ಯಮ' ಬ್ಲಾಗ್‌ನಿಂದ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಮಂಡ್ಯ: ಗೃಹ ಸಚಿವ ಅಶೋಕ್ ಉಸ್ತುವಾರಿಯಲ್ಲಿ ಮುಸ್ಲಿಮರ ಮೇಲೆ ಪೋಲೀಸ್ ದಾಳಿ



ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಮೇಲೆ ಪೊಲೀಸರು ತಾವೇ ಮುಂದೆ ಬಿದ್ದು ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಿದ ಉದಾಹರಣೆಗಳು ಹೆಚ್ಚೇನೂ ಇಲ್ಲ, ಆದರೆ ಚೆಡ್ಡಿ ಸಂಘಟನೆಗಳು ಮಾಡುತ್ತಿದ್ದ ದಾಳಿಯ ವಿರುದ್ಧ ಎಲ್ಲಾ ಜಿಲ್ಲೆಗಳಲ್ಲೂ ಬಿಗಿ ಕ್ರಮ ಅನುಸರಿಸದೇ ಇದ್ದದ್ದು ಮಾತ್ರ ಎದ್ದು ಕಾಣುತ್ತಿತ್ತು. ಮಂಡ್ಯದಲ್ಲಂತೂ ಇಂತಹ ಘಟನೆಗಳು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪವಾಗಿದ್ದವು. ಎಸ್‌ಪಿ ಕೌಶಲೇಂದ್ರ ಕುಮಾರ್ ಪಕ್ಷಪಾತವನ್ನಾಗಲೀ, ಅದಕ್ಷತೆಯನ್ನಾಗಲೀ ತೋರಿದ ಉದಾಹರಣೆಗಳಿಲ್ಲ, ಆದರೆ ಡಿಸಿ ಜಾಫರ್ ಮತ್ತು ಎಸ್‌ಪಿ ಇಬ್ಬರೂ ರಜೆಯಲ್ಲಿದ್ದ ಕಳೆದ ವಾರದಲ್ಲಿ ಗೃಹ ಸಚಿವ ಆರ್.ಅಶೋಕ್‌ರ ನೇರ ಉಸ್ತುವಾರಿಯಲ್ಲಿರುವ ಮಂಡ್ಯದಲ್ಲಿ ಪೊಲೀಸರೇ ಮುಸ್ಲಿಮರ ಮೇಲೆ ದಾಳಿ ನಡೆಸಿರುವುದು ಪ್ರಜ್ಞಾವಂತರಲ್ಲಿ ಆತಂಕ ಮತ್ತು ಗಾಬರಿಯನ್ನು ಹುಟ್ಟಿಸಿದೆ.

ಮಂಡ್ಯ ನಗರದಲ್ಲಿ ಅತೀ ಹೆಚ್ಚು ಮುಸ್ಲಿಮರು ವಾಸಿಸುವುದು ಗುತ್ತಲು, ಗಾಂಧಿನಗರಗಳನ್ನ ಬಿಟ್ಟರೆ ಆಜಾದ್ ನಗರದಲ್ಲೇ. ಇನ್ನಿತರ ಕಸುಬುಗಳಂತೆ ದನದ ಮಾಂಸ ವ್ಯಾಪಾರ ಮಾಡುವವರು ಇಲ್ಲಿಯೂ ಸಹ ಇದ್ದಾರೆ. ಇವರನ್ನೇ ಗುರಿಯಾಗಿಟ್ಟುಕೊಂಡು ರೌಡಿಗಳನ್ನ ನಿಯಂತ್ರಿಸುವ ಸ್ಟೈಲ್‌ನಲ್ಲೇ ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿ ಮತ್ತು ಪಶ್ಚಿಮ ಠಾಣೆಯ ಎಸ್‌ಐ ರಾಘವೇಂದ್ರಬಾಬು ಮುಸ್ಲಿಂ ಸಮುದಾಯದ ವ್ಯಾಪಾರಿಗಳ ಮೇಲೆ ಅತಿರೇಕದ ದಾಳಿ ನಡೆಸಿ ಯಡವಟ್ಟು ಮಾಡಿಕೊಂಡಿದ್ದಾರೆ. ಈ ದಾಳಿಯ ರೀತಿಯು ಚೆಡ್ಡಿಗಳ ಪುಂಡಾಟದಂತೆ ಕಾಣಲು ಕಾರಣಗಳಿವೆ.



ಸಾಮಾನ್ಯವಾಗಿ ಆರ್.ಎಸ್.ಎಸ್, ವಿ.ಎಚ್.ಪಿ. ಮತ್ತು ಭಜರಂಗದಳದ ಗೂಂಡಾಗಳು ತಮ್ಮ ನಿರುದ್ಯೋಗದ ಅವಧಿಯಲ್ಲಿ ದನದ ಮಾಂಸದ ವ್ಯಾಪಾರಿಗಳನ್ನ ಹಿಡಿದುಕೊಂಡು, ಮನಸೋ ಇಚ್ಛೆ ಹಲ್ಲೆ ನಡೆಸಿ ನಂತರ ಪೊಲೀಸರಿಗೆ ಒಪ್ಪಿಸುವುದು ಎಲ್ಲಾ ಕಡೆ ನಡೆಯುತ್ತಿದೆ. ಪೊಲೀಸರು ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳುವ ಬದಲು, ಹಲ್ಲೆಗೆ ಬಲಿಯಾದವರ ಮೇಲೆಯೇ ಕ್ರಮ ಕೈಗೊಳ್ಳುತ್ತಿರುವುದೂ ಸಾಮಾನ್ಯ. ಕೆಲವೆಡೆ ಪೊಲೀಸರು ಮಧ್ಯಪ್ರವೇಶ ಮಾಡಿ ಖಾಜಿ ನ್ಯಾಯ ಮಾಡುತ್ತಿದ್ದರು. ಆದರೆ ಇಲ್ಲಿ ಹಲ್ಲೆ ಮಾಡುವ ಕೆಲಸವನ್ನು ಸ್ವತಃ ಪೊಲೀಸರೇ ಮಾಡಿದ್ದಾರೆ. ಅದರಲ್ಲೂ ದಕ್ಷ ಪೊಲೀಸ್ ಆಫೀಸರ್ ಎಂದು ಕರೆಸಿಕೊಳ್ಳುವ ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿ ಮತ್ತು ಎಸ್ಸೈ ರಾಘವೇಂದ್ರಬಾಬು ಈ ಕೆಲಸಕ್ಕೆ ಇಳಿದಿರುವುದು ವಿಪರ್ಯಾಸ.

ಇಡೀ ಮುಸ್ಲಿಂ ಸಮುದಾಯ ಆಚರಿಸುವ ಪವಿತ್ರ ಹಬ್ಬ ಬಕ್ರಿದ್ ಇದೇ ತಿಂಗಳ 17ರಂದು ಇದ್ದಿದ್ದರಿಂದ ದನಗಳ ಮತ್ತು ಮಾಂಸ ವ್ಯಾಪಾರ ಮಾಡುವ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಮುಸ್ಲಿಂ ಸಮುದಾಯದ ಮಾಜಿ ನಗರಸಭಾ ಸದಸ್ಯ ಅನೀಫ್ ಟಿ.ನರಸೀಪುರದ ದನದ ಸಂತೆಯಿಂದ 27 ದನಗಳನ್ನ ಖರೀದಿಸಿ ಮನೆಯ ಹತ್ತಿರದ ರಸ್ತೆ ಪಕ್ಕ ಕಟ್ಟಿಹಾಕಿದ್ದಾರೆ.

16ರ ಮಧ್ಯಾಹ್ನ ಸುಮಾರು 2 ಗಂಟೆಯ ವೇಳೆಯಲ್ಲಿ ಇದನ್ನೇ ನೆಪವಾಗಿಟ್ಟುಕೊಂಡು ಅನೀಫ್ ಮನೆಗೆ ಎಸ್ಸೈ ರಾಘವೇಂದ್ರಬಾಬು ನೇತೃತ್ವದಲ್ಲಿ ಮೂರ್‍ನಾಲ್ಕು ಜನ ಪೊಲೀಸರು ದಾಳಿ ಮಾಡಿದ್ದಾರೆ. ದನಗಳು ಯಾರವು? ದನಗಳನ್ನ ಎಲ್ಲಿಂದ ತಂದಿದ್ದಾರೆ? ದನಗಳನ್ನ ರಸ್ತೆ ಪಕ್ಕ ಕಟ್ಟಿಹಾಕಲು ಇದು ಯಾರಪ್ಪನ ಸ್ವತ್ತು? ಇಷ್ಟೊಂದು ದನಗಳನ್ನ ಯಾಕಾಗಿ ತಂದಿದ್ದಾರೆ? ಎಂತೆಲ್ಲಾ ಬೊಂಬಡಾ ಹೊಡೆದಿದ್ದಾರೆ.

ನಂತರ ಪೊಲೀಸರು ರಸ್ತೆಬದಿಯಲ್ಲಿದ್ದ ದನಗಳ ಹಗ್ಗಗಳನ್ನ ಬಿಚ್ಚಿ ತಾವು ತಂದಿದ್ದ 2 ಟೆಂಪೋಗಳಿಗೆ ತುಂಬಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇದನ್ನ ಕಣ್ಣಾರೆ ನೋಡುತ್ತಿದ್ದ ಹನೀಫ್ ಮಗಳಾದ ಅಸ್ಮ ತಡೆದಿದ್ದಾರೆ. ಪೊಲೀಸರು ಮಹಿಳೆಯೆಂಬುದನ್ನೂ ಲೆಕ್ಕಿಸದೆ ಅಶ್ಲೀಲವಾಗಿ ಬೈದಿದ್ದಾರೆ. ಅಷ್ಟರೊಳಗೆ ಬಂದ ಹನೀಫ್ ಸಹಜವಾಗಿಯೇ ಪೊಲೀಸರನ್ನ ಪ್ರಶ್ನೆ ಮಾಡಿದ್ದಾರೆ. ಇದು ಪೊಲೀಸರಿಗೆ ಮತ್ತಷ್ಟು ಉರಿ ತರಿಸಿದೆ.

ತಕ್ಷಣ ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿಗೆ ಫೋನಾಯಿಸಿದ್ದಾರೆ. ಕೆಲವೇ ಕ್ಷಣಗಳಲ್ಲೇ 2 ಪೊಲೀಸ್ ಜೀಪುಗಳಲ್ಲಿ, 1 ಮಿನಿ ಟೆಂಪೋದಲ್ಲಿ ರಿಜರ್ವ್ ಪೊಲೀಸ್‌ರನ್ನ ಜಯಮಾರುತಿ ಕರೆ ತಂದಿದ್ದಾರೆ. ಜಯಮಾರುತಿ ತಮ್ಮ ಎಂದಿನ ರೌಡಿ ಕಂಟ್ರೋಲ್ ಸ್ಟೈಲಿನಲ್ಲಿ ಲಾಠಿ ತಿರುಗಿಸುತ್ತಾ ಹನೀಫ್ ಅವರು ಮಾಜಿ ನಗರಸಭಾ ಸದಸ್ಯ ಎಂಬುದು ಗೊತ್ತಿದ್ದರೂ ಅವರನ್ನು ಏಕವಚನದಲ್ಲೇ ದಬಾಯಿಸಿ ಹನೀಫ್‌ರ ಯಾವ ಪ್ರಶ್ನೆಗೂ ಸಮಜಾಯಿಷಿ ನೀಡದೇ, ದನಗಳನ್ನು ಎತ್ತಾಕಿಕೊಂಡು ಹೋಗಿ ಕರ್ನಾಟಕ ಗೋ ಸಂರಕ್ಷಣಾ ಕಾಯ್ದೆ ಮತ್ತು ಕರ್ನಾಟಕ ಗೋಹತ್ಯೆ ನಿಷೇಧ ಕಾಯ್ದೆಯ ಕಲಂ2, 4,5,8,9 ಮತ್ತು11(ಡಿ) ಅಡಿಯಲ್ಲಿ ಮತ್ತು ಐಪಿಸಿ ಕಲಂಗಳಡಿಯಲ್ಲಿ ಹನೀಫ್ ಸೇರಿದಂತೆ 20 ಜನರ ಮೇಲೆ ಕೇಸು ಜಡಿದು ಭಜರಂಗದಳದವರು ಮಾಡಬೇಕಾದ ಕೆಲಸವನ್ನೂ ತಾವೇ ಮಾಡಿ ಮುಗಿಸಿದ್ದಾರೆ.



ಸಿಪಿಐ ಜಯಮಾರುತಿ

ಇದೆಲ್ಲವನ್ನು ಕಣ್ಣಾರೆ ನೋಡುತ್ತಿದ್ದ ಹನೀಫ್ ಕುಟುಂಬದ ಮಹಿಳೆಯರು ಪ್ರತಿಭಟಿಸಿದ್ದೇ ಸಿಕ್ಕ ಸಿಕ್ಕ ಮಹಿಳೆಯರ ಮೇಲೆ ಸ್ವತಃ ಜಯಮಾರುತಿ ಸೇರಿದಂತೆ ಸ್ಥಳದಲ್ಲಿದ್ದ ಪೊಲೀಸರು ಮಹಿಳೆಯರಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಇದರಲ್ಲಿ ಹಸೀನಾ ಎಂಬುವವರ ಕೈಗೆ ಬಲವಾದ ಪೆಟ್ಟು ಬೀಳುವಂತೆ ಹೊಡೆಯಲಾಗಿದೆ. ಇದೇ ಸಂದರ್ಭದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿ ಇದೇನು ಅರಬ್ ಅಥವಾ ಪಾಕಿಸ್ತಾನವಾ ಅಂತೆಲ್ಲಾ ಕಿರುಚಾಡಿದರಂತೆ.

ಅಲ್ಲಿದ್ದ 27 ದನಗಳನ್ನ ಬಲವಂತವಾಗಿ ಕ್ಯಾಂಟರ್‌ಗಳಿಗೆ ತುಂಬಿಕೊಳ್ಳುವ ರಭಸದಲ್ಲಿ, ಹೈನುಗಾರಿಕೆ ಮಾಡಿ ಜೀವನ ಸಾಗಿಸುತ್ತಿರುವ ಬಡ ವಿಧವೆ ಅಫಿಜಾ ಎಂಬುವವರು ಸಾಕಿರುವ ಹಾಲು ಕರೆಯುವ ಹಸು ಮತ್ತು ಅದರ ಕರುವನ್ನೂ ಸಹ ತುಂಬಲಾಗಿದೆ. ಅಫಿಜಾ ಅವರು ಪರಿಪರಿಯಾಗಿ ಬೇಡಿಕೊಂಡರೂ ಅವರ ಮೇಲೆಯೇ ಹಲ್ಲೆ ನಡೆಸಿ ಕುಟುಂಬ ಬೀದಿಗೆ ಬೀಳುವಂತೆ ಮಾಡಿರುವುದು ಗೋ ಹತ್ಯೆ ನಿಷೇಧದ ಯಾವ ಕಾಲಂನಡಿ ಬರುತ್ತದೆ ಎಂಬುದಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಉತ್ತರ ಕೊಡಬೇಕಿದೆ.

ಇಷ್ಟೇ ಅಲ್ಲದೇ ಮನೆಮನೆಗೆ ನುಗ್ಗಿ ದನಗಳನ್ನ ಬಚ್ಚಿಟ್ಟಿದ್ದಾರೆಂದು ಕೂಂಬಿಂಗ್ ಮಾಡಲಾಗಿದೆ. ಮೆಹಮುದಾ ಎಂಬ ಮತ್ತೊಬ್ಬ ವಿಧವೆಯ ಮನೆ ಬಾಗಿಲನ್ನ ಜಖಂಗೊಳಿಸಿ ಬೀರುವಿನ ಹಿಂದೆ ದನದ ಕೊಟ್ಟಿಗೆ ಇದೆ ಎಂದು ತಪ್ಪಾಗಿ ತಿಳಿದು ವಸ್ತುಗಳನ್ನು ಧ್ವಂಸ ಮಾಡಲಾಗಿದೆ.

ಇದುವರೆಗೂ ಮಂಡ್ಯದ ಪೊಲೀಸರ ಮೇಲೆ ಪಕ್ಷಪಾತದ ಆರೋಪಗಳು ಕೇಳಿಬರುತ್ತಿರಲಿಲ್ಲ, ಆದರೆ ಇತ್ತೀಚೆಗೆ ಭಾಗ್ಯಲಕ್ಷ್ಮಿ ಸೀರೆ ಹಂಚಿಕೆಯ ವಿರುದ್ಧ ಜೆಡಿಎಸ್‌ನವರು ಮಾಡಿದ ಪ್ರತಿಭಟನೆಯ ಸಂದರ್ಭದಲ್ಲೂ ಪೊಲೀಸರು ಅತಿರೇಕದಿಂದ ವರ್ತಿಸಿ ಜೆಡಿಎಸ್ ಜಿಲ್ಲಾಧ್ಯಕ್ಷ, ನಗರಸಭೆ ಉಪಾಧ್ಯಕ್ಷ ಸೇರಿದಂತೆ ಹಲವರಿಗೆ ಪೆಟ್ಟಾಗುವಂತೆ ಹೊಡೆದಿದ್ದರು. ಇದೀಗ ಮುಸ್ಲಿಮರ ಮೇಲೆ ದಾಳಿ ನಡೆಸಿದ್ದಾರೆ.



ಎಸ್ಪಿ ಕೌಶಲೇಂದ್ರ

ಗೋಹತ್ಯೆ ನಿಷೇಧ ಕಾಯ್ದೆಗೆ ಬಿಜೆಪಿಯ ತಿದ್ದುಪಡಿ ಇನ್ನೂ ಜಾರಿಯಿಲ್ಲದಾಗ್ಯೂ, ಹಳೆಯ ಕಾಯ್ದೆಯಡಿಯಲ್ಲೂ ಹಲವು ಕ್ರಮಗಳನ್ನು ತೆಗೆದುಕೊಳ್ಳುವ ಅವಕಾಶವಿದೆ. ಇದರ ದುರುಪಯೋಗ 2-3 ಕಡೆ ಬಿಟ್ಟರೆ ಬೇರೆಲ್ಲೂ ಆಗದೇ ಇರುವಾಗ ಜಿಲ್ಲೆಯ ಉಸ್ತುವಾರಿ ಹೊತ್ತಿರುವ ಗೃಹ ಸಚಿವರು ಇದರ ಹೊಣೆ ಹೊರಲೇಬೇಕಿದೆ.

ಈಗಾಗಲೇ ಗೋಹತ್ಯೆ ನಿಷೇಧ ಕಾಯ್ದೆ ವಿರೋಧಿ ಜನಾಂದೋಲನದ ಎ.ಕೆ.ಸುಬ್ಬಯ್ಯ, ಶಾಸಕ ಎಂ.ಶ್ರೀನಿವಾಸ್, ಕೋಮು ಸೌಹಾರ್ದ ವೇದಿಕೆ ಮತ್ತು ದಸಂಸದ ಎಂ.ಬಿ.ಶ್ರೀನಿವಾಸ್‌ರ ನೇತೃತ್ವದಲ್ಲಿ ಇದರ ವಿರುದ್ಧ ಪ್ರತಿಭಟನೆ ನಡೆದಿದೆ. ಘಟನೆಯ ಹಿಂದಿನ ಕಾರಣಕರ್ತರಿಗೆ ಸೂಕ್ತ ಶಿಕ್ಷೆಯಾಗದೇ ಇದ್ದರೆ, ಮಂಡ್ಯ ಪೊಲೀಸ್ ಇಲಾಖೆಯ ವಿಶ್ವಾಸಾರ್ಹತೆ ಕಡಿಮೆಯಾಗುವುದಂತೂ ಖಂಡಿತ.

• ಲಕ್ಷ್ಮಣ್ ಚೀರನಹಳ್ಳಿ

ಮೂಡಿಗೆರೆ: ಪಂಚಾಯತ್ ರಾಜ್ ಉಪವಿಭಾಗದಲ್ಲೊಬ್ಬ ಮಹಾಭ್ರಷ್ಟ ಮಂಜುನಾಥ್!

ಗ್ರಾಮೀಣ ಭಾರತದ ಸರ್ವತೋಮುಖ ಏಳಿಗೆಗಾಗಿಯೇ ಅನುಷ್ಠಾನಗೊಂಡದ್ದು ಪಂಚಾಯತ್ ರಾಜ್ ವ್ಯವಸ್ಥೆ. ಇಂತಹುದೊಂದು ಯೋಜನೆ ಹಣಬಾಕರ ಸುಪರ್ದಿಗೆ ಸಿಕ್ಕರೆ ಏನಾಗುತ್ತದೆಂಬುದಕ್ಕೆ ಚಿಕ್ಕಮಗಳೂರಿನ ಮೂಡಿಗೆರೆ ಸಾಕ್ಷಿಯಾಗಿ ನಿಂತಿದೆ. ಇಲ್ಲಿನ ಪಂಚಾಯತ್ ರಾಜ್ ಉಪವಿಭಾಗದ ಕಾರ್ಯಪಾಲಕ ಅಭಿಯಂತರ ಮಂಜುನಾಥ ಹರಿದುಬಂದ ಹಣವನ್ನೆಲ್ಲ ಹರಹರಾ ಅನ್ನಿಸಿಬಿಟ್ಟಿದ್ದಾನೆ. ಅದ್ಯಾವುದೋ ವಿಷಗಳಿಗೆಯೊಂದರಲ್ಲಿ ಮೂಡಿಗೆರೆಗೆ ವಕ್ಕರಿಸಿದ ಮಂಜುನಾಥ ಮಾತಿಗೆ ನಿಂತರೆ ಎಂಥವರನ್ನಾದರೂ ಯಾಮಾರಿಸಿಬಿಡಬಲ್ಲ, ಎಂಥವರ ಕಿವಿಗಾದರೂ ಹೂವಿಡಬಲ್ಲ, ಹಣ ಅಂತೊಂದು ಸಿಗುವುದಾದರೆ ಚಾಣಾಕ್ಷ ರಾಜಕಾರಣಿಗಳನ್ನೂ ಮೀರಿಸುವಂತೆ ರಣತಂತ್ರ ಹೆಣೆಯಬಲ್ಲ, ಇಂಥಾ ಆಸಾಮಿ ಪಂಚಾಯತ್ ರಾಜ್‌ನ ಆಶಯಗಳನ್ನೇ ಬುಡಮೇಲು ಮಾಡಿದ್ದಾನೆ.



ಈತನ ದರ್ಬಾರಿನಲ್ಲಿ ಎತ್ತ ಕಣ್ಣಾಡಿಸಿದರೂ ಕಳಪೆ-ಕಣ್ಕಟ್ಟುಗಳೇ ತಾಂಡವವಾಡುತ್ತಿವೆ. ಈತ ಹೆಸಗಲ್ ಗ್ರಾಮ ಪಂಚಾಯ್ತಿಯ ನೋಡೆಲ್ ಅಧಿಕಾರಿಯಾಗಿದ್ದಾಗ ಅಪರಾತಪರಾಗಳಲ್ಲಿ ಪರ್ಸೆಂಟೇಜು ಪಡೆದು ಕುಖ್ಯಾತನಾಗಿದ್ದ. ಈ ಸಂದರ್ಭದಲ್ಲಿ ಹೆಸಗಲ್ ಮತ್ತು ಬಿಳಗುಳದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಒಂದಷ್ಟು ಕಾಮಗಾರಿಗಳು ನಡೆದಿದ್ದವು. ಈತನ ದರ್ಬಾರು ಹೇಗಿದೆಯೆಂದರೆ, ಹೆಸಗಲ್‌ನ ಎರಡೂವರೆ ಕಿ.ಮಿ. ರಸ್ತೆಗೆ 33.50 ಲಕ್ಷ ಹಾಗೂ ಇಷ್ಟೇ ಉದ್ದದ ಚರಂಡಿಗೆ 35.69 ಲಕ್ಷ ಲೆಕ್ಕ ಕೊಟ್ಟಿದ್ದ, ಸರಿಯಾಗಿ ಇದೇ ವರ್ಷ ಹನ್ನೆರಡನೇ ಹಣಕಾಸು ಹಾಗೂ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಅದೇ ರಸ್ತೆಗಳಿಗೆ ತೇಪೆ ಹಚ್ಚಿ ಲಕ್ಷಗಟ್ಟಲೆ ಕಬಳಿಸಿದ್ದ!

ಇನ್ನು ಬಣಕಲ್ ವ್ಯಾಪ್ತಿಯ ರಸ್ತೆ ಮತ್ತು ಚರಂಡಿಗಳಿಗೆ, ಸಮುದಾಯ ಭವನ ನಿರ್ಮಾಣ ಹಾಗೂ ಮರಸಣಿಗೆಯ ರಸ್ತೆ-ಚರಂಡಿ ನಿರ್ಮಾಣ ಮತ್ತು ಬಿ.ಹೊಸಹಳ್ಳಿ, ಕೂವೆ, ಜಿ.ಅಗ್ರಹಾರ, ಕನ್ನೇನಹಳ್ಳಿ, ಕನ್ನಾಪುರ, ಮಾಕೋನಹಳ್ಳಿ, ತಲಗೋಡು, ತನುಡಿ ಗ್ರಾಮಗಳಿಗೆ ಸುವರ್ಣಗ್ರಾಮ ಯೋಜನೆಯಲ್ಲಿ ಕೋಟ್ಯಾಂತರ ರೂ.ಗಳ ಅನುಮೋದನೆ ಪಡೆಯಲಾಗಿದೆ. ಆದರೆ ಈ ಪ್ರದೇಶಗಳಲ್ಲೆಲ್ಲಾ ಪಕ್ಕಾ ಅಧ್ವಾನಗಳು ತಾಂಡವವಾಡುತ್ತಿವೆ. ದುರ್ಬೀನು ಹಾಕಿ ಹುಡುಕಿದರೂ ಒಂದೇಒಂದು ನೆಟ್ಟಗಿನ ಕಾಮಗಾರಿ ಕಣ್ಣಿಗೆ ಬೀಳುತ್ತಿಲ್ಲ.

ಚಿಕ್ಕಳ್ಳ ರಸ್ತೆಯ ಡಾಂಬರೀಕರಣಕ್ಕೆ ಎರಡೆರಡು ಸಲ 3.99 ಲಕ್ಷದಂತೆ ಬಿಲ್ ಮಾಡಿಕೊಳ್ಳಲಾಗಿದೆ. ಇನ್ನೂ ಸೋಜಿಗವೆಂದರೆ, ಇದಕ್ಕೂ ಮುನ್ನ ಇದೇ ಕಾಮಗಾರಿಗೆ 2.40 ಲಕ್ಷ ರೂ.ಗಳ ಬಿಲ್ ಮಾಡಲಾಗಿತ್ತು. ಕಡುವಳ್ಳಿಯಲ್ಲಿ ಸ್ಮಶಾನ ಮಟ್ಟ ಮಾಡಲು ಹಾಗೂ ಎರಡು ಮೋರಿ ನಿರ್ಮಾಣ ಕೆಲಸದಲ್ಲಿ ಲಕ್ಷಾಂತರ ರೂ. ನುಂಗಲಾಗಿದೆ.

ಇನ್ನುಳಿದಂತೆ ಹಳೇ ಮೂಡಿಗೆರೆ ಕಾಲೋನಿಗೆ 2008ರಲ್ಲಿ ಡಾಂಬರೀಕರಣಕ್ಕೆಂದು 4 ಲಕ್ಷ ರೂ.ಗಳ ಬಿಲ್ಲು ಮಾಡಲಾಗಿತ್ತು, ಆದರೆ ಯಾವ ಕೆಲಸವೂ ನಡೆದಿಲ್ಲ. ಮೂಡಸಸಿ, ಹಳ್ಳಿಬೈಲು, ಬಾಗಲದಿಣ್ಣೆ ಕಳಸ, ಬಾಳೂರು, ಬಣಕಲ್ ಭಾಗದಲ್ಲಂತೂ ಖೊಟ್ಟಿ ದಾಖಲೆ ಸೃಷ್ಟಿಸಿ ಬೇಕಾಬಿಟ್ಟಿ ಹಣ ಹೊಡೆಯಲಾಗಿದೆ. ಜಿ.ಹೊಸಳ್ಳಿ ರಸ್ತೆ ಅಭಿವೃದ್ಧಿಗೆ ಶಾಸಕರ ನಿಧಿಯಿಂದ ಎರಡೆರಡು ಸಲ ಹಣ ಪಡೆದು ವಂಚಿಸಲಾಗಿದೆ. ಬಗ್ಗಸಗೋಡು, ಪಲ್ಗುಣಿ, ಬಂಕೇನಹಳ್ಳಿ ಸೇತುವೆಗಳ ಬಳಿ ಹೇಮಾವತಿ ನದಿಗೆ ತಡೆಗೋಡೆ ನಿರ್ಮಿಸುವ ಸಂಬಂಧ ಲಕ್ಷಾಂತರ ರೂ. ಕಬಳಿಸಲಾಗಿದೆ. ಗ್ರಾಮೀಣ ನೀರು ಸರಬರಾಜು ಯೋಜನೆಯೂ ಇಂಥಾ ಅಪರಾತಪರಾಗಳಿಗೆ ಬಲಿಯಾಗಿದೆ.

ತೆರೆದ ಬಾವಿ ಯೋಜನೆಯಂತೂ ತಾಲ್ಲೂಕಿನಾದ್ಯಂತ ಬಹುದೊಡ್ಡ ದಂಧೆಯಾಗಿ ಮಾರ್ಪಾಡಾಗಿದೆ. ಖಾಸಗಿ ಜಮೀನಿನಲ್ಲಿ ಯೋಜನೆ 'ಅನುಷ್ಠಾನ'ಗೊಂಡ ದಾಖಲೆಗಳೂ ದಂಡಿದಂಡಿಯಾಗಿವೆ. ಕಿರುಗುಂದ ಶಾಲೆಯಲ್ಲಿ ಬೋರ್‌ವೆಲ್ ತೋಡಲಂತೂ ಎರಡೆರಡು ಸಲ ಬಿಲ್ ಮಾಡಲಾಗಿದೆ. ಈ ಕ್ಷಣಕ್ಕೂ ಬೋರ್‌ವೆಲ್ ಮಾತ್ರ ಕಾಣಿಸುತ್ತಿಲ್ಲ!



ಇಷ್ಟೆಲ್ಲಾ ಅಂದಾದುಂದಿಗಳು ಮಂಜುನಾಥನ ನೆರಳಲ್ಲೇ ನಡೆಯುತ್ತಿವೆ. ರಾಜ್ಯ ಕೇಂದ್ರ ಸರ್ಕಾರಗಳ ಅನುದಾನದ ಹಣವೆಲ್ಲ ಕಂಡವರ ಪಾಲಾಗುತ್ತಿದೆ.

ಇದೆಲ್ಲದರ ನಡುವೆ ಕೆಲ ರಾಜಕೀಯ ಮುಖಂಡರು ತಿಂದುಂಡು ಆರಾಮಾಗಿದ್ದರೆ, ಕಿರಿಯ ಎಂಜಿನಿಯರ್‌ಗಳಾದ ಶಿವಶರಣಪ್ಪ ವೀರಪ್ಪ ಪ್ರಕಾಶ, ನಾಗರಾಜು ಮುಂತಾದವರು ಅಕ್ಷರಶಃ ಧನಪಿಶಾಚಿಗಳಾಗಿ ಬದಲಾಗಿದ್ದಾರೆ.

ಮಂಜುನಾಥ ತನ್ನ ದುಷ್ಟಕೂಟದೊಂದಿಗೆ ಇಷ್ಟೆಲ್ಲಾ ಹಣ ನುಂಗುತ್ತಿದ್ದರೂ ಆತ ಕುಂತಲ್ಲೇ ಕೂತಿದ್ದಾನೆಂದರೆ ಅದಕ್ಕೆ ಶಾಸಕ ಎಂ.ಪಿ. ಕುಮಾರಸ್ವಾಮಿಯ ಆಶೀರ್ವಾದವೇ ಕಾರಣ. ಇದೆಲ್ಲವನ್ನೂ ಮೀರಿ ತನಿಖೆ ಅಂತೊಂದು ನಡೆದರೆ ಈ ಭ್ರಷ್ಟ ಕಾಂಡಕ್ಕೊಂದು ಬ್ರೇಕ್ ಬೀಳಬಹುದು.

ಸದ್ಯ ಮೂಡಿಗೆರೆಯ ಜನರಲ್ಲಿ ಅಂತಹುದೊಂದು ನಿರೀಕ್ಷೆ ದಟ್ಟವಾಗಿದೆ.

• ಅಜೀಜ್ ಕಿರುಗುಂದ



ಹುಚ್ಚನಾ ಇಲ್ಲಾ ಅಹಂಕಾರಿನಾ?

ಯಡಿಯೂರಪ್ಪ ಮೆಂಟಲ್ ಮುಖ್ಯಮಂತ್ರಿ ಅನಿಸಿಕೊಳ್ಳುವ ದಿನ ದೂರವಿಲ್ಲ ಎನಿಸುತ್ತದೆ. ಒಂದು ಕಡೆ ಭೂಹಗರಣಗಳು, ಲಂಚದ ಪ್ರಕರಣಗಳು ಗಂಟೆಗೊಂದರಂತೆ ಹೊರಬೀಳುತ್ತಿವೆ. ಮತ್ತೊಂದೆಡೆ ಇದೇ ಯಡ್ಡಿ ದಿನಕ್ಕೊಬ್ಬರ ಕಪಾಳಕ್ಕೆ ಹೊಡೆಯುತ್ತಾ ಥೇಟ್ ಹುಚ್ಚನಂತೆ ವರ್ತಿಸುತ್ತಿದ್ದಾರೆ. ಅದೂ ಮೀಡಿಯಾಗಳ ಎದುರೇ...!

ಮೊನ್ನೆ ಯಾದಗೀರ್‌ನಲ್ಲಿ ಇಂಥದ್ದೇ ಇನ್ನೊಂದು ಘಟನೆ ಆಗಿದೆ. ಯಡ್ಡಿಯ ಭೂಹಗರಣಗಳ ಬಗ್ಗೆ ಮೀಡಿಯಾದವರು ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕುತ್ತಿದ್ದಾಗ ತಪ್ಪಿಸಿಕೊಳ್ಳಲು ಯತ್ನಿಸಿದ ಯಡ್ಡಿ ಅವಿವೇಕಿಯಂತೆ ತನ್ನ ಅಂಗರಕ್ಷಕ ಪೊಲೀಸ್ ರುದ್ರಪ್ಪ ಎಂಬುವರ ಕಪಾಳಕ್ಕೆ ಹೊಡೆದಿದ್ದಾನೆ. ಸುತ್ತ ನಿಂತಿದ್ದ ಮೀಡಿಯಾದವರಿಗೆಲ್ಲಾ ಶಾಕ್ ಆಗುವಂತೆ ವರ್ತಿಸಿದ ಯಡ್ಡಿ ಕೊನೆಗೆ ರುದ್ರಪ್ಪನಲ್ಲಿ ಕ್ಷಮೆ ಕೇಳಿ ಕಾರ್ ಹತ್ತಿ ಪರಾರಿಯಾದರು.

ಮುಖ್ಯಮಂತ್ರಿಯಾದವನೊಬ್ಬ ಹೇಗಿರಬಾರದು ಎಂಬುದಕ್ಕೆ ನಮಗೆ ಯಡ್ಡಿಗಿಂತ ಬೇರೊಂದು ಉದಾಹರಣೆ ಬೇಕಿಲ್ಲ ಎನಿಸುತ್ತದೆ. ಮೊನ್ನೆ ಕಪಾಳಕ್ಕೆ ಏಟು ತಿಂದ ರುದ್ರಪ್ಪ ನಂತರ ಮೀಡಿಯಾದೆದುರಿಗೆ "ಏನ್ ಮಾಡೋದು ಸ್ವಾಮಿ, ಅವರು ದೊಡ್ಡೋರು, ಹೊಡೆದರಂತ ಬೇಜಾರ್ ಮಾಡ್ಕೊಂಡ್ರೆ ಆಗತ್ತಾ ಹೇಳಿ" ಎಂದು ಅಲವತ್ತುಕೊಂಡಿದ್ದಾನೆ.

ಯಡ್ಡಿ ಈ ರೀತಿ ಸಂಯಮ ಕಳೆದುಕೊಂಡು ಹುಚ್ಚನಂತೆ ವರ್ತಿಸುತ್ತಿರುವುದು ಇದೇ ಮೊದಲೇನಲ್ಲ. ಈ ಹಿಂದೆ ಉನ್ನತ ಐಎಎಸ್ ಅಧಿಕಾರಿ ವಿ.ಪಿ. ಬಳಿಗಾರ್‌ಗೂ ಯಡ್ಡಿ ವಿನಾಕಾರಣ ಕಪಾಳಮೋಕ್ಷ ಮಾಡಿದ್ದರೆಂದು ಸುದ್ದಿಯಾಗಿತ್ತು. ಆಪ್ತ ಸಹಾಯಕ ಸಿದ್ದಲಿಂಗಸ್ವಾಮಿಗಂತೂ ಯಡ್ಡಿಯ 'ಗೂಸಾ ಪ್ರಸಾದ' ನಿತ್ಯದ ಉಡುಗೊರೆಯಾಗಿದೆ. ಯಾವುದೋ ವಿವಾದ, ಭಿನ್ನಮತೀಯರ ಗಲಾಟೆ, ಮೀಡಿಯಾಗಳ ಆಕ್ರಮಣಗಳಿಗೆ ಸಿಕ್ಕಬಿದ್ದಾಗ ಯಡ್ಡಿಗೆ ಸಡನ್ನಾಗಿ ಕೋಪ ಬಂದೇ ಬಿಡುತ್ತದೆ. ಆಗ ಪಕ್ಕದಲ್ಲೇ ನಿಂತಿರುವ ಸಿದ್ದಲಿಂಗಸ್ವಾಮಿಯ ಕುಂಡೆಗೆ ಒದ್ದೋ ಇಲ್ಲಾ ಕಪಾಳಕ್ಕೆ ಬಾರಿಸಿಯೋ ಯಡ್ಡಿ ಸಮಾಧಾನಪಟ್ಟುಕೊಳ್ಳುವ ವಾಡಿಕೆಯಿದೆ.

ಈಗೊಂದೆರಡು ತಿಂಗಳ ಹಿಂದೆ ದಾವಣಗೆರೆಯಲ್ಲಿ ಬಿಜೆಪಿಗಳ ಸಾಧನಾ ಸಮಾವೇಶ ನಡೆಯುತ್ತಿದ್ದಾಗ ದಲಿತ ಸಂಘಟನೆಯವರು ಧಿಕ್ಕಾರ ಹಾಕಿದರೆಂದು ಸಿಡಿಮಿಡಿಗೊಂಡ ಯಡ್ಡಿ ಮೈಕ್ ಕೈಲಿಡಿದೇ 'ಪೊಲೀಸರು ಕತ್ತೆ ಕಾಯ್ತಿದ್ದೀರೇನ್ರಿ' ಎಂದು ದೊಡ್ಡ ಗಂಟಲಲ್ಲಿ ಕಿರುಚಾಡಿಕೊಂಡಿದ್ದರು. ಕೊನೆಗೆ ಹಿರಿಯ ಪೊಲೀಸ್ ಆಫೀಸರ್‌ಗಳು ಹೋಗಿ ಯಡ್ಡಿಯನ್ನು ಸಮಾಧಾನಪಡಿಸಬೇಕಾಗಿಬಂದಿತ್ತು. ಅದಕ್ಕೂ ಹಿಂದೆ ದಳ-ಬಿಜೆಪಿ ಮೈತ್ರಿಕೂಟ ಮುರಿದುಬೀಳುತ್ತಿದ್ದಾಗ ಆ ನಂತರ ಬಿಜೆಪಿ ಭಿನ್ನಮತೀಯರ ಗಲಾಟೆ ತಲೆಎತ್ತುತ್ತಿದ್ದಾಗಲೆಲ್ಲಾ ಈ ಯಡ್ಡಿ ತಮ್ಮ ಆಪ್ತ ಸಹಾಯಕರು, ಡ್ರೈವರ್‌ಗಳು, ಹತ್ತಿರ ನಿಲ್ಲುವ ಸಿಬ್ಬಂದಿಯನ್ನು ಬೈಯ್ಯುತ್ತಾ, ಹೊಡೆಯುವ ಚಿಲ್ಲರೆ ಕೋಪಗಳನ್ನೆಲ್ಲಾ ಮೀಡಿಯಾಗಳೆದುರೇ ಮಾಡಿ ತೋರಿಸಿದ್ದಾರೆ. ಕೆಳಹಂತದ ಸಿಬ್ಬಂದಿಯ ಕತೆ ಹಾಗಿರಲಿ, ಅನೇಕ ಬಾರಿ ಬಿಜೆಪಿಯ ಬೈದು ಆಚೆ ಕಳಿಸಿರುವ ಘಟನೆಗಳೂ ಆಗಿಹೋಗಿವೆ.

ಇದನ್ನೆಲ್ಲಾ ನೋಡುತ್ತಿದ್ದರೆ ಈ ಯಡ್ಡಿಗೆ ತಲೆ ಕೆಟ್ಟಿದೆಯೋ ಎಂಬ ಅನುಮಾನ ಬರುತ್ತದಷ್ಟೆ.

ಮುಖ್ಯಮಂತ್ರಿಯೊಬ್ಬರು ತಮ್ಮ ಮಾತು, ವರ್ತನೆಗಳ ಮೇಲೆ ಹತೋಟಿ ಇಟ್ಟುಕೊಂಡಿರಬೇಕು. ಬೀದಿ ರೌಡಿಯೊಬ್ಬ ತನ್ನ ಚೇಲಾಗಳ ತಲೆ ಮೇಲೆ ಬಾರಿಸುತ್ತಾ ತನ್ನ ಪೌರುಷ ತೋರಿಸಿಕೊಳ್ಳುವಂತೆ ಮುಖ್ಯಮಂತ್ರಿಯೂ ವರ್ತಿಸಿದರೆ ಜನ ಜಿಗುಪ್ಸೆ ಪಟ್ಟುಕೊಳ್ಳುತ್ತಾರೆ ಅಷ್ಟೆ.

ಈಗ ರುದ್ರಪ್ಪನ ಕೆನ್ನೆಗೆ ಹೊಡೆದಂತೆ ಇನ್ನೊಂದೆರಡು ಘಟನೆಗಳು ನಡೆದರೆ ಯಡ್ಡಿಗೆ 'ಮೆಂಟಲ್ ಮುಖ್ಯಮಂತ್ರಿ' ಎಂಬ ಕೀರ್ತಿ ಆದಷ್ಟು ಬೇಗ ಸಿಗುವ ಸಾಧ್ಯತೆಗಳಂತೂ ಇದೆ. ●

ಎಡೂರಪ್ಪನಿಂದ ಆರೆಸ್ಸೆಸ್‌ಗೆ ಅವಮಾನ ಕಂಡ್ರೀ

ಥೂತ್ತೇರಿ

ಯಾಹೂ

ಅಸಂಖ್ಯಾತ ಹುತ್ತದ ಕೋವೆಗಳಂತೆ ಒಂದೊಂದೇ ತೆರೆದುಕೊಳ್ಳುತ್ತಿರುವ ಎಡೂರಪ್ಪನ ಭ್ರಷ್ಟ ಹಗರಣಗಳ ವಿಷಯವಾಗಿ ಯಾರಾದರೂ ಆರೆಸ್ಸೆಸ್ಸಿಗರನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಹಳೇ ಪರಿಚಯದ 'ಚೆಡ್ಡಿ' ಮಂಜಣ್ಣನನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿತು. ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್ : "ನಮಸ್ತೆ ಸದಾ ವತ್ಸಲೇ ಮಾತೃಭೂಮಿ..."

"ಹಲೋ ಯಾರು?"

"ಮಂಜಣ್ಣಾರೆ, ನಾನು ಯಾಹು."

"ಏನ್ರಿ ಯಾಹೂ, ಚೆನ್ನಾಗಿದ್ದೀರೇನ್ರಿ?"

"ಎಲ್ಲಿ ಚೆನ್ನಾಗಿರಕ್ಕೆ ಸಾಧ್ಯ ಸಾರ್? ಎಡೂರಪ್ಪನಂತವನು ಮುಖ್ಯಮಂತ್ರಿಯಾಗಿರುವಾಗ ಚೆನ್ನಾಗಿರಕಾಯ್ತದ ಸಾರ್?"



"ನಮಗೂ ಅಂಗೆ ಆಗಿದೆ ಕಂಡ್ರೀ."

"ಮತ್ತೆ ಎಡೂರಪ್ಪನ್ನ ಹಾಡಿ ಹೊಗಳಿ ಕೊಂಡಾಡ್ತಯಿದ್ರಿ. ಅವ್ರುನಿಂದ್ಲೆ ನಿಮ್ಮದೊಂದು ಪುಸ್ತಕನೂ ಬಿಡುಗಡೆ ಮಾಡಿಸಿದ್ರಲ್ಲ ಸಾರ್? ಏನದರ ಹೆಸ್ರು? ಮತ್ತೆ ಹುಟ್ಟಿ ಬಾ ಹೂವೇ ಶೇಷ ಅಂತಲ್ವಾ ಸಾರ್?"

"ಆಗಿನ್ನು ಇಷ್ಟು ಕೆಟ್ಟಿರಲಿಲ್ಲ ಕಂಡ್ರಿ ಇವ್ರುನು."

"ಅಂತೂ ಇವ್ರುನು ಕೆಟ್ಟ ಕ್ಯರ ಹಿಡಿದವ್ರುನೆ ಅಂತ ಒಪ್ಗಿಗಳ್ತಿರಾ ಸಾರ್?"

"ನಾನು ಒಪ್ಗಿಗಳದೇನು, ಆತನೇ ಒಪ್ಕೆಕೊಂಡಿದಾನಲ್ರಿ. ನಂಜನಗೂಡು ನಂಜುಂಡೇಶ್ವರನ ಮೇಲಾಣೆ ಇನ್ನ ಮುಂದೆ ಅಕ್ರಮವಾಗಿ ಡಿನೋಟಿಫೈ ಮಾಡಲ್ಲ ಅಂತ ಸಾರ್ವಜನಿಕವಾಗಿ ಹೇಳ್ತಾನಲ್ಲಾ, ಎಷ್ಟು ದಡ್ಡಾರಿ ಇವ್ರುನು. ಇವ್ರುನ ಮಾತಿನಿಂದ ನಮ್ಮ ಆರೆಸ್ಸೆಸ್ ಮರಿಯಾದೀನೆ ಹೋಯ್ತಲ್ರೀ."

"ಎಡೂರಪ್ಪ ಬಿಜೆಪಿ ಅಲ್ಲವ ಸಾರ್?"

"ಇರಬಹುದು. ಆದ್ರು ಕರದಾಗ ಒಂದು ಬೈಠಕ್‌ನಲ್ಲಿ ಭಾಗವಹಿಸಿ ಕವಾಯತ್ ಮಾಡ್ಬೇಬೇಕು. ಅದ್ವಾನಿಯಿಂದ ಅಟಲ್‌ವರಿಗೂ ಎಲ್ರೂ ನಮ್ಮ ಆರೆಸ್ಸೆಸಿಗೆ ಅಧೀನರು ಕಂಡ್ರೀ."

"ಹಾಗಿದ್ರೆ ಎಡೂರಪ್ಪನ್ನ ನೀವು ನಿಯಂತ್ರಿಸಬಹುದಿತ್ತಲ್ಲವ ಸಾರ್?"

"ನಿಯಂತ್ರಿಸಬಹುದಿತ್ತು ಸರಿ, ಆದ್ರೆ ಕರ್ನಾಟಕದಲ್ಲಿ ಆರೆಸ್ಸೆಸ್ ಆರ್ಥಿಕವಾಗಿ ಬೇರೂರಬೇಕಾದ್ರೆ ಪ್ರಾಮಾಣಿಕ ಮುಖ್ಯಮಂತ್ರಿಯಿಂದ ಆಗಲ್ಲ ಕಂಡ್ರೀ. ನೋಡಿ ಎಲ್ಲಾ ಜಿಲ್ಲೆಲ್ಲೂ ಕೇಶವಕೃಪಗಳಾಗಬೇಕು. ಸಂಘದ ಸದಸ್ಯರು ಆರ್ಥಿಕವಾಗಿ ಸಬಲರಾಗಬೇಕು. ಅದಕ್ಕೆಲ್ಲಾ ಕಾಲಾವಕಾಶಬೇಕು ಅಂತ ಹೇಳಿ ನಾವು ಎಡೂರಪ್ಪನ್ನ ಸಹಿಸಿಕೊಂಡ್ರೆ ಈತ ತನ್ನ ಮಕ್ಕಳಿಗೆಲ್ಲಾ ಆಸ್ತಿ ಮಾಡ್ತಾಯಿದಾನಲ್ರಿ."

"ಅವನ ಇಂತ ಕೆಲಸದಿಂದ ನಿವಂಗೆ ಬೇಜಾರಾಗಿಲ್ವ ಸಾರ್?"

"ಬೇಜಾರೇನು, ನಿದ್ದೆನೆ ಬರಲ್ಲ ಕಂಡ್ರೀ."

"ನಿಜ ಸಾರ್, ನಿಮ್ಮ ಪ್ರಾಮಾಣಿಕವಾದ ಬದುಕನ್ನ ನಾನೇ ಕಣ್ಣಾರೆ ನೋಡಿದ್ದಿನಿ. ನಿಮ್ಮ ತಂದೆ ಖಾದಿ ಜುಬ್ಬ ಪಂಚೆ ಹಾಯ್ಕೊಂಡು ನಂಜನಗೂಡು ಹಲ್ಲುಪುಡಿ ಮಾರತಿದ್ರು. ನೀವು ಸಂಯುಕ್ತ ಕರ್ನಾಟಕ ಪೇಪರ್ ಹಂಚತಿದ್ರಿ. ನಿಮ್ಮಣ್ಣ ಪಿಗ್ಮಿ ಸಂಗ್ರಹಿಸತ್ತಿಲ್ಲ. ನಿಮ್ಮ ತಮ್ಮ ಲಾಟರಿ ಟಿಕೆಟ್ ಮಾರತಿದ್ದ. ಆದ್ರು ನೀವೆಲ್ಲಾ ಆರೆಸ್ಸೆಸ್ ಸಂಘಟನೆಲಿದ್ದ ಕಾರಣಕ್ಕೆ ನೆಮ್ಮದಿಯಾಗಿದ್ರಿ. ಅದು ಪ್ರಾಮಾಣಿಕ ಜೀವನದಿಂದ ಸಿಕ್ಕಿದ ನೆಮ್ಮದಿ. ಈಗ ಅಂತ ನೆಮ್ಮದಿನೆ ಹಾಳಾಗಿರಬಹುದಲ್ವ ಸಾರ್?"

"ಹೌದು ಕಂಡ್ರೀ. ಅವನು ಒಳ್ಳೆ ಆಡಳಿತ ಕೊಟ್ಟಿದ್ರೆ ಕರ್ನಾಟಕದಲ್ಲಿ ಬಿಜೆಪಿ ಸರಕಾರನ ಶಾಶ್ವತವಾಗಿ ಸ್ಥಾಪನೆ ಮಾಡಿ, ಇಷ್ಟೊತ್ತಿಗೆ ಗೋಹತ್ಯೆ ನಿಷೇಧ ಮಾಡಿ, ನಮ್ಮ ಶಾಲಾ-ಕಾಲೇಜಿನ ಪಠ್ಯಗಳನ್ನೆಲ್ಲಾ ಬದಲಾಯಿಸಿ, ಮೀಸಲಾತಿನ ರದ್ದು ಮಾಡಿ, ಎಲ್ಲ ದೇವಸ್ಥಾನಗಳೂ ಆರೆಸ್ಸೆಸಿಗರ ಸುಪರ್ದಿಗೆ ಬರಂಗೆ ಮಾಡೀ... ಒಂದೇ ಎರಡೇ ಒಂದು ರಾಶಿ ಕೆಲಸ ಇದ್ದೊ ಕಂಡ್ರೀ. ಮುಂಡೆಮಗ ಎಲ್ಲಾನೂ ಹಾಳುಮಾಡಿದ ಕಂಡ್ರಿ. ಅವನು ಪಾರ್ಟಿನೇ ಬಿಟ್ಟು ಹೊರಟಿದ್ದ ಕಂಡ್ರೀ. ಆಗ್ಲೆ ಕಳಿಸಿಕೊಡಬೇಕಾಗಿತ್ತು, ಉಳಿಸಿಕೊಂಡಿದ್ದೆ ತಪ್ಪಾಯ್ತು."

"ಯಾರು ಸಾರ್ ಉಳಿಸಿಕೊಂಡಿದ್ದು?"

"ಅದು ದಕ್ಷಿಣ ಕನ್ನಡದ ಸಂಚು ಕಂಡ್ರೀ. ಆ ಕಡೆ ನಮ್ಮ ಸಂಘದೋರು ಶೋಭಾ ಅನ್ನೊ ಸುಮಧ್ಯಮಳನ್ನು ಕಳಿಸಿ, ಆತನನ್ನು ಹಿಡದು ಮತ್ತೆ ಚೆಡ್ಡಿ ತೊಡಿಸಿ, ಲಾಠಿ ಕೊಟ್ರು. ಆದ್ರೀಗ ಆತ ಆರೆಸ್ಸೆಸ್ಸಿಗೆ ಮಾರಕವಾಗಿದ್ದಾನೆ."

"ಈಗ ನೀವು ಸಂಘದಿಂದ ಆತನನ್ನು ತೆಗೆಯಕ್ಕೆ ಬರಲ್ವ ಸಾರ್?"


"ಅದು ಬಹಳ ಕಷ್ಟ ಕಂಡ್ರೀ. ಸಂಘದ ಮರಿಯಾದಿನೇ ಜಾಲಾಡಿದ್ರೆ ಏನು ಮಾಡದೂ ಅನ್ನೋ ಯೋಚನೆಯಾಗಿದೆ. ಆದ್ರು ಆತ ಎಷ್ಟು ಮರಿಯಾದಿಗೆಟ್ಟೋನು ಅಂದ್ರೆ, ನಾವು ಕರಿದೇಯಿದ್ರೂ ಸಂಘದ ಕಚೇರಿಗೆ ಬಂದು ನಮ್ಮ ಮರಿಯಾದಿ ಹಾಳು ಮಾಡ್ತಾಯಿದಾನೆ."

"ಸಂಘದ ಮರಿಯಾದಿ ಅಂದ್ರೇನು ಸಾರ್?"

"ನಮ್ಮದು ದೇಶಭಕ್ತರ ಸಂಘಟನೆ. ಪ್ರಾಮಾಣಿಕರ ಸಂಘ, ತ್ಯಾಗ ಬಲಿದಾನದಿಂದ ಬೆಳೆದಿರೊ ಏಕೈಕ ಸಂಸ್ಥೆ. ಉದಾತ್ತ ಧ್ಯೇಯ ಮತ್ತು ಕನಸುಗಳನ್ನು ಹೊಂದಿರೋ ಸಮೂಹ ಕಂಡ್ರೀ."

"ಅಂತ ಸಮೂಹದಿಂದ ಬಂದಂತ ಎಡೂರಪ್ಪನ್ನ ನೋಡಿದ್ರೆ ನಿಮ್ಮ ಸಂಘಟನೆ ಬಗ್ಗೆ ಕಣ್ಣೀರಲ್ಲ ರಕ್ತ ಕಣ್ಣೀರು ಬತ್ತದೆ ಸಾರ್."

ಥೂತ್ತೇರಿ !!! ●



ಬೆದರಿಸಿ ಹಣ ವಸೂಲಿ ನಾರಾಯಣ ಗೌಡ ವಿರುದ್ಧ ಕೇಸ್



ವೈಟ್‌ಫೀಲ್ಡ್ ಪೊಲೀಸ್ ಠಾಣೆ ಮೊ ಸಂ 230/07 ಕಲಂ 385 ಐ.ಪಿ.ಸಿ

ಹೇಳಿಕೆ

ಶ್ರೀ ಕದ್ರಿ ಉಜ್ವಲ್, ಸೀನಿಯರ್ ಮ್ಯಾನೇಜರ್ ಹೆಚ್ ಆರ್ ಆಡ್ಮಿನಿಸ್ಟ್ರೇಷನ್, ಎರೀಜ್ ಎಂ.ಬಿ.ಐ ಇಂಡಿಯಾ ಲಿಮಿಟೆಡ್, ನಂ-62/14, ಎಂ.ಜಿ.ಆರ್ ಸಾಲೈ ನಾಗಲ್ ಕೇನಿ, ಕ್ರೋಂ ಪೇಟ್, ಚೆನ್ನೈ ಕಂಪನಿ.

ದಿನಾಂಕ-21-10-07

ನಾವು ಮೊಲ್ಲಂಡ ಕಂಪನಿಗೆ ಗುತ್ತಿಗೆ ಕೆಲಸಗಾರರನ್ನು ನಿಯೋಜಿಸುವ ಕೆಲಸ ಮಾಡಿಕೊಂಡಿರುತ್ತೇವೆ. ನಮ್ಮ ಕಂಪನಿಯು ಕಳೆದ ನಾಲ್ಕು ತಿಂಗಳಿನಿಂದ ಚೆನ್ನೈನಲ್ಲಿ ಕಾರ್ಯಾರಂಭಗೊಂಡಿರುತ್ತದೆ. ಅದಕ್ಕೂ ಮೊದಲು 1999 ರಿಂದ 2007 ಜುಲೈ ವರೆಗೆ ವೈಟ್‌ಫೀಲ್ಡ್‌ನ ಯುಕೇನ್ ಇಂಡಿಯಾ ಕಾರ್ಖಾನೆ ಮುಂಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ನಮ್ಮ ಕಂಪನಿಯಲ್ಲಿ ಮ್ಯಾಗ್ನೆಟಿಕ್ ಸಪರೇಟರ್ ಎಂಬ ಹೆಸರಿನ ಯಂತ್ರಗಳನ್ನು ಉತ್ಪಾದಿಸುತ್ತಿದ್ದು, ಬೆಂಗಳೂರಿನ ಕಛೇರಿಯಲ್ಲಿ ಒಟ್ಟು 34 ಜನ ಸಿಬ್ಬಂದಿಯವರು ಕೆಲಸ ಮಾಡುತ್ತಿದ್ದು, ಕಾರಣಾಂತರಗಳಿಂದ ನಮ್ಮ ಕಂಪನಿಯನ್ನು ಚೆನ್ನೈಗೆ ವರ್ಗಾಯಿಸಲು ಆಡಳಿತ ಮಂಡಳಿಯವರು ತೀರ್ಮಾನಿಸಿ ಬೆಂಗಳೂರಿನಲ್ಲಿ ಕೆಲಸ ಮಾಡುವ ಎಲ್ಲಾ ನೌಕರರನ್ನು ಚೆನ್ನೈ ಬ್ರಾಂಚಿಗೆ ಬಂದು ಕೆಲಸ ಮಾಡುವಂತೆ ತಿಳಿಸಿದಾಗ ಸುಮಾರು 15 ಜನರು ಚಿದಾನಂದ ಎಂಬ ನೌಕರರ ನೇತೃತ್ವದಲ್ಲಿ ಬೇಡಿಕೆಯನ್ನು ಮುಂದಿಟ್ಟು, ನಾವು ಚೆನ್ನೈಗೆ ಬರುವುದಿಲ್ಲ ಎಂದು ಜಾಗದ ತೆಗೆದಾಗ ನಮ್ಮ ಡೈರೆಕ್ಟರ್‌ರವರು ಕೆಲಸಗಾರರನ್ನು ಸರಬರಾಜು ಮಾಡಿದ ಮಹಾಬಲೇಶ್ವರ ಎಂಟರ್‌ಪ್ರೈಸಸ್ ರವರಿಗೆ ತಿಳಿಸಿದಾಗ ಅವರು ಕೆಲಸಗಾರರಿಗೆ ಎರಡು ತಿಂಗಳ ಮುಂಗಡ ಹಣ ನೀಡಿ ಕಂಪನಿಯಿಂದ ಬಿಡುಗಡೆ ಮಾಡುವಂತೆ ತಿಳಿಸಿದರು ಅದೇ ರೀತಿ ನಮ್ಮ ಕಂಪನಿಯವರು ಕಾರ್ಮಿಕರಿಗೆ ಕಂಟ್ರಾಕ್ಟರ್ ಹೇಳಿದಷ್ಟು ಹಣವನ್ನು ನೀಡಿ ಕಂಪನಿಯಿಂದ ತೆರವುಗೊಳಿಸಲು ಹೇಳಿದಾಗ ಸುಮಾರು 15 ಜನ ಕಾರ್ಮಿಕರು ಚಿದಾನಂದ ಎಂಬುವರ ನೇತೃತ್ವದಲ್ಲಿ ಕಂಪನಿಯವರ ತೀರ್ಮಾನವನ್ನು ಒಪ್ಪದೆ ಕನ್ನಡ ರಕ್ಷಣಾ ವೇದಿಕೆಯವರನ್ನು ದಿನಾಂಕ 11-05-07 ರಂದು ನಮ್ಮ ಕಛೇರಿಗೆ ಕರೆದುಕೊಂಡು ಬಂದಿದ್ದು ನಾರಾಯಣಗೌಡ ರವರ ನೇತೃತ್ವದಲ್ಲಿ ಘೋಷಣೆಗಳನ್ನು ಕೂಗಿ ಅಂತಿಮವಾಗಿ ನಮ್ಮ ಡೈರೆಕ್ಟರ್ ಡಾ॥ ಪಿ.ಪಾರ್ಥ ವೆಂಕಟರಾಮನ್‌ರವರೊಂದಿಗೆ ನೌಕರರು ಮತ್ತು ಕನ್ನಡ ರಕ್ಷಣಾ ವೇದಿಕೆಯವರು ಮಾತುಕತೆ ನಡೆಸಿ ನಮ್ಮ ಡೈರೆಕ್ಟರ್‌ರವರನ್ನು ಹೆದರಿಸಿ ಈ ಕೆಳಕಂಡಂತೆ ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ.

1)ಆರ್.ಸುರೇಶ್ 4,37,500 2) ಆರ್.ಸುರೇಶ್ 4,37,500

3)ಟಿ.ಎ.ನಾರಾಯಣಗೌಡ 4,37,500 4) ಟಿ.ಎ.ನಾರಾಯಣಗೌಡ 4,37,500

5)ಕನ್ನಡ ರಕ್ಷಣಾ ವೇದಿಕೆ 4,37,500 6)ಕನ್ನಡ ರಕ್ಷಣಾ ವೇದಿಕೆ 4,37,500 ಚೆಕ್‌ಗಳನ್ನು ಪಡೆದುಕೊಂಡಿರುತ್ತಾರೆ. ಮತ್ತು ಮೇಲ್ಕಂಡ ಚೆಕ್ಕುಗಳನ್ನು ನೀಡದೆ ಹೋದರೆ ನಿಮ್ಮ ಕಾರ್ಖಾನೆ ಅಸ್ತಿಪಾಸ್ತಿಯನ್ನು ಹಾಳು ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ಮುಂದುವರೆದು ಕಂಪನಿಯಲ್ಲಿದ್ದ ಏಳು ಜನ ಹಂಗಾಮಿ ನೌಕರರಿಗೆ ತಲಾ 1.75 ಲಕ್ಷ ರೂಗಳಿಗೆ ಚೆಕ್ ನೀಡುವಂತೆ ಭಯ ಪಡಿಸಿ ಅದನ್ನು ಕೊಡಿಸಿರುತ್ತಾರೆ. ಈ ಘಟನೆಗೆ ಕನ್ನಡ ರಕ್ಷಣಾ ವೇದಿಕೆಯ ನಾರಾಯಣ ಗೌಡ ನಮ್ಮ ಕಂಪನಿಯ ನೌಕರ ಚಿದಾನಂದ, ಮ್ಯಾನೇಜರ್ ಗಣೇಶ್, ಅಪ್ಪಣ್ಣರವರು ಪಿತೂರಿ ಮಾಡಿ ನಮ್ಮ ಡೈರೆಕ್ಟರ್‌ರವರಿಗೆ ಪ್ರಾಣ ಭಯ ಪಡಿಸಿ ಒಟ್ಟು 85.66 ಲಕ್ಷಗಳಷ್ಟು ಮೊತ್ತಕ್ಕೆ ಚೆಕ್ಕುಗಳನ್ನು ಬಲವಂತವಾಗಿ ಪಡೆದು ಹೋಗಿರುತ್ತಾರೆ. ಆರೋಪಿಗಳನ್ನು ನೋಡಿರುತ್ತೇವೆ ಮತ್ತೆ ನೋಡಿದರೆ ಗುರುತಿಸುತ್ತೇವೆ.

ನನ್ನ ಮುಂದ ... ಕೇಳದ ಸರಿಯಿದೆ

ಕದ್ರಿ ಉಜ್ವಲ್ ಪೊಲೀಸರಿಗೆ ನೀಡಿರುವ ಹೇಳಿಕೆ

ಕರವೇ ಅಧ್ಯಕ್ಷ ನಾರಾಯಣ ಗೌಡ, ಆರ್. ಸುರೇಶ್ ಹಾಗೂ ಮತ್ತಿತರರ ವಿರುದ್ಧ ಎರೀಜ್ ಇಂಡಿಯಾ ಕಂಪನಿಯವರು ನೀಡಿರುವ ದೂರಿನನ್ವಯ ವೈಟ್‌ಫೀಲ್ಡ್ ಪೊಲೀಸರು ಸಮಗ್ರ ತನಿಖೆ ನಡೆಸಿ ಈಗ ಚಾರ್ಜ್‌ಶೀಟ್ ಹಾಕಿದ್ದಾರೆ. ಐಪಿಸಿ ಸೆಕ್ಷನ್ 385 ರಡಿ ಜೀವ ಬೆದರಿಕೆ ಹಾಕಿ ಹಣ ವಸೂಲಿ ಮಾಡಿರುವ ಆರೋಪದಡಿ ನಾರಾಯಣಗೌಡ ಮತ್ತಿತರರ ವಿರುದ್ಧ ಪ್ರಕರಣ ದಾಖಲಾಗಿದೆ. ನಾರಾಯಣಗೌಡರ ಹೆಸರಿನಲ್ಲಿ ಕಿತ್ತುಕೊಂಡಿದ್ದ ಚೆಕ್ ಸಂಖ್ಯೆ 6666530 ಹಾಗೂ 6666531 ಗಳು ಅವೆನ್ಯೂ ರಸ್ತೆಯ ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ನಗದಾಗಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದೆ. ◆◆◆


ಬೆಂಗಳೂರು ನಗರದ ವೈಟ್‌ಫೀಲ್ಡ್ ಪೊಲೀಸರು ಬೆದರಿಸಿ ಹಣ ವಸೂಲಿ ಮಾಡಿರುವ ಪ್ರಕರಣವೊಂದನ್ನು ಪತ್ತೆಹಚ್ಚಿ ಕೇಸ್ ದಾಖಲಿಸಿದ್ದಾರೆ.

ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ. ನಾರಾಯಣ ಗೌಡ, ಆರ್. ಸುರೇಶ್ ಮತ್ತಿತರರ ವಿರುದ್ಧ ದಾಖಲಾಗಿರುವ ಈ ಪ್ರಕರಣ ಸಂಖ್ಯೆ 230/2007 ರ ವಿವರಗಳನ್ನು ಡೆಕ್ಕನ್ ಹೆರಾಲ್ಡ್ ಇಂಗ್ಲಿಷ್ ದಿನಪತ್ರಿಕೆಯು ನವೆಂಬರ್ ಒಂದನೇ ತಾರೀಖಿನ ಸಂಚಿಕೆಯಲ್ಲಿ ದಾಖಲೆ ಸಹಿತ ಪ್ರಕಟಿಸಿದೆ.

ಈ ಪ್ರಕರಣದ ವಿವರಗಳು ಹೀಗಿವೆ.

ಕಾರ್ಮಿಕ ವಿವಾದ-ಕರವೇ ಪ್ರವೇಶ

ಬೆಂಗಳೂರಿನ ವೈಟ್‌ಫೀಲ್ಡ್ ಏರಿಯಾದಲ್ಲಿರುವ ಯೂಕೇನ್ ಇಂಡಿಯಾ ಕಾರ್ಖಾನೆಯ ಮುಂಭಾಗದಲ್ಲಿ ಎರೀಜ್ ಎಂಬಿಇ ಇಂಡಿಯಾ ಲಿಮಿಟೆಡ್ ಎನ್ನುವ ಕಂಪನಿಯೊಂದು ಇತ್ತು. 1999 ರಿಂದ 2007 ರವರೆಗೆ ಈ ಕಂಪನಿ ಬೆಂಗಳೂರಿನಲ್ಲಿದ್ದು ನಂತರ ಆಡಳಿತಾತ್ಮಕ ಕಾರಣಗಳಿಂದಾಗಿ ಚೆನ್ನೈಗೆ ಸ್ಥಳಾಂತರಗೊಂಡಿತ್ತು. ಅವತ್ತು ಹಾಗೆ ಸ್ಥಳಾಂತರಗೊಳ್ಳುವಾಗ ಕಂಪನಿಯ 34 ನೌಕರರಿಗೆ ಚೆನ್ನೈಗೆ ಬಂದು ಕೆಲಸ ಮಾಡುವಂತೆ ಸೂಚಿಸಲಾಗಿತ್ತು. ಮ್ಯಾಗ್ನೆಟಿಕ್ ಸಪರೇಟರ್ ಮೆಷಿನ್‌ಗಳನ್ನು ಉತ್ಪಾದಿಸುತ್ತಿದ್ದ ಎರೀಜ್ ಕಂಪನಿಯ ಚೆನ್ನೈ ಘಟಕಕ್ಕೆ ಹೋಗಲು ಕೆಲವು ಕಾರ್ಮಿಕರು ಒಪ್ಪಿದರು. ಹಲವರು ಒಪ್ಪಲಿಲ್ಲ. ಹಾಗೆ ಒಪ್ಪದ 15 ಮಂದಿ ಕಾರ್ಮಿಕರು ಚಿದಾನಂದ ಎಂಬುವವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಕೆಲಸ ಕಳೆದುಕೊಳ್ಳಲಿರುವ ಕಾರ್ಮಿಕರಿಗೆ ಕಂಪನಿಯವರು ಸೂಕ್ತ ಪರಿಹಾರ ನೀಡಬೇಕೆಂಬುದೇ ಅವರ ಬೇಡಿಕೆಯಾಗಿತ್ತು.



ಕದ್ರಿ ಉಜ್ವಲ್


ಮತ್ತದು ನ್ಯಾಯಸಮ್ಮತವೂ ಆಗಿತ್ತು. ಆದರೆ ಈ ಕಾರ್ಮಿಕರ ಪೈಕಿ ಬಹುತೇಕರು ಕ್ಯಾಶುವೆಲ್ ನೌಕರರಾಗಿದ್ದು ವೈಟ್‌ಫೀಲ್ಡ್‌ನ ಮಹಾಬಲೇಶ್ವರ ಎಂಟರ್‌ಪ್ರೈಸಸ್ ಮೂಲಕ ಗುತ್ತಿಗೆ ಕೆಲಸಗಾರರಾಗಿ ಸರಬರಾಜಾಗಿದ್ದವರು. ಈ ವಿವಾದಕ್ಕೆ ಸಂಬಂಧಿಸಿದಂತೆ ಕಂಪನಿಯು ಮಹಬಲೇಶ್ವರ ಸಂಸ್ಥೆಯವರನ್ನು ಕೇಳಿದಾಗ ಅವರು ಕ್ಯಾಶುವೆಲ್ ಕಾರ್ಮಿಕರಿಗೆ ಎರಡು ತಿಂಗಳ ಸಂಬಳ ನೀಡಿ ಕಳುಹಿಸಬಹುದು ಎಂದಿದ್ದರು. ಎರೀಜ್ ಕಂಪನಿಗೂ ಈ ವ್ಯವಹಾರ ಒಪ್ಪಿಗೆಯಾಯಿತು. ಆದರೆ ಅದು ಕಡಿಮೆ ಪರಿಹಾರದ ಮೊತ್ತವಾಗಿದ್ದ ಕಾರಣ ಕಾರ್ಮಿಕರು ಒಪ್ಪಲಿಲ್ಲ. ಅವರು 2007 ರ ಮೇ ಹನ್ನೊಂದನೆ ತಾರೀಖು ಕರ್ನಾಟಕ ರಕ್ಷಣಾ ವೇದಿಕೆಯವರನ್ನು ಕಾರ್ಖಾನೆಗೆ ಕರೆಸಿ ಪ್ರತಿಭಟಿಸಿದರು.

ಕಾರ್ಖಾನೆಯ ಸೀನಿಯರ್ ಮ್ಯಾನೇಜರ್ ಕದ್ರಿ ಉಜ್ವಲ್ ಎಂಬುವವರು ನೀಡಿರುವ ಹೇಳಿಕೆಯ ಪ್ರಕಾರ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣ ಗೌಡ ಕಂಪನಿಯ ಡೈರೆಕ್ಟರ್ ಡಾ. ಪಿ. ಪಾರ್ಥ ವೆಂಕಟರಾಮನ್‌ರವರನ್ನು ಬೆದರಿಸಿ 85.66 ಲಕ್ಷ ರೂಪಾಯಿಗಳಿಗೆ ಚೆಕ್‌ಗಳನ್ನು ಬರೆಸಿಕೊಂಡು ಹೋಗಿದ್ದಾರೆ.

ಈ ಮೊತ್ತವು ಕಾರ್ಮಿಕರಿಗೆ ಪರಿಹಾರ ನೀಡಿಕೆಯ ನೆಪದಲ್ಲಿ ಪಡೆದದ್ದಾಗಿತ್ತು. ಆದರೆ ಚೆಕ್‌ಗಳನ್ನು ಪಡೆಯುವಾಗ ನಾರಾಯಣ ಗೌಡ ಹಾಗೂ ಕರವೇಯ ವಕೀಲರಾಗಿದ್ದ ಆರ್. ಸುರೇಶ್‌ರ ವೈಯಕ್ತಿಕ ಹೆಸರಿನಲ್ಲಿ 4,37,500 ರೂ.ಗಳ ತಲಾ ಎರಡು ಚೆಕ್‌ಗಳಂತೆ ಬರೆಸಿಕೊಂಡಿದ್ದಾರೆ.

ಆ ಸಂದರ್ಭದಲ್ಲಿ ಇವರಿಬ್ಬರೂ ಕಾರ್ಖಾನೆಯ ಕಾರ್ಮಿಕರಾಗಿರಲಿಲ್ಲ ಎಂಬುದು ಇಲ್ಲಿ ಗಮನಾರ್ಹ.

ಅಷ್ಟೇ ಅಲ್ಲದೆ ಕಾರ್ಖಾನೆಯ ಏಳು ಜನ ಹಂಗಾಮಿ ನೌಕರರಿಗೆ ತಲಾ 1.75 ಲಕ್ಷ ರೂ.ಗಳ ಚೆಕ್‌ಗಳನ್ನು ಪಡೆಯಲಾಯಿತು. ಮ್ಯಾನೇಜರ್ ಕದ್ರಿ ಉಜ್ವಲ್‌ರ ಹೇಳಿಕೆಯ ಪ್ರಕಾರ ನಾರಾಯಣ ಗೌಡ, ನೌಕರ ಚಿದಾನಂದ, ಗಣೇಶ್, ಅಪ್ಪಣ್ಣ ಮುಂತಾದವರು ಕಂಪನಿಯ ನಿರ್ದೇಶಕರಿಗೆ ಪ್ರಾಣ ಬೆದರಿಕೆ ಹಾಕಿ ಒಟ್ಟು 85.66 ಲಕ್ಷ ರೂಪಾಯಿಗಳಿಗೆ ಚೆಕ್‌ಗಳನ್ನು ಬರೆಸಿಕೊಂಡು ಹೋಗಿದ್ದಾರೆ.



ಪಾರ್ಥ ವೆಂಕಟರಾಮನ್

ಈ ಬೆದರಿಸಿ ಹಣ ವಸೂಲಿ ಮಾಡಿದ ಘಟನೆಯ ಬಗ್ಗೆ ಎರೀಜ್ ಕಂಪನಿಯು ನಂತರ ವೈಟ್‌ಫೀಲ್ಡ್ ಪೊಲೀಸರಿಗೆ ದೂರು ನೀಡಿತು. ಪೊಲೀಸರು ತನಿಖೆ ಆರಂಭಿಸಿದಾಗ ಪತ್ತೆಯಾದ ವಿಚಾರಗಳು ಹೀಗಿವೆ:

ನಾ. ಗೌಡರ ಬ್ಯಾಂಕ್ ಖಾತೆಗೆ ಹಣ

ಅವೆನ್ಯೂ ರಸ್ತೆಯ ಐಸಿಐಸಿಐ ಬ್ಯಾಂಕ್‌ನ ಶಾಖೆಯಲ್ಲಿ ನಾರಾಯಣ ಗೌಡ ಖಾತೆ ಸಂಖ್ಯೆ 035900000365 ಅನ್ನು ಹೊಂದಿದ್ದು ಎರೀಜ್ ಕಂಪನಿಯಿಂದ ಬೆದರಿಸಿ ಪಡೆದಿದ್ದ 6 ಚೆಕ್‌ಗಳ ಪೈಕಿ 2 ಚೆಕ್‌ಗಳು ಅಲ್ಲಿ ನಗದಾಗಿದ್ದು ಪೊಲೀಸರಿಗೆ ಕಂಡು ಬಂದಿದೆ. ಚೆಕ್ ಸಂಖ್ಯೆ 666528 ರ ಮೂಲಕ 4,30,500 ರೂಪಾಯಿ ಹಾಗೂ ಚೆಕ್ ಸಂಖ್ಯೆ 666529 ರ ಮೂಲಕ 4,37,500 ರೂ.ಗಳು ನಾರಾಯಣ ಗೌಡರ ವೈಯಕ್ತಿಕ ಖಾತೆಗೆ ಜಮೆ ಆಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮಹದೇವಪುರ ಬ್ರಾಂಚ್ ಮೂಲಕ ಈ ಚೆಕ್ ಮೊತ್ತ ನಾರಾಯಣ ಗೌಡರ ಖಾತೆಗೆ ದಿನಾಂಕ 15.5.2007 ರಂದು ಜಮೆಯಾಗಿದೆ. ಐಸಿಐಸಿಐ ಬ್ಯಾಂಕ್‌ನ ಅಸಿಸ್ಟೆಂಟ್ ಮ್ಯಾನೇಜರ್ ಅಜಿತ್ ಕುಮಾರ್ ಈ ವಹಿವಾಟಿನ ಪೂರ ವಿವರಗಳನ್ನು ವೈಟ್‌ಫೀಲ್ಡ್‌ನ ಪೊಲೀಸರಿಗೆ ಲಿಖಿತವಾಗಿ ನೀಡಿದ್ದಾರೆ.

ಸದ್ಯಕ್ಕೆ ನಾ. ಗೌಡರ ಐಸಿಐಸಿಐ ಖಾತೆ ಸಂಖ್ಯೆ 0359030000365 ಅನ್ನು ಪೊಲೀಸರು ಫ್ರೀಜ್ ಮಾಡಿಸಿದ್ದಾರೆ.



ಗೋಪಾಲ್ ಕೃಷ್ಣ



ನಾರಾಯಣಗೌಡರ ಹೆಸರಿನಲ್ಲಿರುವ ಚೆಕ್...

ನಾರಾಯಣಗೌಡರ ಹೆಸರಿನಲ್ಲಿ ಕಿತ್ತುಕೊಂಡಿದ್ದ ಸಂಖ್ಯೆ 6666530 ಹಾಗೂ 6666531 ಗಳು ಅವೆ[ನ್ಯೂ] ರಸ್ತೆಯ ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್[ನಲ್ಲಿ] ನಗದಾಗಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾ[ಗಿದೆ].

ಈ ಬ್ಯಾಂಕ್ ಶಾಖೆಯಲ್ಲಿ ನಾರಾಯಣ ಗೌಡ ಅಕೌ[ಂಟ್] ನಂಬರ್ 5122 ಹೊಂದಿದ್ದು ಒಟ್ಟು ಎಂಟು ಲ[ಕ್ಷ] ಎಪ್ಪತ್ತೈದು ಸಾವಿರ ರೂಪಾಯಿಗಳಷ್ಟು ಹಣ ನಾ. ಗೌ[ಡರ] ಅಕೌಂಟಿಗೆ ಜಮೆಯಾಗಿದೆ ಎಂಬುದಾಗಿ ಬ್ಯಾಂಕಿನ ಮ್ಯಾನೇ[ಜರ್] ಸಿ. ಶೇಖರ್ ಪೊಲೀಸರಿಗೆ ಲಿಖಿತ ಹೇಳಿಕೆ ನೀಡಿರುವ[ುದು] ಪತ್ತೆಯಾಗಿದೆ.

ಇದಿಷ್ಟೇ ಅಲ್ಲದೆ ಎರೀಜ್ ಇಂಡಿ[ಯಾ] ಕಂಪನಿಯ 9 ಕಾರ್ಮಿಕರಿಗೆ ಪರಿಹಾ[ರದ] ರೂಪದಲ್ಲಿ ನೀಡಿದ್ದ 8.23 ಲಕ್ಷ ರೂ[ಪಾಯಿ] ಬಾಬ್ತು 9 ಚೆಕ್‌ಗಳೂ ... ನಾರಾಯಣಗೌಡರ ಅಕೌಂಟ್ ನಂ 5122 ರ ಮೂಲಕವೇ ವ್ಯವ[ಹಾರ]ಲ್ಪಟ್ಟಿರುವುದು ಪತ್ತೆಯಾಗಿದೆ. ಎರಿ[ಜ್] ಇಂಡಿಯಾ ಕಂಪನಿಯ ನೌಕರರಾ[ದ] ಚಿದಾನಂದ್, ಊರ್ಣವ... ಶ್ರೀನಿವಾಸರಾಜು, ಸೂರ್ಯಪ್ರಕಾಶ್, ಅನುರೂಪ್ ಪಾಲ್, ಶ್ರೀದ... ವೇಣುಗೋಪಾಲ್, ಬಿ.ಕೆ. ಗಣೇ[ಶ್], ಜಯರಾಮ ರೈ ಹಾಗೂ ಶೀಲಾ ಎಂಬುವರಿಗೆ ಕಂಪನಿಯ ಚೆಕ್ ಸ[ಂಖ್ಯೆ] 811639 ರಿಂದ 811647 ರ[ವರೆಗೆ] ನೀಡಿದೆ. ಆದರೆ ಈ ಚೆಕ್‌ಗಳೆಲ್ಲಾ ಕ್ಯಾಷ್ ಆಗಿರುವ[ುದು] ಆಯಾ ಕಾರ್ಮಿಕರ ಪರ್ಸನಲ್ ಬ್ಯಾಂಕ್ ಖಾತೆಗಳ[ಲ್ಲಿ] ಅಲ್ಲ. ಬದಲಾಗಿ ನಾರಾಯಣ ಗೌಡರ ಬ್ಯಾಂಕ್ ಅಕೌಂಟ[ಿನಲ್ಲಿ] ಎಂಬುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ.

ಲಾಯರ್ ಸುರೇಶ್ ಬಗ್ಗೆ ತನಿಖೆ

ಪೊಲೀಸರ ತನಿಖೆಯಲ್ಲಿ ಕರವೇ ಸಂಘಟನೆಯ ... ಸುರೇಶ್ ಕೂಡ ಹಣ ಪಡೆದಿರುವ[ುದು] ಬೆಳಕಿಗೆ ಬಂದಿದೆ. ಎರೀಜ್ ಇಂಡಿ[ಯಾ] ಕಂಪನಿಯ ಡೈರೆಕ್ಟರ್ ಡಾ. ಪಾರ್ಥ[ರನ್ನು] ಬೆದರಿಸಿ ಪಡೆದಿದ್ದ ಚೆಕ್‌ಗಳ ... 666526 ಹಾಗೂ 666527 ನಂ[ಬರಿನ] ಚೆಕ್‌ಗಳನ್ನು ಆರ್. ಸುರೇಶ್ ಹೆಸ[ರಿನಲ್ಲಿ] ಬರೆಸಿಕೊಳ್ಳಲಾಗಿದೆ. ವಿಜಯನಗ[ರದ] ಜನತಾ ಕೊ-ಆಪರೇಟಿವ್ ಬ್ಯಾಂಕ್[ನಲ್ಲಿ] ಈ ಚೆಕ್‌ಗಳು ನಗದಾಗಿದೆ. ಸುರೇಶ್‌ಗೆ 014556 ನಂಬರ್‌ನ ... ಯಿದ್ದು 4,37,500 ರೂ.ಗಳ ಎ[ರಡು] ಚೆಕ್‌ಗಳ ಹಣ ಅಲ್ಲಿ ಸಂದಾಯ[ವಾಗಿ]ರುವುದು ತನಿಖೆಯಲ್ಲಿ ಪತ್ತೆಯಾ[ಗಿದೆ]. ಬ್ಯಾಂಕ್ ಮ್ಯಾನೇಜರ್ ಎಚ್.ವಿ. ವಿ... ಈ ಬಗ್ಗೆ ವೈಟ್‌ಫೀಲ್ಡ್ ಪೊಲೀ[ಸರಿಗೆ] ಲಿಖಿತ ಹೇಳಿಕೆ ನೀಡಿದ್ದಾರೆ.

ಸುರೇಶ್‌ನ ಬ್ಯಾಂಕ್ ಖಾತೆಯನ್ನು ಪೊಲೀಸರು ಸೀಜ್ ಮಾಡಿದ್ದಾರೆ. ಕರವೇ ಅಧ್ಯಕ್ಷ ನಾರಾಯಣ ಗ[ೌಡ], ಆರ್. ಸುರೇಶ್ ಹಾಗೂ ಮತ್ತಿತರರ ವಿರುದ್ಧ ಎರಿ[ಜ್] ಇಂಡಿಯಾ ಕಂಪನಿಯವರು ನೀಡಿರುವ ದೂರಿನ[ನ್ವಯ] ವೈಟ್‌ಫೀಲ್ಡ್ ಪೊಲೀಸರು ಸಮಗ್ರ ತನಿಖೆ ನಡೆಸಿ ... ಚಾರ್ಜ್‌ಶೀಟ್ ಹಾಕಿದ್ದಾರೆ. ಐಪಿಸಿ ಸೆಕ್ಷನ್ 385 ... ಜೀವ ಬೆದರಿಕೆ ಹಾಕಿ ಹಣ ವಸೂಲಿ ಮಾಡಿ[ರುವ] ಆರೋಪದಡಿ ನಾರಾಯಣಗೌಡ ಮತ್ತಿತರರ ವಿರುದ್ಧ ಪ್ರ[ಕರಣ] ದಾಖಲಾಗಿದೆ.

• ಪಾರ್ವತಿ...

ಮಾಗಡಿ ರೋಡ್ ಡಬಲ್ ಮರ್ಡರ್

ಡೈಮಂಡ್ ಬಾಬು ಹತ್ಯೆಯ ಹಿಂದೆ ಪಾಲಿಕೆ ಪಾಲಿಟಿಕ್ಸ್?

ಮಾಗಡಿ ರಸ್ತೆಯ ಹಳೇ ರೌಡಿ ಡೈಮಂಡ್ ಬಾಬು ತನ್ನ ಸಹಚರರಿಂದಲೇ ಅಂತ್ಯ ಕಂಡಿದ್ದಾನೆ. ಆತನ ಜೊತೆಗಿದ್ದ ಮುನ್ನಾ ಉರ್ಫ್ ಮುನಿರಾಜು ಕೂಡ ಗುರು ಬಾಬುವಿನ ಜೊತೆಗೇ ಹೆಣವಾಗಿದ್ದಾನೆ. ನವೆಂಬರ್ 15ರ ರಾತ್ರಿ ಮಾಗಡಿ ರಸ್ತೆಯ ಅಂಜನ್ ಟಾಕೀಸ್ ಪಕ್ಕದ ಧ್ರುವ ಬಾರ್‌ನಲ್ಲಿ ಕುಡಿಯುತ್ತಾ ಕುಳಿತಿದ್ದ ಡೈಮಂಡ್ ಬಾಬು ಉರ್ಫ್ ಪ್ರಕಾಶ್ ಬಾಬು ಮತ್ತು ಮುನ್ನಾ ಅದೆಷ್ಟು ಭೀಕರವಾಗಿ ಕೊಲ್ಲಿಸಲ್ಪಟ್ಟಿದ್ದರೆಂದರೆ, ಬಾಬುವಿನ ಇಡೀ ದೇಹ ಮಾಂಸದ ಮುದ್ದೆಯಂತಾಗಿತ್ತು. ಜೊತೆಗಿದ್ದ ಮುನ್ನಾನ ದೇಹವೊಂದಕ್ಕೇ ಇಪ್ಪತ್ತೆರಡಕ್ಕೂ ಅಧಿಕ ಲಾಂಗ್ ಏಟುಗಳು ಬಿದ್ದಿದ್ದವು.

ಇದು ಕಳೆದ ಪಾಲಿಕೆ ಚುನಾವಣೆಯ ಪ್ರತಿಫಲವಾ ಅಥವಾ ಕೇವಲ ಅಣ್ಣಮ್ಮ ದೇವಿ ಉತ್ಸವದ ಕಲೆಕ್ಷನ್ ಜಗಳವಾ ಎಂಬುದಷ್ಟೇ ಬಾಕಿಯ ಪ್ರಶ್ನೆ. ಅದು ಕೆಂಪಾಪುರ ಅಗ್ರಹಾರ ಎಂಬ ಕೊಂಪೆಯ ನಿತ್ಯಕರ್ಮ ಕೂಡ. ಇಲ್ಲಿ ಗಲ್ಲಿಗೊಬ್ಬ ರೌಡಿ. ಏರಿಯಾಕ್ಕೊಬ್ಬ ಹಂತಕ. ಇಂಥದ್ದೇ ಒಂದು ತಂಡಕ್ಕೆ ಗ್ಯಾಂಗ್ ಲೀಡರ್ ಆಗಿದ್ದವನು ಪ್ರಕಾಶ್ ಬಾಬು ಉರ್ಫ್ ಡೈಮಂಡ್ ಬಾಬು.

ಕೆಂಪಾಪುರ ಅಗ್ರಹಾರದ 10ನೇ ಕ್ರಾಸಿನ ಸಿದ್ದಲಿಂಗೇಶ್ವರ ಸ್ಕೂಲ್ ಬಳಿ ಈತನ ಮನೆಯಿದೆ. ಅಲ್ಲಿಂದ 10ನೇ ಮನೆಯೇ ಈತನ ಜೊತೆ ಹತನಾದ ಮುನ್ನಾ ಉರ್ಫ್ ಮುನಿರಾಜುವಿನದ್ದು. ಕಳೆದ ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ತನ್ನ ಅತ್ತಿಗೆಯನ್ನು ನಿಲ್ಲಿಸಿ ಕಾಂಗ್ರೆಸ್‌ನ ಮಂಜುನಾಥ್ ವಿರುದ್ಧ ಕೆಲವೇ ಮತಗಳ ಅಂತರದಿಂದ ಸೋತವನು. ಮತ್ತೊಬ್ಬ ಹಳೇ ಪಾತಕಿ ಮಾಗಡಿ ರೋಡ್ ಕೃಷ್ಣ ಸೋತಿದ್ದೂ ಬರೇ ನಾನೂರು ಮತಗಳ ಅಂತರದಿಂದ. ಅಂತಹ ಸೋಮಣ್ಣನೇ ಚಿಕ್ಕ ಸುರೇಶ್ ಎಂಬ ತನ್ನ ಶಿಷ್ಯನ ಪತ್ನಿಗೆ ಬಿಜೆಪಿ ಟಿಕೆಟ್ ಕೊಡಿಸಿ ಕಣಕ್ಕಿಳಿಸಿದಾಗಲೂ ಕೃಷ್ಣ ತನ್ನ ಅತ್ತಿಗೆಯ ಮೂಲಕ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗಳೆಲ್ಲಕ್ಕೂ ನೀರು ಕುಡಿಸಿದ್ದ.

ಈಗ ಕೊಲೆಯಾಗಿರುವ ಡೈಮಂಡ್ ಬಾಬು, ಮುನ್ನಾ ಮುನಿರಾಜು ಮತ್ತು ಅವರನ್ನು ಮುಗಿಸಿದ ಲೆಫ್ಟ್ ಕಿರಣ, ಸಂಜಯ ಮುಂತಾದವರೆಲ್ಲ ನಿನ್ನೆಮೊನ್ನೆಯ ತನಕ ಕೃಷ್ಣನ ಜೊತೆಗೇ ಇದ್ದವರು. ಡೈಮಂಡ್ ಬಾಬು ಹಳೇ ರೌಡಿ. ಕೆಂಪಾಪುರ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ರೌಡಿ ಶೀಟಿದೆ. ಒಂದು ಕೊಲೆ ಕೇಸು, ಮತ್ತೊಂದು ದರೋಡೆ, ಇನ್ನೊಂದು ಕೊಲೆ ಯತ್ನ ಹೀಗೆ ತರಹೇವಾರಿ ಕ್ರಿಮಿನಲ್ ಕೇಸ್‌ಗಳನ್ನು ಮೈತುಂಬಾ ಹೊತ್ತೇ ರೌಡಿ ಎನಿಸಿಕೊಂಡ ಡೈಮಂಡ್ ಬಾಬು ತನ್ನ ಗುರು ಕೃಷ್ಣನ ವಿರುದ್ಧ ಪಾಲಿಕೆ ಚುನಾವಣೆಯಲ್ಲಿ ತಿರುಗಿಬಿದ್ದ.



ಬಹುಶಃ ಡೈಮಂಡ್ ಬಾಬು ಮತ್ತು ಆತನ ಗ್ಯಾಂಗ್ ಬಿಜೆಪಿಯ ಚಿಕ್ಕ ಸುರೇಶನ ಪತ್ನಿಯನ್ನು ಬೆಂಬಲಿಸದೆ ಕೃಷ್ಣನ ಬೆನ್ನಿಗೇ ನಿಂತಿದ್ದರೆ, ಸಲೀಸಾಗಿ ಕೃಷ್ಣನ ಅತ್ತಿಗೆಯೇ ಗೆದ್ದು ಅಲ್ಲಿ ಕಾಂಗ್ರೆಸ್ ನೆಲ ಕಚ್ಚುತ್ತಿತ್ತು. ಆದರೆ ದುಡ್ಡಿನ ದುರಾಶೆ ಇತ್ತಲ್ಲ, ಕೊನೆ ಗಳಿಗೆಯಲ್ಲಿ ಕೃಷ್ಣನಿಗೆ ಕೈಕೊಟ್ಟ ಬಾಬು ಮತ್ತು ಆತನ ಇಡೀ ಗ್ಯಾಂಗ್ ಬಿಜೆಪಿಯ ಪರ ಪ್ರಚಾರಕ್ಕಿಳಿಯಿತು. ಇದರಿಂದ ಕುದ್ದು ಹೋದ ಕೃಷ್ಣ ಬಾಬು ವಿರುದ್ಧ ಹಲ್ಲು ಮಸೆಯುತ್ತಿದ್ದ. ತನ್ನ ಅತ್ತಿಗೆಯ ಸೋಲಿಗೆ ಬಾಬು ಮತ್ತು ಆತನ ಗ್ಯಾಂಗ್ ಬಗೆದ ದ್ರೋಹವೇ ಕಾರಣ ಎಂದು ಲೆಕ್ಕ ಹಾಕಿದ್ದ.

ಇಷ್ಟೇ ಆಗಿದ್ದರೆ ಕ್ರಮೇಣ ಕೃಷ್ಣ ಕೂಡ ತಣ್ಣಗಾಗುತ್ತಿದ್ದನೋ ಏನೋ. ಆದರೆ ಬರಬರುತ್ತಾ ಬಾಬು ತಾನೇ ಏರಿಯಾದ ಲೀಡರ್ ಆಗಲೆತ್ನಿಸಿದ್ದ. ಒಂದಾನೊಂದು ಕಾಲಕ್ಕೆ ತನ್ನಂತೆ ರೌಡಿ ಆಗಿದ್ದ ಕೃಷ್ಣನೇ ಪಾಲಿಕೆ ಎಲೆಕ್ಷನ್ ರಾಜಕೀಯಕ್ಕೆ ಇಳಿದಿರುವಾಗ ತಾನೇನು ಕಮ್ಮಿ ಎಂದು ಕ್ರಮೇಣ ಲೀಡರ್ ಪೋಸು ಕೊಡಲಾರಂಭಿಸಿದ. ಇಲ್ಲಿ ಬಾಬು ಮಾಡಿದ ಎಡವಟ್ಟೆಂದರೆ ಯಾವ ಕೃಷ್ಣ ಮಾಗಡಿ ರಸ್ತೆಯ 8ನೇ ಕ್ರಾಸ್‌ನಲ್ಲಿ ಪ್ರತಿವರ್ಷ ಅಣ್ಣಮ್ಮ ದೇವಿ ಉತ್ಸವ ಮಾಡುತ್ತಿದ್ದನೋ ಅದೇ ರಸ್ತೆಯಲ್ಲಿ ತಾನೂ ಅಣ್ಣಮ್ಮ ದೇವಿ ಫಂಕ್ಷನ್ ಆರಂಭಿಸಿದ್ದು.

ಕೊಲೆಗೂ ವಾರದ ಮುನ್ನ ಆರ್ಕೆಸ್ಟ್ರಾ ಕರೆಸಿ ಅದ್ದೂರಿಯಾಗೇ ಅಣ್ಣಮ್ಮ ದೇವಿ ಉತ್ಸವ ನಡೆಸಿದ್ದ. ಇಡೀ ಮಾಗಡಿ ರೋಡ್, ಕೆಂಪಾಪುರ ಅಗ್ರಹಾರವನ್ನೂ ಬಿಡದೆ ಕಲೆಕ್ಷನ್ ಮಾಡಿದ್ದ. ಬಾಬು ತಮ್ಮ ಗೊರಾಡ, ಲೆಫ್ಟ್ ಕಿರಣ, ಸಂಜಯ, ಮುನ್ನಾ, ಬೆಟ್ಟಮ್ಮ ಸರ್ಕಲ್ಲಿನಲ್ಲಿ ಹಾವಳಿ ಇಡುವ ಗಿಡ್ಡಿ ಬಾಬು ಅಲಿಯಾಸ್ ಮೇಕೆ ಬಾಬು, ಇಪ್ಪತ್ತೆರಡನೆ ಕ್ರಾಸಿನಲ್ಲಿ ಅಡ್ಡೆ ಹಾಕುವ ಡಬಲ್ ಅಲಿಯಾಸ್ ಸೋಮ- ಹೀಗೆ ಕೆಂಪಾಪುರ ಅಗ್ರಹಾರದ ಅರ್ಧ ಡಜನ್ ರೌಡಿಗಳೆಲ್ಲ ಬಾಬುವಿನ ಕಾರ್ಯಕ್ರಮಕ್ಕೆ ಬಂದಿದ್ದರು.

ನಿನ್ನೆಮೊನ್ನೆಯ ತನಕ ಜೊತೆಗಿದ್ದು ಪಾಲಿಕೆ ಚುನಾವಣೆಯಲ್ಲಿ ಕೈಕೊಟ್ಟು, ಈಗ ತನ್ನ ಗಲ್ಲಿಗೇ ಬಂದು ತನ್ನ ವಿರುದ್ಧವೇ ಅಣ್ಣಮ್ಮ ಕಾರ್ಯಕ್ರಮ ಶುರು ಹಚ್ಚಿಕೊಂಡ ಬಾಬುವಿನ ಅಧಿಕ ಪ್ರಸಂಗಿತನವನ್ನು ಕೃಷ್ಣ ತಾನೇ ಹೇಗೆ ಸಹಿಸಿಕೊಳ್ಳಲು ಸಾಧ್ಯ? ಅಷ್ಟಕ್ಕೂ ಬಾಬು ಜೊತೆಯಲ್ಲಿದ್ದವರೆಲ್ಲ ಹಿಂದೊಮ್ಮೆ ತನ್ನ ಬಳಿ ಇದ್ದವರೇ. ಈ ಪೈಕಿ ಲೆಫ್ಟ್ ಕಿರಣ ಮತ್ತು ಸಂಜಯ ಎಂಬಿಬ್ಬರು ಪೋರ್ಕಿಗಳನ್ನು ಕೃಷ್ಣನ ವಿರುದ್ಧ ಛೂ ಬಿಟ್ಟನೆ?

ಇದು ಒಂದು ಲೆಕ್ಕಾಚಾರವಾದರೆ ಇದೆಲ್ಲವನ್ನು ಮೀರಿಸಿದ ಎಡವಟ್ಟಿಗೆ ಬಾಬು ಕೈ ಇಟ್ಟಿದ್ದ. ಲೀಡರ್ ಆಗಲು ಹೋಗಿ ಸಿಕ್ಕಸಿಕ್ಕ ಪೋರ್ಕಿಗಳೆಲ್ಲರನ್ನು ಜೊತೆ ಹಾಕಿಕೊಂಡ. ಲೆಫ್ಟ್ ಕಿರಣ ಹೇಳಿಕೇಳಿ ಪಕ್ಕಾ ತಲೆತಿರುಕ. ತಿಂಗಳ ಹಿಂದಷ್ಟೆ ತನಗೆ ಬಿಟ್ಟಿ ಇಡ್ಲಿ ಕೊಡಲಿಲ್ಲ ಎಂದು ರಸ್ತೆ ಬದಿಯ ಇಡ್ಲಿ ಗಾಡಿಯೊಂದನ್ನು ಎತ್ತಿ ನೆಲಕ್ಕೆ ಕುಕ್ಕಿದ್ದ. ಗಾಡಿಯ ಮಾಲೀಕನನ್ನೇ ಹಿಡಿದು ಬಡಿದಿದ್ದ. ಇದರ ವಿರುದ್ಧ ಕೆಂಪಾಪುರ ಅಗ್ರಹಾರದ ಇನ್ಸ್‌ಪೆಕ್ಟರ್ ಸ್ವಾಮಿ ಕುಮಾರ್ ಕಿರಣ್‌ನನ್ನು ಎಳೆದೊಯ್ದು ಜೈಲಿಗೆ ದಬ್ಬಿದ್ದರು.

ಈ ಕಿರಣನ ಜೊತೆಗಿದ್ದ ಸಂಜಯ ಇನ್ನೂ ಅನಾಹುತಕಾರಿ. ಆರು ತಿಂಗಳ ಹಿಂದಷ್ಟೇ ಯಾವುದೋ ಕೊಲೆ ಕೇಸೊಂದಕ್ಕೆ ಸಿಲುಕಿ ಜೈಲಿಗೆ ಹೋಗಿಬಂದಿದ್ದ. ಮತ್ತೊಬ್ಬ ಸಹಚರ ಮುನ್ನಾ ಅಲಿಯಾಸ್ ಮುನಿರಾಜು ಇವರಿಬ್ಬರಷ್ಟೆ ಅನಾಹುತಕಾರಿ. ಅಣ್ಣಮ್ಮ ಉತ್ಸವದ ಕಲೆಕ್ಷನ್ ಬೇರೆ ಜೋರಾಗೇ ಇತ್ತು. ಕಾರ್ಯಕ್ರಮದ ರಾತ್ರಿಯೇ ಬಾಬು ವಿರುದ್ಧ ಲೆಫ್ಟ್ ಕಿರಣ ಮತ್ತು ಸಂಜಯ ದುಡ್ಡಿನ ವಿಷಯದಲ್ಲಿ ಜಗಳ ಆರಂಭಿಸಿದ್ದರು.

ಅದು ಈ ಮಟ್ಟಕ್ಕೆ ಬರಬಹುದೆಂಬ ಲೆಕ್ಕಾಚಾರ ಬಾಬುವಿಗೆ ಇರಲಿಲ್ಲವೇನೋ. ಕಾರ್ಯಕ್ರಮ ಮುಗಿಯಿತಾದರೂ ಮಾಡಿದ ಕಲೆಕ್ಷನ್ನಿನ ಹಂಚಿಕೆ ವಿವಾದ ಮಾತ್ರ ಮುಗಿಯಲೇ ಇಲ್ಲ. ಎಷ್ಟೆಂದರೂ ತಾನೂ ಕೂಡ ಮರ್ಡರ್ ಕೇಸಿನಲ್ಲಿ ಜೈಲು ನೋಡಿಬಂದವನೇ. ಚಿಲ್ಲು ಹುಡುಗರು ತನ್ನ ಮುಂದೆ ಯಾವ ಲೆಕ್ಕ ಎಂದು ಲೆಕ್ಕ ಹಾಕಿದ ಬಾಬು ಪಾಲು ಕೇಳಿದ. ಕಿರಣ ಮತ್ತು ಸಂಜಯರನ್ನು ಅಂಜನ್ ಟಾಕೀಸ್ ಪಕ್ಕದ ಧ್ರುವ ಬಾರಿಗೆ ಕರೆಸಿಕೊಂಡೇ ರೋಫು ಹಾಕಿದ್ದಾನೆ. ಫಂಕ್ಷನ್ ಮಾಡಿರೋನು ನಾನು, ನಿನಗೇನಯ್ಯ ಲೆಕ್ಕ ಕೊಡೋದು? ಎಂದು ಉಗಿದು ಕಳಿಸಿದ್ದಾನೆ.

ಅಲ್ಲಿಗೆ ಸ್ಕೆಚ್ಚು ರೆಡಿಯಾಗಿತ್ತು. ಜೈಲಲ್ಲೇ ಪಳಗಿದ್ದ ಪಾತಕಿಗಳಾದ ಕಿರಣ ಮತ್ತು ಸಂಜಯರಿಗೆ ಬಾಬು ಪ್ರತಿಸಂಜೆಯಾದರೆ ಧ್ರುವ ಬಾರಿನಲ್ಲಿ ಅಡ್ಡೆ ಹಾಕುತ್ತಾನೆಂಬ ವಿಚಾರ ಗೊತ್ತಿತ್ತು. ನವೆಂಬರ್ 15ರ ರಾತ್ರಿ ಹತ್ತೂವರೆಯ ಹೊತ್ತಿಗೆ ಬಾಬು ಮಾಮೂಲಿನಂತೆ ಧ್ರುವ ಬಾರಿಗೆ ಬಂದಿದ್ದಾನೆ. ಜೊತೆಗೆ ಮುನ್ನಾ ಕೂಡ ಇದ್ದ. ಬಹುಶಃ ಕಿರಣ ಮತ್ತು ಸಂಜಯ ತನ್ನನ್ನು ಮುಗಿಸುವ ಧೈರ್ಯ ಮಾಡಲಿಕ್ಕಿಲ್ಲ ಎಂದೇ ಬಾಬು ಲೆಕ್ಕ ಹಾಕಿದ್ದ. ಆದರೆ ಎಲೆಕ್ಷನ್ನಿನಲ್ಲಿ ಸೋತಿದ್ದ ಕೃಷ್ಣ ಸಮಯ ಕಾಯುತ್ತಿದ್ದನಲ್ಲ. ಎಷ್ಟೆಂದರೂ ಕೃಷ್ಣ ಕೂಡ ಫೀಲ್ಡಿನಲ್ಲಿ ಪಳಗಿದ ಆಸಾಮಿಯೇ. ಒಂದಾನೊಂದು ಕಾಲಕ್ಕೆ ತನ್ನ ಜೊತೆಗೇ ಇದ್ದ ಕಿರಣ ಮತ್ತು ಸಂಜಯರನ್ನು ಕರೆದು ಕೃಷ್ಣನೇ ಸುಪಾರಿ ಕೊಟ್ಟನೆ? ಅಥವಾ ಕೃಷ್ಣ ರೊಕ್ಕ ಬಿಚ್ಚುತ್ತಿದ್ದಾನೆಂದು ಲೆಕ್ಕ ಹಾಕಿದ ಕಿರಣನ ಗ್ಯಾಂಗ್ ದುಸ್ಸಾಹಸಕ್ಕೆ ಇಳಿಯಿತಾ?

ಧ್ರುವ ಬಾರಿನಲ್ಲಿ ಕುಡಿಯುತ್ತಾ ಕುಳಿತಿದ್ದ ಬಾಬು ಮತ್ತು ಮುನ್ನಾರಿಗೆ ಇದ್ದಕ್ಕಿದ್ದಂತೆ ಕರೆಂಟ್ ಹೋದಾಗಲೇ ಗೊತ್ತಾಗಬೇಕಿತ್ತು. ಕರೆಂಟ್ ಹೋಗಿದ್ದೇ ತಡ, ಎಂಟತ್ತು ಮಂದಿ ಇದ್ದ ಹಂತಕ ಪಡೆ ಬಾರಿಗೆ ನುಗ್ಗಿದೆ. ಎರಾಬಿರ್ರಿ ಲಾಂಗುಗಳನ್ನು ಬೀಸಿದ್ದೇ ತಡ, ಬಾಬು ಮತ್ತು ಮುನ್ನ ಹೆಣವಾಗಿದ್ದಾರೆ. ಅದೆಂಥ ಭೀಕರವಾಗಿತ್ತೆಂದರೆ ಬಾರಿನಲ್ಲಿದ್ದ ಗಿರಾಕಿಗಳೆಲ್ಲ ಬಾಯಿ ಬಡಿದುಕೊಂಡು ಪರಾರಿಯಾಗಿದ್ದರು. ಹತ್ತೇ ನಿಮಿಷದಲ್ಲಿ ಕೆಲಸ ಮುಗಿಸಿದ ಹಂತಕರು ಅಷ್ಟೇ ಸಲೀಸಾಗಿ ಪರಾರಿಯಾಗಿದ್ದರು. ಕೆಂಪಾಪುರ ಅಗ್ರಹಾರದ ಇನ್ಸ್‌ಪೆಕ್ಟರ್ ಸ್ವಾಮಿ ಕುಮಾರ್ ಸದ್ಯ ಕಿರಣ, ಸಂಜಯ, ಮತ್ತವರ ತಂಡವನ್ನು ಬಂಧಿಸಿದ್ದಾರೆ ನಿಜ. ಆದರೆ ಇಲ್ಲಿಗೇ ಇದು ಮುಗಿಯುತ್ತಾ?

ಬಾಬು ತಮ್ಮ ಗೊರಾಡ ಕೂಡ ಫೀಲ್ಡು ಕಂಡವನೇ. ಇವತ್ತು ಬಾಬುವನ್ನು ಮುಗಿಸಿದವರು ನಾಳೆ ಕೃಷ್ಣನ ಕತ್ತಿಗೇ ಕೈ ಇಟ್ಟರೆ? ಜೊತೆಗಿದ್ದೇ ಗುರು ಕೃಷ್ಣನಿಗೆ ಕೈಕೊಟ್ಟು ತನ್ನೊಂದಿಗೆ ಅನಾಹುತಕಾರಿ ಹುಡುಗರನ್ನು ಸೇರಿಸಿಕೊಂಡು ಏನೋ ಮಾಡಲು ಹೋಗಿ ಇನ್ನೇನೋ ಆದ ಡೈಮಂಡ್ ಬಾಬು ಕೆಂಪಾಪುರ ಅಗ್ರಹಾರದ ದುರಂತಕ್ಕೆ ಸಣ್ಣ ಉದಾಹರಣೆಯಷ್ಟೇ.

- ರಾ. ಸೋ

ಬಡ್ಡಿಮಕ್ಕಳನ್ನು ಮೀರಿಸುವ ಯಡ್ಡಿ ಮಕ್ಕಳು

ಕಳ್ಳ ಮುಖ್ಯಮಂತ್ರಿ - ಮಳ್ಳಿ ಆರೆಸ್ಸೆಸ್

ಮುಖ್ಯಮಂತ್ರಿ ಯಡಿಯೂರಪ್ಪ ನಾಚಿಕೆ, ಮಾನ-ಮರ್ಯಾದೆಗಳನ್ನೆಲ್ಲಾ ಬಿಟ್ಟು ನಿಂತಿದ್ದಾರೆ. ತುರ್ತಾಗಿ ವಿಚಾರಣೆ ನಡೆಸಿ ತೀರ್ಪಿತ್ತರೆ ಈ ಯಡ್ಡಿ ಮತ್ತವರ ಮಕ್ಕಳಾದ ರಾಘವೇಂದ್ರ, ವಿಜಯೇಂದ್ರ, ಅಳಿಯ ಸೋಹನ್‌ಕುಮಾರ್ ಜೀವನಪರ್ಯಂತ ಜೈಲಿನಲ್ಲಿರಬೇಕಾಗುತ್ತದೆ!


ಹಾಗಿದೆ ಯಡ್ಡಿ ಗ್ಯಾಂಗ್‌ನ ಭ್ರಷ್ಟ ಕರ್ಮಕಾಂಡ.

ಆದರೆ ಆಶ್ಚರ್ಯದ ಸಂಗತಿ ಏನೆಂದರೆ ಆರೆಸ್ಸೆಸ್‌ನ ಮೌನ!

ಇದರರ್ಥ ಬೇರೇನೂ ಅಲ್ಲ, ರಾಜ್ಯ ಆರೆಸ್ಸೆಸ್ಸಿಗರೂ ಈ ಹಗರಣಗಳ ಎತ್ತುವಳಿಯಲ್ಲಿ ಪ್ರತ್ಯಕ್ಷವಾಗಿಯೋ ಇಲ್ಲ ಪರೋಕ್ಷವಾಗಿಯೋ ಪಾಲುದಾರರಾಗಿರುವುದೇ ಈ ಮೌನಕ್ಕೆ ಕಾರಣವಾಗಿದೆ.

ಕರ್ನಾಟಕದ ಪ್ರಮುಖ ದಿನಪತ್ರಿಕೆ ಹಾಗೂ ಟಿವಿ ಚಾನೆಲ್‌ಗಳಲ್ಲಿ ಮಾತ್ರವಲ್ಲ; ಈಗ ನ್ಯಾಷನಲ್ ಮೀಡಿಯಾಗಳಲ್ಲೂ ಯಡ್ಡಿಯ ಕಳ್ಳತನಗಳನ್ನು ಜಾಲಾಡಲಾಗುತ್ತಿದೆ. ದಕ್ಷಿಣ ಭಾರತದ ಮೊಟ್ಟಮೊದಲ ಬಿಜೆಪಿ ಸರ್ಕಾರದ ಭ್ರಷ್ಟ ಮುಖ ಹೀಗೆ ದೇಶದ ಜನರೆದುರು ಬೆತ್ತಲಾಗುತ್ತಿದ್ದರೂ ಯಡ್ಡಿ ಮಾತ್ರ 'ನಾನು ರಾಜೀನಾಮೆ ಕೊಡಲ್ಲ' ಎನ್ನುತ್ತಿರುವುದಂತೂ ನಾಚಿಕೆಗೇಡು. ಮತ್ತೊಂದೆಡೆ ದೆಹಲಿಯಲ್ಲಿ ಸಭೆ ಸೇರಿದ್ದ ಬಿಜೆಪಿ ಹೈಕಮಾಂಡ್‌ಗೂ ಈಗ ಯಡ್ಡಿ ಬೇಕಿಲ್ಲವಾದರೂ ಅದರ ನಂತರದ ಪರಿಸ್ಥಿತಿಗಳನ್ನು ನಿಭಾಯಿಸುವ ಬಗ್ಗೆ ಯೋಚನೆಯಾಗಿದೆ. ಬಿಜೆಪಿಗಳ ತಕ್ಷಣದ ಸಮಸ್ಯೆಯೆಂದರೆ ಯಡ್ಡಿಗೆ ಬದಲಾಗಿ ಸೂಕ್ತ ಪರ್ಯಾಯ ನಾಯಕನಿಲ್ಲದಿರುವುದು. ಇನ್ನೊಂದು ಜಿಲ್ಲಾ ಪಂಚಾಯತಿ-ತಾಲ್ಲೂಕು ಪಂಚಾಯತಿ ಚುನಾವಣೆಗಳು ಹತ್ತಿರದಲ್ಲೇ ಇರುವುದು. ಇದಕ್ಕಿಂತ ದೊಡ್ಡ ಸಮಸ್ಯೆ ಯಾವುದೆಂದರೆ ಕಳೆದೆರಡು ವರ್ಷಗಳಿಂದ ರಾಜ್ಯ ಲಿಂಗಾಯತರನ್ನು ತನ್ನ ಸುತ್ತ ಹಾಗೂ ಬಿಜೆಪಿಯತ್ತ ಯಡ್ಡಿ ತಂದು ನಿಲ್ಲಿಸಿಕೊಂಡಿರುವುದು. ಪಕ್ಷ-ಜಾತಿ ಅಧಿಕಾರಗಳ ಈ ಕಾಂಬಿನೇಷನ್‌ನಿಂದ ಬಿಜೆಪಿಗೆ ಲಾಭವೇ ಆಗಿದೆ. ಆ ಲಾಭ ಕಳೆದುಕೊಳ್ಳುವುದು ಬಿಜೆಪಿಗೆ ಬೇಕಿಲ್ಲ. ಹಾಗಾಗಿ ತಕ್ಷಣದ ಆಪತ್ತಿನಿಂದ ಪಾರಾಗಲು ಯಡ್ಡಿ ಕುಟುಂಬದವರ ಭೂಹಗರಣಗಳಿಗೆ ತಿಪ್ಪೆ ಸಾರಿಸುವ ಪ್ರಯತ್ನ ಶುರುವಾಗಿದೆ.

ಅದರಂತೆ ಭೂಗಳ್ಳ ರಾಘವೇಂದ್ರ ತಾನು ಅಕ್ರಮವಾಗಿ ಪಡೆದಿರುವ ಭೂಮಿ ಹಿಂತಿರುಗಿಸುವುದಾಗಿ ಹೇಳುತ್ತಿದ್ದಾನೆ.



ಇದಲ್ಲದೇ ಎಲ್ಲಾ ಭೂಹಗರಣಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಕ್ರಮವಹಿಸಿ ಸದ್ಯಕ್ಕೆ ವಿವಾದ ತಣ್ಣಗಾಗಿಸಬೇಕೆಂಬ ಯೋಚನೆಯೂ ಹೈಕಮಾಂಡ್‌ಗಿರುವಂತಿದೆ.

ಆದರೆ ಕಾಂಗ್ರೆಸ್-ಜೆಡಿಎಸ್‌ನವರು ಇಷ್ಟು ಮಾತ್ರಕ್ಕೆ ಸುಮ್ಮನಾಗುತ್ತಾರಾ?

ಈಗಿನ ಅಸಲಿ ಪ್ರಶ್ನೆ ರಾಘವೇಂದ್ರನ ಭೂಹಗರಣ ಮಾತ್ರವಲ್ಲ, ಅನೇಕ ಉದ್ಯಮಿಗಳಿಗೆ ಭೂಮಂಜೂರಾತಿ ಮಾಡಿ, ಡಿನೋಟಿಫಿಕೇಷನ್ ಮಾಡಿಕೊಟ್ಟು ಹತ್ತಾರು ಕೋಟಿ ರೂಪಾಯಿಗಳನ್ನು ಯಡ್ಡಿ ಕುಟುಂಬದ ಕಂಪೆನಿಗಳು ಪಡೆದುಕೊಂಡಿವೆ. ಗೋಲ್ಡ್ ಫಿಂಚ್ ರೆಸಾರ್ಟ್ ಮಾಲೀಕ ಪ್ರಕಾಶ ಶೆಟ್ಟಿಯೊಬ್ಬನೇ ಯಡ್ಡಿ ಮಕ್ಕಳ ಧವಳಗಿರಿ ಪ್ರಾಪರ್ಟೀಸ್‌ಗೆ 75 ಲಕ್ಷ ರೂಪಾಯಿ ಕೊಟ್ಟಿರುವುದು ಪತ್ತೆಯಾಗಿದೆ.

ಚಿಕ್ಕಪೇಟೆ ಶಾಸಕ ಹೇಮಚಂದ್ರ ಸಾಗರ್ 1999ರಲ್ಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದ ಬನಶಂಕರಿ ಐದನೇ ಹಂತದಲ್ಲಿದ್ದ ತಮ್ಮ ಭೂಮಿಯನ್ನು ಈಗ ಡಿನೋಟಿಫೈ ಮಾಡಿಸಿಕೊಂಡಿದ್ದಾರೆ. ನೂರಾರು ಕೋಟಿ ರೂಪಾಯಿ ಬೆಲೆಯ ಈ ಭೂಮಿ ವಾಪಸ್ ದಕ್ಕಿದ ಋಣ ತೀರಿಸಲು ಯಡ್ಡಿ ಮಕ್ಕಳ ಸಹ್ಯಾದ್ರಿ ಹೆಲ್ತ್ ಕೇರ್ ಕಂಪೆನಿಗೆ ಅನಾಮತ್ತು ಮೂರು ಕೋಟಿ ರೂಪಾಯಿ ಕೊಟ್ಟಿದ್ದಾರೆ ಹೇಮಚಂದ್ರ ಸಾಗರ್! ಇದಿಷ್ಟೆ ಅಲ್ಲದೆ ರಿಯಲ್ ಎಸ್ಟೇಟ್ ಕುಳ ಆರ್.ಎನ್.ಶೆಟ್ಟಿ ಯಶವಂತಪುರದಲ್ಲಿ ನಿರ್ಮಿಸುತ್ತಿರು ಬೃಹತ್ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನಲ್ಲಿ ಯಡ್ಡಿ ಮಗಳು ಉಮಾದೇವಿಗೆ ಫ್ಲಾಟ್ ದಾನ ನೀಡಿರು ಪುಕಾರುಗಳಿವೆ.


ಈ ರಾಘವೇಂದ್ರನು ತಾನು ಲಪಟಾಯಿಸಿರುವ ಯಾವುದೋ ಸೈಟು, ಇನ್ನೊಂದು ಜಮೀನನ್ನು ವಾಪಸ್ ಕೊಟ್ಟ ಮಾತ್ರಕ್ಕೆ ಈ ಹಗರಣಗಳು ಮುಚ್ಚಿಹೋಗುವುದಿಲ್ಲ.

ಬಡ್ಡಿಮಕ್ಕಳನ್ನು ಮೀರಿಸುವಂತ ಈ ಯಡ್ಡಿ ಮಕ್ಕಳ ಲೂಟಿ ನೋಡಿ ಇಡೀ ರಾಜ್ಯದ ಜನ ದಂಗುಬಡಿದು ಹೋಗಿದ್ದಾರೆ.

ಯಡ್ಡಿ ಕುಟುಂಬ ಕಳೆದ ಹತ್ತಿಪ್ಪತ್ತು ವರ್ಷದಿಂದಲೂ ಶಿಕಾರಿಪುರ ಶಿವಮೊಗ್ಗದಲ್ಲಿ ಅಕ್ರಮ ಆಸ್ತಿ ಮಾಡುತ್ತಲೇ ಬಂದಿದೆ. ಅದು ಅಧಿಕಾರವಿರದಿದ್ದಾಗಿನ ಒಂದು ಹಂತ.

ಆದರೆ ಕಳೆದ ಎರಡು ವರ್ಷಗಳಿಂದ ಇವರ ಆಸ್ತಿ ವಹಿವಾಟು ಶಿಕಾರಿಪುರ-ಶಿವಮೊಗ್ಗದಲ್ಲಿ ಇನ್ನಷ್ಟು ವಿಸ್ತಾರಗೊಂಡಿರುವುದು ಮಾತ್ರವಲ್ಲ, ಬೆಂಗಳೂರು ಮುಂತಾದೆಡೆಯೂ ಹರಡಿಕೊಂಡಿದೆ. ನೂರಾರು ಕೋಟಿ ರೂಪಾಯಿ ಮೊತ್ತವಾಗುವ ಈ ಹಗರಣಗಳು ಕೇವಲ ರಾಜ್ಯ ಬಿಜೆಪಿಗೆ ಮಾತ್ರವಲ್ಲ ರಾಷ್ಟ್ರಮಟ್ಟದಲ್ಲೂ ಬಿಜೆಪಿಯನ್ನು ಕಾಡಲಿದೆ.


ಯಡ್ಡಿಯ ಅಧಿಕಾರ ಉಳಿಯುವ ಸಾಧ್ಯತೆಗಳು ಈಗಂತೂ ತೀರಾ ಕಡಿಮೆ. ಆಕಸ್ಮಾತ್ ಉಳಿದರೂ ಅದೂ ತಾತ್ಕಾಲಿಕ ಮಾತ್ರ...



ಯಡ್ಡಿ ಬದಲಿಗೆ ಚೆಡ್ಡಿ ಸಂತೋಷ್!

ಇದು ರಾಷ್ಟ್ರ ಬಿಜೆಪಿ ನಾಯಕರ ಪ್ರಾಣ ಸಂಕಟವಾದರೆ ಇತ್ತ ಮುಖ್ಯಮಂತ್ರಿ ಯಡ್ಡಿಗೆ ದಿಕ್ಕೇ ತೋಚುತ್ತಿಲ್ಲ. ಸದ್ಯ ಕೇಶವ ಕೃಪಾ, ರಾಷ್ಟ್ರೋತ್ಥಾನ ಪರಿಷತ್, ಕೇಶವಶಿಲ್ಪ ಮತ್ತು ಮಲ್ಲೇಶ್ವರದ ಬಿಜೆಪಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಬಿಸಿಬಿಸಿ ಚರ್ಚೆಗೆ ಗ್ರಾಸವಾಗಿರುವ ಏಕೈಕ ಹೆಸರು ರಾಜ್ಯ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಎಂಬಾತನದ್ದು. ಹೇಗೆ ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರ ಹಗರಣಕ್ಕೆ ಸಿಲುಕಿ ಕಚ್ಚಾಡುವಾಗ ರಾತ್ರೋರಾತ್ರಿ ನರೇಂದ್ರ ಮೋದಿಯನ್ನು ತಂದು ಆರೆಸ್ಸೆಸ್ ಪಟ್ಟಾಭಿಷೇಕ ಮಾಡಿತ್ತೋ, ಅದೇ ರೀತಿ ಕಳಂಕಿತ ಯಡ್ಡಿಯನ್ನು ಇಳಿಸಿ ಆ ಜಾಗಕ್ಕೆ ಸಾಕ್ಷಾತ್ ಮೋದಿ ಸ್ವರೂಪಿ ಸಂತೋಷ್-'ಜೀ' ಎಂಬಾತನನ್ನು ಪ್ರತಿಷ್ಠಾಪಿಸುವುದು ಆರೆಸ್ಸೆಸ್ ಹುನ್ನಾರ!

ರಾ. ಸೋಮನಾಥ್


ಸಂತೋಷ್ ಜೀ

ಶೆಟ್ಟರ್ ಅಥವಾ ಸಂತೋಷ್, ಯಾರು ಮುಂದಿನ ಮುಖ್ಯಮಂತ್ರಿ?

ಲೋಕಲ್ ಟಿ.ವಿ. ಚಾನೆಲ್‌ಗಳಲ್ಲಿ ಏಕಾಏಕಿ ಗೋಚರಿಸಿದ ಈ ಥರದ ಸಂವಾದಕ್ಕೂ ಅತ್ತ ಮಂತ್ರಿ ಉಮೇಶ್ ಕತ್ತಿ ಸಾಹೇಬರು ಗೋಕಾಕ್‌ನಲ್ಲಿ ಪತ್ರಿಕಾಗೋಷ್ಠಿ ಕರೆದು, "ಶೆಟ್ಟರ್ ಮುಖ್ಯಮಂತ್ರಿ ಆಗೋದಾದ್ರೆ, ನಾವು ಉತ್ತರ ಕರ್ನಾಟಕದ ಲಿಂಗಾಯತ ಶಾಸಕರೆಲ್ಲ ಅವರನ್ನೇ ಬೆಂಬಲಿಸ್ತೀವಿ...!" ಎಂಬರ್ಥದ ಹೇಳಿಕೆ ಕೊಟ್ಟದ್ದಕ್ಕೂ ಪರಸ್ಪರ ಸಂಬಂಧವಿದ್ದೇ ಇದೆ.

ಇಷ್ಟಾಗಿದ್ದೇ ತಡ, ಅತ್ತ ಗುಲ್ಬರ್ಗದಲ್ಲಿ ಮುಖ್ಯಮಂತ್ರಿ ಯಡ್ಡಿ ಹೇಗೆ ಮೈಪರಚಿಕೊಂಡರೆಂದರೆ, 'ಮಂತ್ರಿ ಉಮೇಶ್ ಕತ್ತಿ, ಶೆಟ್ಟರ್ ಮುಂದಿನ ಮುಖ್ಯಮಂತ್ರಿ ಅಂದಿದ್ದಾರಲ್ಲ; ಅದಕ್ಕೇನಂತೀರಿ?' ಎಂದು ಟಿವಿ ವರದಿಗಾರರೆಲ್ಲಾ ನುಗ್ಗಿದ್ದೇ ಮುಖ್ಯಮಂತ್ರಿಯ ಮುಖಕ್ಕೆ ಮೈಕು ತಿವಿದುಬಿಟ್ಟರು. ಮುಖ್ಯಮಂತ್ರಿಗೆ ಅದೆಲ್ಲಿತ್ತೋ ಸಿಟ್ಟು-'ಯಾಕಯ್ಯಾ ಇವರನ್ನೆಲ್ಲಾ ಇಲ್ಲಿಗೆ ಬರಲು ಬಿಟ್ಟೆ?' ಎಂದಿದ್ದೇ ತಮ್ಮ ಕಾವಲಿಗಿದ್ದ ಗನ್‌ಮ್ಯಾನ್‌ನನ್ನು ಸಮಸ್ತ ವರದಿಗಾರರ ಎದುರೇ ಯಕ್ಕಾಮಕ್ಕಾ ಹೊಡದುಬಿಟ್ಟರು!

ಮುಖ್ಯಮಂತ್ರಿಯೊಬ್ಬನ ಹತಾಶೆ, ಪೇಚಾಟ, ಎಡಬಿಡಂಗಿತನಕ್ಕೆ ಈ ಘಟನೆಯೊಂದೇ ಕನ್ನಡಿ ಹಿಡಿದಂತಿತ್ತು.

ಯಡ್ಡಿಯ ಕುರ್ಚಿ ಅಲ್ಲಾಡುತ್ತಿದೆ. ಮೈ.ಚ.ಜಯದೇವ ಒಬ್ಬರ ಹೊರತಾಗಿ ಆರೆಸ್ಸೆಸ್‌ನ ಯಾವೊಬ್ಬ ವರಿಷ್ಠರೂ ಯಡ್ಡಿಯ ಬೆನ್ನಿಗಿಲ್ಲ. ಹೈಕಮಾಂಡ್‌ನ ಅತಿರಥ ಮಹಾರಥಿಗಳಾದ ಸುಷ್ಮಾ ಸ್ವರಾಜ್, ವೆಂಕಯ್ಯನಾಯ್ಡು, ರಾಜನಾಥ ಸಿಂಗ್, ಮುರಳಿ ಮನೋಹರ್ ಜೋಶಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುರೇಶ್ ಸೋನಿ, ಮತ್ತೊಬ್ಬ ನ್ಯಾಷನಲ್ ಜನರಲ್ ಸೆಕ್ರೆಟರಿ ರಾಮಲಾಲ್ ಮತ್ತು ಕರ್ನಾಟಕದ ಉಸ್ತುವಾರಿ ಹೊತ್ತ ಹಿಮಾಚಲದ ಮಾಜಿ ಮುಖ್ಯಮಂತ್ರಿ ಶಾಂತಕುಮಾರ್; ಇತ್ಯಾದಿ ಯಾರೊಬ್ಬರಿಗೂ ಯಡ್ಡಿ ಮುಖ್ಯಮಂತ್ರಿಯಾಗಿರುವುದು ಬೇಕಿಲ್ಲ.

59 ಮುಂದಿ ಸಹಿ...?

ನಿನ್ನೆ ಮೊನ್ನೆಯ ತನಕ ಯಡ್ಡಿ ಬೆನ್ನಿಗಿದ್ದ ಅನಂತ್‌ಕುಮಾರ್ ಈಗ ನ್ಯೂಟ್ರಲ್. ಗಣಿರೆಡ್ಡಿಗಳು ಅಪ್ಪಚ್ಚು ರಂಜನ್‌ರನ್ನು ಮುಂದೆ ಬಿಟ್ಟು ಯಡ್ಡಿ ವಿರುದ್ಧ ಶುರುಹಚ್ಚಿಕೊಂಡು ಸಹಿ ಸಂಗ್ರಹಣೆ ಈಗ 53ರಿಂದ 59ಕ್ಕೆ ಏರಿದೆ. ರಾಜ್ಯಾಧ್ಯಕ್ಷ ಈಶ್ವರಪ್ಪ, ರಾತ್ರೋರಾತ್ರಿ ಧಾಟಿ ಬದಲಿಸಿ ಗಾಳಿ ಬಂದತ್ತ ತೂರಿಕೊಳ್ಳಲು ಅಣಿಯಾಗಿದ್ದಾರೆ. ಅಶೋಕ್, ಶೆಟ್ಟರ್ ಒಳಗಿಂದೊಳಗೇ ಹಿಕಮತ್ತು ನಡೆಸುತ್ತಿರುವುದು, ಮುಖ್ಯಮಂತ್ರಿ ಕುಟುಂಬದ ಭೂಕಬಳಿಕೆ ಕುರಿತಂತೆ ದಿನಕ್ಕೊಂದು ಹಗರಣವನ್ನು ಪತ್ರಿಕೆಗಳು ಬಯಲಿಗೆಳೆಯುತ್ತಿರುವುದು ಮತ್ತು ರಾಷ್ಟ್ರೀಯ ಚಾನೆಲ್ಲುಗಳಾದ ಸಿಎನ್‌ಎನ್-ಐಬಿಎನ್, ಎನ್‌ಡಿಟಿವಿ ಆದಿಯಾಗಿ ಬಹುತೇಕ ಸುದ್ದಿವಾಹಿನಿಗಳಲ್ಲಿ ಮುಂಖಾನುಮುಂಖವಾಗಿ ಯಡ್ಡಿಯ ಡೀನೋಟಿಫಿಕೇಷನ್ ಕರ್ಮಕಾಂಡಗಳು ಸುದ್ದಿಯಾಗುತ್ತಿರುವುದು ಯಡ್ಡಿಯ ಬುಡಕ್ಕೆ ಎಂಥಾ ಕೈ ಬಿದ್ದಿದೆ ಎಂಬುದಕ್ಕೆ ನಿದರ್ಶನವಷ್ಟೆ.

ಗುರುವಾರದ ಹೊತ್ತಿಗೆ ಕರ್ನಾಟಕದ ಡಿನೋಟಿಫಿಕೇಷನ್ ರಾದ್ಧಾಂತ ಲೋಕಸಭೆಯಲ್ಲೂ ಮೊಳಗಲಿದೆ. ಈ ಬಗ್ಗೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೆರಡೂ ಲೋಕಸಭೆಯ ಸ್ಪೀಕರ್ ಮೀರಾ ಕುಮಾರ್‌ಗೆ ಮನವಿ ಕೊಟ್ಟಾಗಿದೆ. ವಿಶೇಷವಾಗಿ ದೇವೇಗೌಡ ಮತ್ತು ಕುಮಾರಸ್ವಾಮಿ ಲೋಕಸಭೆಯಲ್ಲಿ ಯಡ್ಡಿಯ ಡಿನೋಟಿಫಿಕೇಷನ್ ಕರ್ಮಕಾಂಡಗಳನ್ನು ಬಯಲುಗೊಳಿಸುತ್ತಾರಂತೆ.

ಇಲ್ಲಿಗೂ ಒಬ್ಬ ಮಿನಿ ಮೋದಿ?




ಅತ್ತ ಮಹಾರಾಷ್ಟ್ರದ ಮುಖ್ಯಮಂತ್ರಿ ಅಶೋಕ್ ಚವ್ಹಾಣ್, ಸ್ಪೆಕ್ಟ್ರಮ್ ಕರ್ಮಕಾಂಡದ ರೂವಾರಿ ಕೇಂದ್ರ ಮಂತ್ರಿ ರಾಜಾ ಮತ್ತು ಕಾಮನ್ವೆಲ್ತ್ ಕಳ್ಳಾಟದ ಕಾರಣಕ್ಕೆ ಸುರೇಶ್ ಕಲ್ಮಾಡಿ ವಿರುದ್ಧ ಬೊಬ್ಬೆ ಹಾಕಿದ ಬಿಜೆಪಿಗೆ ತನ್ನದೇ ಮುಖ್ಯಮಂತ್ರಿ ಯಡಿಯೂರಪ್ಪನ ಭೂಕಬಳಿಕೆಯೆಂಬುದು ನುಂಗಲಾಗದ, ತಲೆ ಎತ್ತಲಾಗದ ಪೀಕಲಾಟದಂತಾಗಿದೆ.

ಒಂದೋ ಯಡ್ಡಿಯನ್ನು ಇಳಿಸಬೇಕು ಅಥವಾ ತಲೆತಗ್ಗಿಸಿ ಕೂರಬೇಕು.

ಚಡ್ಡಿ ಸಂತೋಷ್ ಜೀ

ಇದು ರಾಷ್ಟ್ರ ಬಿಜೆಪಿ ನಾಯಕರ ಪ್ರಾಣ ಸಂಕಟವಾದರೆ ಇತ್ತ ಮುಖ್ಯಮಂತ್ರಿ ಯಡ್ಡಿಗೆ ದಿಕ್ಕೇ ತೋಚುತ್ತಿಲ್ಲ. ಏಕಾಏ

ಆರೆಸ್ಸೆಸ್ ಬ್ರಾಹ್ಮಣರ ಮುಂದೆ ಮೈಚ ಒಬ್ಬಂಟಿ


ಮೈ.ಚ.ಜಯದೇವ

ಸಂತೋಷ ಎಂಥಾ ಪಾಖಂಡಿ ಮತ್ತು ಕಸುಬುದಾರ ಎಂಬುದಕ್ಕೆ ಆತ ಬಿಜೆಪಿಯಲ್ಲಿದ್ದೇ ಮಾಡಿದ ಕಾರಸ್ತಾನಗಳೇ ಪುರಾವೆಯಂತಿವೆ. ಒಂದು ಹಂತದಲ್ಲಿ ಮುತಾಲಿಕ್ ಗುಂಪು ಸಂಘ ಪರಿವಾರವನ್ನು ತೊರೆದು ಶಿವಸೇನೆಗೆ ಹೋದಾಗ ಇದೇ ಸಂತೋಷ್ ಒಳಗೊಳಗೆ ಮುತಾಲಿಕ್ ಜೊತೆ ಕೈಜೋಡಿಸಿದ್ದ. ಯಾವತ್ತಿದ್ದರೂ ಬಿಜೆಪಿ ಕಟ್ಟರ್ ಹಿಂದೂತ್ವಕ್ಕೆ ಕೈಕೊಟ್ಟೇ ಕೊಡುತ್ತದೆ. ಅದಕ್ಕೆ ಮುಂಜಾಗ್ರತೆಯಾಗಿ ಕಟ್ಟರ್ ಹಿಂದೂತ್ವಕ್ಕೊಂದು ಶಿವಸೇನೆಯನ್ನು ಪರ್ಯಾಯ ಅಸ್ತ್ರವಾಗಿ ಇಟ್ಟುಕೊಳ್ಳಬೇಕೆಂಬುದು ಸಂತೋಷ್‌ನ ದೂರಾಲೋಚನೆಯಾಗಿತ್ತು.

ಅದಕ್ಕೊಂದೇ ಪ್ರಮೋದ್ ಮುತಾಲಿಕ್‌ಗೆ ಸಂತೋಷ 18 ಲಕ್ಷ ರೂ.ಗಳನ್ನು ಶಿವಸೇನೆಯ 'ಫಂಡ್' ಎಂದು ಕೊಟ್ಟಿದ್ದ. ಶಿವಸೇನೆ ಮಾತ್ರವಲ್ಲದೇ ಪಂಡಿತ್ ದೀನ ದಯಾಳ್ ವಿಚಾರ ವೇದಿಕೆ ಎಂಬ ಮತ್ತೊಂದು ಕೇಸರಿ ಸಂಘಟನೆಯನ್ನೂ ಸಂತೋಷ್ ಹುಟ್ಟುಹಾಕಿದ್ದ. ಆದರೆ ತಾನು ಮಾತ್ರ ಬಿಜೆಪಿಯಲ್ಲೇ ಬೇರು ಬಿಟ್ಟ. ಹಿಂದೆ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದ ವಾಮನಾಚಾರ್ಯ ಅದರ ಲಾಭ ಪಡೆದೇ 13 ಕೋಟಿಯ ಬಂಗಲೆ ಕಟ್ಟಿಸಿದ್ದನ್ನು ತಾನೇ ನಿಂತು ಪ್ರಚಾರ ಮಾಡಿದ್ದ. ವಾಮನಾಚಾರ್ಯರ ಮಗಳು ಸುಪ್ರಿಯಾ ಆಚಾರ್ಯಳ ಮದುವೆಗೆ ಮೂರು ಕೋಟಿ ಖರ್ಚಾಗಿದ್ದನ್ನೂ ದಾಖಲೆ ಸಮೇತ ವರಿಷ್ಠರ ಗಮನಕ್ಕೆ ತಂದಿದ್ದ.



ಮುಂದೆ ಲಿಂಬಾವಳಿ ಆ ಜಾಗಕ್ಕೆ ಬಂದು ಕ್ರಮೇಣ ತಾನೇ ಆ ಹುದ್ದೆಗೆ ವಕ್ಕರಿಸಿದ ನಂತರ ಸಂತೋಷ್ ಯಡ್ಡಿ ಬುಡಕ್ಕೆ ಕೈಯಿಟ್ಟ. ಯಡ್ಡಿ ಮತ್ತು ಅವರ ಬೆಂಬಲಿಗ ಮಂತ್ರಿಗಳ ಒಂದೊಂದೇ ಕರ್ಮಕಾಂಡಗಳನ್ನು ಆರೆಸ್ಸೆಸ್ ವರಿಷ್ಠರಿಗೆ ರಹಸ್ಯವಾಗಿ ತಲುಪಿಸುತ್ತಿದ್ದ. ಮತ್ತೊಂದೆಡೆ ಯಡ್ಡಿಯ ಪಾಪದ ಕೊಡವೇ ತುಂಬಿಬಂದಿತ್ತು. ಹಗರಣಗಳ ಮೇಲೆ ಹಗರಣಗಳು ನಡೆದು ಅದು ದೆಹಲಿಯ ಮೀಡಿಯಾಗಳ ಕಿವಿಗೂ ಮುಟ್ಟಿ ಸುಷ್ಮಾ, ಜೇಟ್ಲಿ, ರಾಜನಾಥ್, ವೆಂಕಯ್ಯನಾಯ್ಡು ಇತ್ಯಾದಿಗಳೆಲ್ಲ ಯಡ್ಡಿ ವಿರುದ್ಧ ತಿರುಗಿಬಿದ್ದರು.

ಈ ರೀತಿ ಕೇಂದ್ರ ನಾಯಕರೆಲ್ಲ ಏಕಾಏಕಿ ತಿರುಗಿಬೀಳಲು ಕಾರಣವಾಗಿದ್ದು ಕೇಂದ್ರ ಆರೆಸ್ಸೆಸ್ ಬೌದ್ಧಿಕ ಪ್ರಮುಖ ದತ್ತಾತ್ರೇಯ ಹೊಸಬಾಳೆ. ಸದ್ಯ ಲಿಂಗಾಯತನೆಂಬ ಕಾರಣಕ್ಕೆ ಮೈ.ಚ.ಜಯದೇವ ಮಾತ್ರ ಯಡ್ಡಿಯನ್ನು ಬೆಂಬಲಿಸುತ್ತಿದ್ದಾರೆ. ಮಿಕ್ಕಂತೆ ದಕ್ಷಿಣ ಕ್ಷೇತ್ರೀಯ ಸಂಘಟನಾ ಪ್ರಮುಖ್ ಕೃ. ನರಹರಿ, ಉತ್ತರಕರ್ನಾಟಕದ ಸಂಘ ಚಾಲಕ ಮಂಗೇಶ್ ಭೇಂಡೆ, ದಕ್ಷಿಣ ಕರ್ನಾಟಕದ ಸಂಘಚಾಲಕ ದಾ.ಮ.ರವೀಂದ್ರ, ದಕ್ಷಿಣ ಭಾರತ ಕ್ಷೇತ್ರೀಯ ಕಾರ್ಯವಾಹ ಕಲ್ಲಡ್ಕ ಭಟ್ಟ, ಬೆಂಗಳೂರು ಮಹಾನಗರ ಪ್ರಮುಖ ಮುಕುಂದ ಮತ್ತು ಆರೆಸ್ಸೆಸ್ ಕಾರ್ಯಕಾರಿಣಿ ಪರಿಷತ್ತಿನ ಸದಸ್ಯ ಕೃ. ಸೂರ್ಯನಾರಾಯಣರಾವ್ ಮುಂತಾದವರೆಲ್ಲ ಸಂತೋಷ್‌ನನ್ನೇ ಬೆಂಬಲಿಸುತ್ತಿದ್ದಾರೆ.


ಭಟ್

ನವೆಂಬರ್ 7ರಂದು ಬೆಂಗಳೂರಿಗೆ ಬಂದಿದ್ದ ಆರೆಸ್ಸೆಸ್‌ನ ರಾಷ್ಟ್ರೀಯ ವಕ್ತಾರ ರಾಮ್ ಮಾದವ್ ಕೇಶವ ಕೃಪಾಕ್ಕೆ ಬಂದು ಒಂದಲ್ಲ 4 ಬೈಠಕ್ ಮಾಡಿ, ಯಡ್ಡಿ ಸರ್ಕಾರದ ಅಷ್ಟೂ ಭೂಕಬಳಿಕೆ ಹಗರಣಗಳ ದಾಖಲೆಯನ್ನು ಪರಿಶೀಲಿಸಿದ್ದಾರೆ. ಅದರಲ್ಲಿ ಸತ್ಯಾಸತ್ಯತೆ ಇದೆ ಎಂದು ಗೊತ್ತಾದ ನಂತರವೇ ಅದನ್ನೊಯ್ದು ಗಡ್ಕರಿಗೆ ಒಪ್ಪಿಸಿದ್ದಾರೆ. ಇದೇ ದಾಖಲೆಗಳ ಆಧಾರದ ಮೇಲೆ ಗಡ್ಕರಿ ಈಗ ವೀಕ್ಷಕರನ್ನು ಬೆಂಗಳೂರಿಗೆ ಕಳಿಸಿದ್ದಾರೆ. ಯಡ್ಡಿಯ ಬುಡ ಅಲ್ಲಾಡಿದಷ್ಟೂ ಸಂತೋಷ್ ಮುಖ ಅರಳುತ್ತಿದೆ.


...ಮುಂಡೇಶ್ವರನ ಮೇಲೆ ಆಣೆ ...ಇನ್ನು ಮುಂದೆ ಅಕ್ರಮ ...ಗೋಲ್ಲ ಎನ್ನುತ್ತಾರೆ. ...ಧ್ಯಕ್ಷ ಈಶ್ವರಪ್ಪನವರ ...ಹಗರಣಗಳನ್ನೂ ಸಮರ್ಥಿಸಿ ...ಸಾರಿಸುತ್ತಾರೆ. ತನ್ನ ಮೇಲಿನ ...ಆರೋಪವನ್ನು ಮರೆ ಮಾಡಿ ...ರ್ಮಸಿಂಗ್, ಕುಮಾರಸ್ವಾಮಿಯ ...ಲೆ ಕೆಸರೆರಚುತ್ತಾರೆ. ಎದುರು ...ಕರ್ತರಿದ್ದಾರೆ ಎಂಬುದನ್ನೂ ...ಸದೆ ತಮ್ಮ ಗನ್‌ಮ್ಯಾನ್‌ನನ್ನು ...ದು ಬಡಿಯುತ್ತಾರೆ.



...ಯಾವ ಮುಖ್ಯಮಂತ್ರಿ ತಾನೇ ...ಪಾಟಿ ಹುಚ್ಚಾಟಕ್ಕಿಳಿದು ...ಪಾಟಲೀಗೀಡಾಗಿದ್ದ?

...ಮುಖ್ಯಮಂತ್ರಿಯ ಇಂಥ ಪೇಚಾಟ, ...ಟದ ಮುಂದುವರಿದ ಭಾಗವೇ ಮುಂದಿನ ...ಖ್ಯಮಂತ್ರಿ ಯಾರು? ಎಂದು ವಿವಿಧ ...ಲ್ಲುಗಳು ಶುರುಹಚ್ಚಿಕೊಂಡ ಚರ್ಚಾಗೋಷ್ಠಿ. ...ಮಂತ್ರಿ ಉಮೇಶ್ ಕತ್ತಿ ಪತ್ರಿಕಾಗೋಷ್ಠಿ ಕರೆದು ...ರ್ ಹೆಸರನ್ನು ಮುಂದಿನ ಮುಖ್ಯಮಂತ್ರಿ ...ದ್ದೇ ತಡ, ಬೆಂಗಳೂರಿನ ಆಂಧ್ರಮೂಲದ ...ಯೊಂದು 'ಮುಂದಿನ ಮುಖ್ಯಮಂತ್ರಿ ...ತೋಷ್?' ಎಂಬ ಶೀರ್ಷಿಕೆಯಡಿಯಲ್ಲೇ ವಿಶೇಷ ...ಕ್ರಮವೊಂದನ್ನು ಆರಂಭಿಸಿತ್ತು.

...ಸದ್ಯ ಕೇಶವ ಕೃಪಾ, ರಾಷ್ಟ್ರೋತ್ಥಾನ ಪರಿಷತ್, ...ವಶಿಲ್ಪ ಮತ್ತು ಮಲ್ಲೇಶ್ವರದ ಬಿಜೆಪಿ ...ಕ್ವಾರ್ಟರ್ಸ್‌ನಲ್ಲಿ ಬಿಸಿಬಿಸಿ ಚರ್ಚೆಗೆ ...ಷವಾಗಿರುವ ಏಕೈಕ ಹೆಸರು ...ಬಿಜೆಪಿಯ ಪ್ರಧಾನ ...ರ್ಯದರ್ಶಿ ಸಂತೋಷ್ ಕುಮಾರ್ ...ಬಾತನದ್ದು. ಹೇಗೆ ...ರಾತ್‌ನಲ್ಲಿ ಬಿಜೆಪಿ ಸರ್ಕಾರ ...ರಣಕ್ಕೆ ಸಿಲುಕಿ ಕಚ್ಚಾಡುವಾಗ ...ರೋರಾತ್ರಿ ನರೇಂದ್ರ ...ದಿಯನ್ನು ತಂದು ಆರೆಸ್ಸೆಸ್ ...ಭಿಷೇಕ ಮಾಡಿತ್ತೋ, ಅದೇ ...ಕಳಂಕಿತ ಯಡ್ಡಿಯನ್ನು ...ಸಿ ಆ ಜಾಗಕ್ಕೆ ಸಾಕ್ಷಾತ್ ...ದಿ ಸ್ವರೂಪಿ ...ತೋಷ್-'ಜೀ' ಎಂಬಾತನನ್ನು ...ಸ್ಥಾಪಿಸುವುದು ಆರೆಸ್ಸೆಸ್ ಹುನ್ನಾರ!



ಅನಂತನ ಷಡ್ಯಂತ್ರ

...ಒಂದೆಡೆ ಯಡ್ಡಿ ವಿರುದ್ಧ ಲಿಂಗಾಯತರ ಶೆಟ್ಟರ್ ...ರನ್ನು ತೇಲಿಬಿಡುವುದು; ಮತ್ತೊಂದೆಡೆ ಅದಕ್ಕೆ ...ಯಾಗಿ ಬ್ರಾಹ್ಮಣರ ನಾಯಕ ...ತ್‌ಕುಮಾರರನ್ನು ಎತ್ತಿಕಟ್ಟುವುದು; ಅಂತಿಮವಾಗಿ ...ಬ್ಬರ ಬಾಯಿಂದಲೇ 'ಸಂತೋಷ್ ಹೆಸರನ್ನು ...ಬಿಡುವುದು ಚೆಡ್ಡಿ ಷಡ್ಯಂತ್ರದ ಒಂದು ...ಸೆಯಷ್ಟೇ. ಅಥವಾ ಶೆಟ್ಟರ್ ಮತ್ತು ಸಂತೋಷ್ ...ರನ್ನು ತೇಲಿಬಿಟ್ಟು ಅಂತಿಮವಾಗಿ ತಾನೇ ...ಡಕ್ಕಿಳಿಯುವ ನಿಗೂಢ ಉದ್ದೇಶ ಕೂಡ ...ತ್‌ಕುಮಾರ್‌ಗೆ ಇದ್ದೀತು.

...ಈ ಎಲ್ಲಾ ಲೆಕ್ಕಾಚಾರದ ಪರಿಣಾಮವೇ ...ದಿನ ಮುಖ್ಯಮಂತ್ರಿ ಸಂತೋಷ್' ಎಂಬ ...ಸ ವರಸೆ. ಸದ್ಯ ರಾಜ್ಯ ಬಿಜೆಪಿಯ ಪ್ರಧಾನ ...ದರ್ಶಿಯಾಗಿರುವ ಈ ಸಂತೋಷ್ ಮೂಲತಃ ...ಸ್‌ನ ಪೂರ್ಣಾವಧಿ ಪ್ರಚಾರಕ. ಹಿಂದೆ ...ಸನಾಚಾರ್ಯ ಮತ್ತು ಲಿಂಬಾವಳಿಯವರಿದ್ದ ರಾಜ್ಯ ...ಪಿ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿ ಕಳೆದ ... ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾನೆ. ...ಯಲ್ಲಿ ಹವ್ಯಕ ಬ್ರಾಹ್ಮಣ. ವಯಸ್ಸು ...ದ್ದಾದರೂ ಮದುವೆಯಾಗಿಲ್ಲ, ಮಕ್ಕಳಿಲ್ಲ, ...ಯ ಹಂಗಿಲ್ಲ. ತಂದೆ-ತಾಯಿ, ಅಣ್ಣತಮ್ಮ; ...ಬಂಧಿಗಳು ಇದ್ದಾರಾದರೂ ಅವರ್‍ಯಾರನ್ನೂ ...ಚಾರಕ್ಕೂ ಮಾತಾಡಿಸುವುದಿಲ್ಲ. ತಲೆತುಂಬ ...ಸ್ ವಿಷ ಮತ್ತು ವೈದಿಕಶಾಹಿಯ ದುರ್ಬುದ್ಧಿ ...ರೆ ಮನುಷ್ಯತ್ವದ ಯಾವ ಲಕ್ಷಣಗಳೂ ಇಲ್ಲ!

...ಈ ಸಂತೋಷ್ ಎಂಥಾ ಚಾಲಾಕಿ ಮತ್ತು ...ದ ಸಿದ್ಧಾಂತಕ್ಕಾಗಿ ಯಾವ ಮಟ್ಟದ ...ನೆಂದರೆ ಕಳೆದ 26 ವರ್ಷಗಳಿಂದ ತನ್ನ ...ನ್ನೇ ನೋಡಿಲ್ಲ, ಸಾಗರದ ಸಮೀಪದ ...ಳ್ಳಿಯೊಂದರ ಈತನ ಪೂರ್ವಿಕರು ...ನ ಬಸವನಗುಡಿಗೆ ಯಾವುದೋ ಕಾಲಕ್ಕೆ ವಲಸೆ ಬಂದರಂತೆ. ಬಸವನಗುಡಿಯ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಪದವಿ ಮುಗಿಯುತ್ತಿದ್ದಂತೆ ನೇರವಾಗಿ ಆರೆಸ್ಸೆಸ್ ಪ್ರಚಾರಕ್ಕಿಳಿದ. ಹಿಂದೂ ಜಾಗರಣ ವೇದಿಕೆಯ ಜಗದೀಶ್ ಕಾರಂತ, ಶ್ರೀರಾಮಸೇನೆಯ ಮುತಾಲಿಕ್, ಭಜರಂಗದಳದ ಮಹೇಂದ್ರಕುಮಾರ್, ಬಿಜೆಪಿಯ ಲಿಂಬಾವಳಿ, ದತ್ತಪೀಠದ ಸಿ.ಟಿ. ರವಿ, ಆರೆಸ್ಸೆಸ್ ನಾಯಕ ಮಂಗೇಶ್ ಭೇಂಡ್ ಮುಂತಾದವರಿಗೆ ಸಮಕಾಲೀನನಾದರೂ ಕೆಲಸದಲ್ಲಿ ಮಾತ್ರ ಅವರೆಲ್ಲರಿಗಿಂತಲೂ ಖತರ್‌ನಾಕ್ ಮತ್ತು ಹುಷಾರು.

ವೈದಿಕ ವಿಷ ಬುದ್ಧಿ

ರಾಜ್ಯ ಬಿಜೆಪಿಗೆ ಯಾರೇ ಅಧ್ಯಕ್ಷರಾದರೂ ಅಸಲಿಗೆ ಪಕ್ಷದ ಸೂತ್ರಧಾರಿಯಂತಿರುವುದು ಆರೆಸ್ಸೆಸ್‌ನಿಂದ ನೇಮಿಸಲ್ಪಟ್ಟ ಪ್ರಧಾನ ಕಾರ್ಯದರ್ಶಿಯೇ. ಲಿಂಬಾವಳಿಯ ಅವಧಿ ಮುಗಿಯುತ್ತಿದ್ದಂತೆ ಹುದ್ದೆಗೆ ಯಾವ ಆರೆಸ್ಸೆಸ್ ಪ್ರಚಾರಕನನ್ನು ತರಬೇಕೆಂಬ ಜಿಜ್ಞಾಸೆಯಲ್ಲಿ ಚೆಡ್ಡಿಗಳು ತೊಡಗಿರುವಾಗ ಸಂತೋಷ್ ಶಿವಮೊಗ್ಗದ ಉಸ್ತುವಾರಿಯಾಗಿದ್ದ. ರಾಜ್ಯ ಬಿಜೆಪಿಗೆ ಯಾರನ್ನು ಆರೆಸ್ಸೆಸ್‌ನಿಂದ ನೇಮಿಸಲ್ಪಡಬೇಕೆಂಬ ಪ್ರಶ್ನೆ ಬಂದಾಗ ಸಹಜವಾಗೇ ಇಬ್ಬರು ಕಟ್ಟರ್ ಚೆಡ್ಡಿಗಳ ಹೆಸರನ್ನು ಸೂಚಿಸಲಾಯ್ತು. ಈ ಪೈಕಿ ಒಂದು ಪ್ರಮೋದ್ ಮುತಾಲಿಕ್ ಆದರೆ ಎರಡನೇ ಹೆಸರೇ ಸಂತೋಷ್!

ಅಂತಿಮವಾಗಿ ಸಂತೋಷ್ ಹೆಸರನ್ನೇ ಸಂಘ ಪರಿವಾರ ಆಖೈರುಗೊಳಿಸಿತು. ಏಕೆಂದರೆ ಕೆಲಸ ಮತ್ತು ಶ್ರದ್ಧೆಯ ವಿಷಯಕ್ಕೆ ಬಂದರೆ ಎಡಬಿಡಂಗಿ ಮುತಾಲಿಕ್‌ಗಿಂತಲೂ ಸಂತೋಷ್ ಕರಾರುವಾಕ್ಕಾಗಿದ್ದ. ಯಾವ ವಿಷಯ ಕೊಟ್ಟರೂ ಗಂಟೆಗಟ್ಟಲೇ ನಿರರ್ಗಳವಾಗಿ ಮಾತಾಡಬಲ್ಲ, ಅದ್ಭುತ ಜ್ಞಾಪಕ ಶಕ್ತಿ. ಆರೆಸ್ಸೆಸ್ ಸಿದ್ಧಾಂತ ಮತ್ತು ವೈದಿಕ ಶಾಹಿಯ ವಿಷಬುದ್ಧಿಯ ಹೊರತಾಗಿ ಮನೆ, ಮಠ, ಬಂಧು ಬಳಗ ಇತ್ಯಾದಿ ಯಾವ ಮನುಷ್ಯ ಸಂಬಂಧಕ್ಕೂ ಸಂತೋಷ್ ಸ್ಪಂದಿಸುತ್ತಿರಲಿಲ್ಲ. ಹಿಂದುತ್ವ ಎಂಬುದು ಕೇವಲ ಕೆಳಜಾತಿಗಳನ್ನು ಹಿಡಿದಿಟ್ಟುಕೊಳ್ಳುವ ಸೋಗು ಮಾತ್ರವೇ ಹೊರತು ವಾಸ್ತವದಲ್ಲಿ ಬ್ರಾಹ್ಮಣ್ಯವೊಂದೇ ಸಂಘಪರಿವಾರದ ಜೀವನಾಧಾರ ಎಂಬುದನ್ನು ಈತ ಬಲವಾಗಿ ನಂಬಿದ್ದ.

ಹಿಂದುತ್ವದ ಅವನತಿಯೆಂದರೆ ಅದು ಬ್ರಾಹ್ಮಣ್ಯದ ವಿನಾಶವೆಂದೂ, ಬ್ರಾಹ್ಮಣ್ಯ ಮತ್ತು ವೈದಿಕ ಶಾಹಿ ಉಳಿಯಬೇಕೆಂದರೆ ಮುಸ್ಲಿಂ ದ್ವೇಷ ಬಿತ್ತುವುದೊಂದೇ ಮಾರ್ಗೋಪಾಯ ಎಂಬುದನ್ನು ಸಂತೋಷ್ ಪ್ರತಿಪಾದಿಸುತ್ತಿದ್ದ.

ಕಪಟ ಆದರ್ಶವಾದ

ಈ ಎಲ್ಲಾ ಖತರ್‌ನಾಕ್ ಬುದ್ಧಿ ಸಂತೋಷ್‌ಗಿದ್ದುದರಿಂದಲೇ ಮುತಾಲಿಕ್ ಹೆಸರನ್ನು ಬದಿಗೊತ್ತಿ ಸಂತೋಷ್‌ನನ್ನು ಬಿಜೆಪಿಗೆ ನೇಮಿಸಲಾಯ್ತು. ಬಿಜೆಪಿಗೆ ಬಂದಿದ್ದೇ ರಾಜ್ಯಾದ್ಯಂತ ಸದಸ್ಯತ್ವ ನೋಂದಾವಣೆ ಅಭಿಯಾನವನ್ನು ಆರಂಭಿಸಿದ ಸಂತೋಷ್ ಸತತ ಮೂರು ವರ್ಷಗಳ ಕಾಲ ರಾಜ್ಯದ ಹಳ್ಳಿಹಳ್ಳಿಯನ್ನು ಬಿಡದೆ ಸುತ್ತಾಡಿದ. ರಾಜ್ಯಾದ್ಯಂತ 29 ಲಕ್ಷದಷ್ಟು ಹೊಸ ಸದಸ್ಯರನ್ನು ಕಲೆಹಾಕಿದ.

ಇತ್ತ ಯಡ್ಡಿ, ಈಶ್ವರಪ್ಪ, ಸದಾನಂದಗೌಡ, ಗಣಿ ರೆಡ್ಡಿಗಳೇ ಅಧಿಕಾರ, ಲೂಟಿ, ಹಗರಣ, ಪ್ರಚಾರ ಅಂತೆಲ್ಲಾ ಮಾಧ್ಯಮಗಳಲ್ಲಿ ಮಿಂಚುತ್ತಿದ್ದರೆ ಸಂತೋಷ್ ಪಕ್ಷದ ಕಚೇರಿಯಾದ ಮಲ್ಲೇಶ್ವರದ ಬಾಬುರಾವ್ ದೇಶಪಾಂಡೆ ಭವನದ ಕೋಣೆಯೊಂದರಲ್ಲಿ ಬರಿ ಚಾಪೆಯ ಮೇಲೆ ಮಲಗುತ್ತಿದ್ದ. ಸ್ವಂತಕ್ಕೊಂದು ಮನೆಯಿಲ್ಲ, ಓಡಾಡಲು ಸಂಘಕೊಟ್ಟ ಬೈಕು ಬಿಟ್ಟರೆ ಕಾರನ್ನು ಹತ್ತುವುದಿಲ್ಲ, ಎರಡೇ ಜೊತೆ ಬಟ್ಟೆ. ಹೆಗಲಿಗೊಂದು ಚೀಲ ಮತ್ತು ಅದರೊಳಗಿಷ್ಟು ಪುಸ್ತಕ ಬಿಟ್ಟರೆ ತನ್ನದು ಎಂಬ ಬ್ಯಾಂಕ್ ಅಕೌಂಟು ಕೂಡ ಇಲ್ಲ, ಎಲ್ಲಾ ಪದಾಧಿಕಾರಿಗಳಿಗೆಂದು ಪಕ್ಷದ ಕಚೇರಿಯಲ್ಲಿ ಪ್ರತಿನಿತ್ಯ ಮಾಡುವ ಪುಳಿಯೊಗರೆ ಮತ್ತು ಮೊಸರನ್ನ ಬಿಟ್ಟರೆ ನಾಲಿಗೆ ಚಪಲಕ್ಕೂ ಬೇರೆ ತಿಂದವನಲ್ಲ. ಹುಂಬ ಬಿಜೆಪಿಗಿದು ಸಹಜವಾಗಿಯೇ ಆದರ್ಶವಾಗಿ ಕಾಣಿಸುತ್ತದೆ.



ಇಂಥ ಕರ್ಮಠ ಬ್ರಾಹ್ಮಣನನ್ನೇ ಕರ್ನಾಟಕದ



ನರೇಂದ್ರ ಮೋದಿ ಎಂಬಂತೆ ಈಗ ಚೆಡ್ಡಿಗ್ಯಾಂಗ್ ಪ್ರತಿಬಿಂಬಿಸುತ್ತಿದೆ. ಸಂಘಟನೆಯಲ್ಲಿ ಸಂತೋಷ್ ಕಷ್ಟಜೀವಿ ನಿಜ. ಸರಳವ್ಯಕ್ತಿ ಎಂಬುದೂ ಅಷ್ಟೇ ಸತ್ಯ. ಪಕ್ಷದ ಸರ್ವಾಧಿಕಾರಿಯಾಗಿದ್ದೂ ಸ್ವಂತಕ್ಕೊಂದು ಬ್ಯಾಂಕ್ ಖಾತೆ ಹೊಂದಿಲ್ಲ ಎನ್ನುವುದೂ ಸತ್ಯವೇ. ಆದರೆ ಸಂತೋಷ್ ಶ್ರಮ, ಪ್ರತಿಭೆ, ತ್ಯಾಗ ಎಲ್ಲವೂ ಬಳಕೆಯಾಗುವುದು ಬ್ರಾಹ್ಮಣ್ಯದ ವಿಷ ವರ್ಧನೆಗೇ ಹೊರತು ಸಮಾಜಕ್ಕಾಗಲಿ, ಬಡವರಿಗಾಗಲಿ, ದೀನದಲಿತರಿಗಾಗಲಿ ಅಲ್ಲ. ಈ ಥರದ 'ಮರಿ ಮೋದಿ'ಗಳು ಅಪಾಯಕಾರಿಯೇ ಹೊರತು ಪ್ರಗತಿಗಾಗಲಿ, ನ್ಯಾಯಕ್ಕಾಗಲಿ ನಯಾಪೈಸೆಯ ಪ್ರಯೋಜನವುಂಟಾಗುವುದಿಲ್ಲ.

ಮೋದಿಗಿಂತಲೂ ಅಪಾಯ!

ಸಮಾಜದ ಹಿತದೃಷ್ಟಿಯಿಂದ ಸಂತೋಷ್‌ನಂಥ ಕಟ್ಟರ್ ವೈದಿಕ ಶಾಹಿಗಳು ಯಾವತ್ತಿಗೂ ಅನಾಹುತಕಾರಿಗಳೇ. ಯಾವತ್ತು ತನ್ನ ವಿರುದ್ಧ ಈತನನ್ನು ಬಿಜೆಪಿ ಪ್ರಧಾನಕಾರ್ಯದರ್ಶಿ ಹುದ್ದೆಗೆ ಆರೆಸ್ಸೆಸ್ ನೇಮಿಸಿತೋ ಅವತ್ತೇ ಪ್ರಮೋದ್ ಮುತಾಲಿಕ್ ಆರೆಸ್ಸೆಸ್‌ಗೆ ಗುಡ್‌ಬೈ ಹೇಳಿ ಶಿವಸೇನೆಯ ಬೆಂಬಲಕ್ಕೆ ನಿಂತ. ಮುಂದೆ ಬೆಳಗಾವಿ ವಿಷಯದಲ್ಲಿ ಠಾಕ್ರೆ ಜೊತೆಗೂ ಕಿತ್ತಾಡಿಕೊಂಡು ಶ್ರೀರಾಮಸೇನೆಯನ್ನು ಹುಟ್ಟುಹಾಕಿದ. ಅದು ಮುತಾಲಿಕ್‌ನ ಎಡಬಿಡಂಗಿ ತನವಾದರೆ ಸಂತೋಷ್ ಮಾತ್ರ ಹುಷಾರಾಗೇ ಬಿಜೆಪಿಯನ್ನು ಆಕ್ರಮಿಸಿಕೊಂಡೇ ಬಂದ.

ಈಗದು ಫಲ ನೀಡುತ್ತಿದೆ. ಯಡ್ಡಿಯನ್ನು ಇಳಿಸಿ ಇಂಥ ಮರಿ ಮೋದಿಯನ್ನು ಪ್ರತಿಷ್ಠಾಪಿಸಲು ಆರೆಸ್ಸೆಸ್ ಹವಣಿಸುತ್ತಿದೆ. ಬುದ್ಧಿ, ತಂತ್ರ ಮತ್ತು ದುಡಿಮೆಯಲ್ಲಿ ಸಂತೋಷ್ ಮತ್ತೊಬ್ಬ ನರೇಂದ್ರ ಮೋದಿಯೇ ಇರಬಹುದು. ಅಥವಾ ಮೋದಿಗಿಂತಲೂ ಹೆಚ್ಚು ಅಪಾಯಕಾರಿಯೂ ಆಗಬಹುದು. ಪಕ್ಷ ಅಧಿಕಾರದಲ್ಲಿದ್ದೂ ಒಂದೇ ಒಂದು ವೇದಿಕೆಯಲ್ಲಿ ಕಾಣಿಸಿಕೊಳ್ಳದ, ಯಾವುದೇ ಬಹಿರಂಗ ಸಭೆಯಲ್ಲೂ ಜನರ ಕಣ್ಣಿಗೆ ಬೀಳದ, ಮನುಷ್ಯತ್ವವೇ ಇಲ್ಲದೆ ಒಣ ಆದರ್ಶ ಮೆರೆಯುವ ಸಂತೋಷ್‌ನನ್ನು ಮತ್ತೊಬ್ಬ ಮೋದಿ ಎಂದೋ, ಮೋದಿಯ ವಿಕಾರ ರೂಪವೆಂದೋ ಸಂಘಪರಿವಾರ ಎಷ್ಟೇ ಡೋಲು ಹೊಡೆದರೂ ಕೂಡ ಮತ್ತೊಬ್ಬ ಮೋದಿ ಆಗಲಾರ. ಏಕೆಂದರೆ ಮೋದಿಯದು ಕೆಳವರ್ಗದ ಗಾಣಿಗ ಜಾತಿ. ಸಂತೋಷ್ ಪಕ್ಕಾ ಬ್ರಾಹ್ಮಣ.

ಮೋದಿಯ ವೇಷ ಹಾಕಿದಾಕ್ಷಣ ಬ್ರಾಹ್ಮಣ್ಯದ ವಿಷ ಕುಂದುವುದೇ? ಕರ್ನಾಟಕ ಪಾಲಿಗೆ ಸಂತೋಷ್ ಮೋದಿಗಿಂತಲೂ ಅಪಾಯಕಾರಿಯಾದರೆ?



ಸಿದ್ದಗಂಗಾ-ಸುತ್ತೂರು ಮಠಾಧೀಶರೆ... ಈಗೇನು ಹೇಳುತ್ತೀರಿ?



ಯಡಿಯೂರಪ್ಪ ಒಬ್ಬ ಲಿಂಗಾಯತನೆಂಬ ಏಕೈಕ ಕಾರಣಕ್ಕೆ ಬೆಂಬಲ ನೀಡುತ್ತಾ ಬಂದವರಲ್ಲಿ ಸಿದ್ದಗಂಗಾ ಸ್ವಾಮಿ ಹಾಗೂ ಸುತ್ತೂರು ಮಠಾಧೀಶರು ಪ್ರಮುಖರು.

ಲಿಂಗಾಯತನೊಬ್ಬ ಮುಖ್ಯಮಂತ್ರಿಯಾಗದಂತೆ ಜೆಡಿಎಸ್‌ನವರು ಅಡ್ಡಬಂದರೆಂದು ಯಡ್ಡಿ ಬಗ್ಗೆ ಶುರುವಾದ ಅವರ ಸಹಾನುಭೂತಿ ಕಳೆದ 2 ವರ್ಷಗಳಿಂದ ಅಬಾಧಿತವಾಗಿ ಮುಂದುವರೆದಿದೆ. ಈ ಅವಕಾಶವನ್ನೂ ಯಡ್ಡಿ ಚೆನ್ನಾಗಿ ಬಳಸಿಕೊಂಡರು. ಕಣ್ಣಿಗೆ ಕಂಡ ಲಿಂಗಾಯತ ಮಠಗಳಿಗೆಲ್ಲಾ ಕೋಟಿಗಟ್ಟಲೆ ಸರ್ಕಾರಿ ಹಣ ಎತ್ತಿಕೊಟ್ಟರು. ಆಯಕಟ್ಟಿನ ಸ್ಥಾನಗಳಿಗೆ ಲಿಂಗಾಯತ ಅಧಿಕಾರಿಗಳನ್ನು ತಂದು ಕೂರಿಸಿಕೊಂಡರು. ಲಿಂಗಾಯತ ಶಾಸಕರನ್ನೇ ಹೆಚ್ಚು ಸಂಖ್ಯೆಯಲ್ಲಿ ಮಂತ್ರಿಗಳನ್ನಾಗಿ ಮಾಡಿದರು. ಇದೆಲ್ಲಾ ತಂತ್ರ ಮಾಡುತ್ತಾ ಯಡ್ಡಿ ಹಾಗೂ ಬಿಜೆಪಿಗಳು ಲಿಂಗಾಯತರ ಪಕ್ಷವಾಗಿ ಬೆಳೆದು ಬಲಿಷ್ಠರೂ ಆಗಿಹೋದರು. ಈ ಮಧ್ಯೆ ಯಡ್ಡಿಗೆ ಬಿಕ್ಕಟ್ಟು ಬಂದಾಗೆಲ್ಲಾ ಸಿದ್ದಗಂಗಾ ಹಾಗೂ ಸುತ್ತೂರು ಸ್ವಾಮಿಗಳೇ ಮುಂದೆ ನಿಂತು ಯಡ್ಡಿಯ ತಲೆ ಉಳಿಸುವ ಕೆಲಸ ಮಾಡುತ್ತಿದ್ದುದನ್ನು ರಾಜ್ಯದ ಜನ ನೋಡಿದ್ದಾರೆ.

ಆದರೆ


ಇದೇ ಯಡ್ಡಿ ನಂಬರ್ ಒನ್ ಕಳ್ಳ ಎಂಬುದೀಗ ಸಾಬೀತಾಗುತ್ತಿದೆ. ಒಂದೇ ಒಂದು ಜನಪರ ಕೆಲಸ ಮಾಡದ ಯಡ್ಡಿ ತನಗೆ ತನ್ನ ಸಂಸಾರದವರಿಗೆ ನೂರಾರು ಕೋಟಿ ರೂಪಾಯಿಗಳ ಆಸ್ತಿ ಮಾಡಿಕೊಂಡಿರುವುದು ದಾಖಲೆ ಸಮೇತ ಬೆಳಕಿಗೆ ಬರುತ್ತಿದೆ.

ಪಾರ್ಟ್ ಟೈಂ ರಾಜಕಾರಣಿಗಳಂತೆ ವರ್ತಿಸುತ್ತಿರುವ ಶಿವಕುಮಾರ ಸ್ವಾಮಿ ಹಾಗೂ ಸುತ್ತೂರು ದೇಶಿಕೇಂದ್ರ ಸ್ವಾಮಿಗಳು ಈಗೇನು ಹೇಳುತ್ತಾರೆ?

ಯಡ್ಡಿಯ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಖಂಡಿಸುವಷ್ಟು ಪ್ರಾಮಾಣಿಕತೆ ಈ ಮಠಾಧೀಶರಿಗಿದೆಯಾ?

ಉಡುಪಿ: ಅನಾಚಾರಿ ಆಚಾರ್ಯರ
'ನಾಗಾರ್ಜುನಾ ಕರೆಂಟ್' ನಾಟ

ಅಧಿಕ ಪ್ರಸಂಗಿ ಆಚಾರ್ಯನ ನಂಬಿ ಕರೆಂಟ್ ಉತ್ಪಾದಿಸಿದ ನಾಗಾರ್ಜುನಾ ಕ ಕುಳಗಳೀಗ ಹಳ್ಳಕ್ಕೆ ಬಿದ್ದಂತೆ ಚಡಪಡಿಸುತ್ತಿದ್ದಾರೆ. ಕೇಂದ್ರ ಪರಿಸರ ಇಲಾಖೆ ಆಕ್ಷೇಪದಿಂ ಆ ಕಂಪನಿಗೆ ಪಡುಬಿದ್ರಿಯಿಂದಾಚೆ ವಿದ್ಯುತ್ ಸಾಗಿಸುವುದೇ ಕಷ್ಟವಾಗಿದೆ. ನ್ಯಾಂ ಯದ ಒಳಗೆ-ಹೊರಗೆ ನಾಗಾರ್ಜುನಾ ವಿರೋಧಿ ಸಮಿತಿಯವರು ಹೋರಾಡುತ್ತಿರು ಹಲವು ಪರಿಸರ ಕ್ಲಿಯರೆನ್ಸ್‌ಗಳು ಸಿಗದಿರುವಾಗ-ಮೀನುಗಾರರ 'ರೈತರ' ಇನ್ನಿತರ ಸಂಕುಲದ ಬದುಕು ಆಪೋಷನ ಪಡೆವ ಥರ್ಮಲ್ ಪೀಡೆಯ ಪರ ವಹಿಸಿ ಮಾಡುತ್ತಿರುವ ಆಚಾರ್ಯ ಪಾಪಿ ಅಲ್ಲದೆ ಮತ್ತೇನು?



ಉಡುಪಿ ಜಿಲ್ಲೆಗೆ ಮತಾಂಧ ಮಂತ್ರಿ ಡಾ. ವಿ.ಎಸ್. ಆಚಾರ್ಯನೇ ಶಾಪದಂತಾಗಿ ಕಾಡುತ್ತಿದ್ದಾನೆ. ಈ ಹಿಂಬಾಗಿಲ ಪುಢಾರಿಯ ಸಚಿವಗಿರಿ ದರ್ಬಾರಿನಲ್ಲಿ ಉಡುಪಿಗೆ ಉಪಕಾರವಾಗಿದ್ದಕ್ಕಿಂತ ಉಪದ್ರವವಾಗಿದ್ದೇ ಜಾಸ್ತಿ? ಆಚಾರ್ಯ ಲಾಗಾಯ್ತಿನಿಂದಲೂ ಹೇಳೋದು ವೇದ ಇಕ್ಕೋದು ಮಾತ್ರ ಗಾಳ. ಕಡು ಕಳ್ಳ ಯಡ್ಡಿ ಮಹಾತ್ಮನ ಅತ್ಯಾಪ್ತ ಸಲಹೆಗಾರನಾಗಿರುವ ಈ ವಿಪ್ರೋತ್ತಮ ಒಂದು ಕಾಲದಲ್ಲಿ ಥಂಡಿ ಜ್ವರಕ್ಕೆ ಬಣ್ಣದ ಔಷಧಿ ಮತ್ತು ಸ್ಯಾಕ್ ಸ್ಯಾಂಪಲ್ ಗುಳಿಗೆ ಕೊಡುತ್ತ ಚೆಡ್ಡಿ ಬ್ರೈನ್ ಬಡಪಾಯಿ ಅನ್ನಿಸಿಕೊಂಡಿದ್ದರು. ಇವತ್ತು ಆಚಾರ್ಯ ಗೋಲ್‌ಮಾಲ್ ಬಿಜಿನೆಸ್‌ನಿಂದ ಗಟ್ಟಿ ಮುಟ್ಟಾಗಿ ಬೆಳೆದಿದ್ದಾರೆ!



ಡಾಕ್ಟರಿಕೆ ಡಲ್ಲಾದಾಗ ಮಾಡಲು ಕೆಲಸ ವಿಲ್ಲದೆ ಆಚಾರ್ಯ ಕೇಸರಿ ರಾಜಕಾರಣ ಶುರು ಹಚ್ಚಿಕೊಂಡಿದ್ದರು. ಆ ವೇಳೆ ಈ ಹಿಂದುತ್ವದ ಸುಬಗ ಮುಂದೊಂದು ದಿನ ಕರಾವಳಿಗೇ ಕೊಳ್ಳಿಯಿಡುವ ಕಮಂಗಿಯಾಗಬಹುದೆಂದು ಯಾರೂ ಊಹಿಸಿರಲಿಕ್ಕಿಲ್ಲ. ಉಡುಪಿ ಅಸೆಂಬ್ಲಿ ಕ್ಷೇತ್ರದಿಂದ ಇಲೆಕ್ಷನ್‌ಗೆ ನಿಂತು ನಿಂತು ಪಲ್ಟಿ ಹೊಡೆಯುತ್ತಿದ್ದ ಈ ಜನಸಂಘದ ಜಗಳ ಗಂಟ ಒಮ್ಮೆ ಗೆದ್ದೇ ಬಿಟ್ಟಿದ್ದರು. ಕರಾವಳಿಯ 'ಮತ್ಸ್ಯ ಕನ್ಯೆ' ಮನೋರಮಾ ಮಧ್ವರಾಜರ ಆಲಸ್ಯದಿಂದ ಬೇಸತ್ತಿದ್ದ ಜನ ಆಕೆಯನ್ನು ಸೋಲಿಸುವ ಹಠಕ್ಕೆ ಬಿದ್ದಿದ್ದೇ ಆಚಾರ್ಯನಿಗೆ ಅಸೆಂಬ್ಲಿ ಭಾಗ್ಯ ಬರಲು ಕಾರಣವಾಗಿತ್ತು. ಆಗ ಹೆಗಡೆಜೀಯ ಅಲ್ಪಮತದ ಜನತಾರಂಗದ ಸರ್ಕಾರವಿತ್ತು. ಬಿಜೆಪಿಯ ಹದಿನೆಂಟು ಶಾಸಕರ ಲೀಡರಿಕೆ ಇದೇ ಆಚಾರ್ಯನ ಕೈಲಿತ್ತು. ಅಂಗಾತ ಹೆಗಡೆಯನ್ನು ಬ್ಲ್ಯಾಕ್ ಮೇಲ್ ಮಾಡಿ ಜೀರ್ಣೋದ್ಧಾರಗೊಂಡಿದ್ದು ಇವತ್ತಿಗೂ ಕರಾವಳಿಯಲ್ಲಿ ಮನೆ ಮಾತು! ಆ ಹೊತ್ತಲ್ಲಿ ಆಚಾರ್ಯ ಮಾಡಿಸಿದ್ದ ವರ್ಗಾವರ್ಗಿಯಿಂದ ಆತನಿಗೆ 'ಟ್ರಾನ್ಸ್‌ಫರ್ ಆಚಾರ್ಯ' ಎಂಬ ಬಿರುದು ಬಂದುಬಿಟ್ಟಿತ್ತು!!

ಅದೇ ಮೊದಲು; ಅದೇ ಕೊನೆ. ಮತ್ತೆಂದೂ ಈ ಚೆಡ್ಡಿ ಚಿಂತಕರ ಚಾವಡಿಯ ಅಂಕಿಸಂಖ್ಯೆ ಕಸರತ್ತುಗಾರ ಜನರಿಂದ ಗೆದ್ದಿದ್ದೇ ಇಲ್ಲ. ಆದರೆ ಆರೆಸ್ಸೆಸ್ ವಲಯದಲ್ಲಿ ಆಚಾರ್ಯ ಅನಾಹುತಕಾರಿ ಸ್ಟ್ರೇಟಜಿಸ್ಟ್ ಆಗಿ ಅವತರಿಸಿ ಬಿಟ್ಟಿದ್ದರು. ಹೀಗಾಗಿ ವಿಧಾನಪರಿಷತ್ತಿನಲ್ಲಿ ಆತನಿಗೊಂದು ಕಾಯಂ ಕುರ್ಚಿ ಸಂಘ ಪರಿವಾರ ರಿಸರ್ವ್ ಮಾಡಿಟ್ಟು ಬಿಟ್ಟಿತು. ಎಮ್ಮೆಲ್ಸಿ ಕಾಲಾವಧಿಯಲ್ಲೂ ಆತ ಜನಪರ ರಾಜಕೀಯ ಮಾಡಿದ ಕುರುಹುಗಳಿಲ್ಲ. ಜನಸಾಮಾನ್ಯರೆಂದರೆ ಆಚಾರ್ಯನಿಗೆ ಒಂಥರಾ ಅಲರ್ಜಿ. ಆತ ಮಂತ್ರಿಯಾದ ನಂತರವಂತೂ ಒಂದರ ಹಿಂದೊಂದರಂತೆ ಪ್ರಜಾಪೀಡನೆಯ ದಗಲುಬಾಜಿ ದಂಧೆಗಳನ್ನೇ ಮಾಡುತ್ತ ಬಂದರು.

ಅಮಾಯಕರಿಗೆ ಹಿಂದುತ್ವದ ಅಮಲೇರಿಸಿ ಬೇಳೆ ಬೇಯಿಸಿಕೊಳ್ಳುವ ಕುಕಲೆ ಕರಗತ ಮಾಡಿಕೊಂಡಿರುವ ಆಚಾರ್ಯ ಕರಾವಳಿ ಜನರನ್ನು ಕಂಗೆಡಿಸಿ ಕಾಸು ಕಬಳಿಸುತ್ತಿರುವ 'ಕತೆ'ಯೊಂದು ಇಲ್ಲಿದೆ. ಜನರ ಪ್ರತಿರೋಧವನ್ನೆಲ್ಲ ಬುಲ್ಡೋಜ್ ಮಾಡಿ ಉಡುಪಿ ಸಮೀಪದ 'ನಂದಿಕೂರು' ಎಂಬಲ್ಲಿ ಜೀವ ವಿರೋಧಿ ಹಾರುಬೂದಿ (ಕಲ್ಲಿದ್ದಲು) ವಿದ್ಯುತ್ ಘಟಕ ಸ್ಥಾಪಿಸಿದ 'ಕೀರ್ತಿ' ಈ ಸ್ವಯಂ ಘೋಷಿತ ಸಜ್ಜನ ಸಚಿವಗ್ರೇಸನದು!!

ಬದುಕು-ಕಸುಬು ಸರ್ವನಾಶ ಮಾಡುವ ನಾಗಾರ್ಜುನಾ ಥರ್ಮಲ್ ಪವರ್ ಪ್ಲಾಂಟ್ ಬೇಡವೆಂದು ಮೀನುಗಾರರು-ರೈತರು-ಪರಿಸರ ಕಾಳಜಿಯವರು ಅದೆಷ್ಟೇ ಪರಿಪರಿಯಾಗಿ ಬೇಡಿಕೊಂಡರೂ ಕಲ್ಲೆದೆಯ ಆಚಾರ್ಯ ಮಾತ್ರ ಕೇರ್ ಮಾಡಲಿಲ್ಲ; ಆತನದೇ ಪಕ್ಷದ (ಬಿಜೆಪಿ) ಸಂಸದೆಯಾಗಿದ್ದ ಮನೋರಮಾ ಮಧ್ವರಾಜ್, ಕಾಪು ಶಾಸಕ ಲಾಲಾಜಿ ಮೆಂಡನ್ ತಿರುಗಿ ಬಿದ್ದರೂ ತಲೆಕೆಡಿಸಿಕೊಳ್ಳಲಿಲ್ಲ. ಆಚಾರ್ಯನ ಭ್ರಷ್ಟತೆ, ಭಂಡತನ ಬಹಿರಂಗಪಡಿಸಿ ಮನೋರಮೆ ಬಿಜೆಪಿ ಬಿಟ್ಟೇ ಹೋದರು. ಮೆಂಡನ್‌ನ ದೌರ್ಬಲ್ಯ ಬಳಸಿಕೊಂಡು ಆಚಾರ್ಯ ಆತನನ್ನು ತಮ್ಮ ಗುಲಾಮನಾಗಿಸಿಕೊಂಡರು. ಜಿದ್ದಿಗೆ ಬಿದ್ದಂತೆ ಕರಾಳ ಕಾರ್ಯಾಚರಣೆ ಮಾಡಿ ನಾಗಾರ್ಜುನಾ ಪವರ್ ಕಂಪನಿಯನ್ನು ನಂದಿಕೂರಲ್ಲಿ ಪ್ರತಿಷ್ಠಾಪಿಸಿಯೇ ಬಿಟ್ಟರು! ಅದರಿಂದ ಆತ ದೊಡ್ಡ ಕಿಕ್ ಬ್ಯಾಕ್-ಪರ್ಸೆಂಟೇಜ್ ಪಡೆದಿರುವುದು ಕರಾವಳಿಯ ಪೂರಿನೇ ಈಯತ್ತೇ ಮಕ್ಕಳಿಗೂ ಗೊತ್ತಿರುವ ರಹಸ್ಯ. ಉಡುಪಿ ಹಾಳಾದರೇನು? ಬೀಳಾದರೇನು? ಆಚಾರ್ಯನಿಗೆ ಪಾಲು ಬಂದರಾಯ್ತು!!

ಮನೋರಮಾ ಅದೆಷ್ಟೋ ಬಾರಿ ಮುಖಾಮುಖಿ ನಿಂತೇ ಆಚಾರ್ಯನ ನಾಗಾರ್ಜುನಾ ಡೀಲ್ ಬಗ್ಗೆ ಬೊಬ್ಬೆ ಹಾಕಿದ್ದರು. ಜನರಂತೂ 'ಇದೊಂದು ಪರಿಸರ ವಿನಾಶಿ ಯೋಜನೆ... ಆ ಕಾರಣಕ್ಕೇ ವಿಶ್ವದಾದ್ಯಂತ ಥರ್ಮಲ್ ವಿದ್ಯುತ್ ಯೋಜನೆಗಳನ್ನು ತಿರಸ್ಕರಿಸಲಾಗುತ್ತಿದೆ....' ಎಂದು ವಾದ ಮಂಡಿಸಿ ಪ್ರತಿಭಟನೆ ಹಮ್ಮಿಕೊಂಡಿದ್ದರು. ಆಗೆಲ್ಲ ಸಲೀಸಾಗಿ ಸುಳ್ಳು ಹೇಳುತ್ತ ಬಂದರು ಆಚಾರ್ಯ 'ಅದೆಲ್ಲ ಸುಳ್ಳು ಮಾರಾಯ್ರೇ... ಸಿಂಗಪುರದ ಪ್ರೈ ಮಿನಿಸ್ಟರ್ ಮನೆ ಮುಂದೆಯೇ ಅಂಥದೊಂದು ಕಲ್ಲಿದ್ದಲು ಕರೆಂಟ್ ಸ್ಥಾವರ ನಿಲ್ಲಿಸಿಲ್ಲವಾ...?' ಎಂದು ಬೊಂಗು ಬಿಡುತ್ತಿದ್ದರು. ಜನ ವಿರೋಧ ಎದುರಾದಾಗೆಲ್ಲ ಈ ನಿರ್ಲಜ್ಜ ಮಂತ್ರಿ ತುಂಬ ಮುತುವರ್ಜಿಯಿಂದ ನಾಗಾರ್ಜುನಾ ಪರನಿಂತು ವಕಾಲತ್ತು ಮಾಡುತ್ತಲೇ ಬಂದರು.



ಮನೆ ಮುರುಕ ಆಚಾರ್ಯ ಎಷ್ಟೇ ತಿಪ್ಪರಲಾಗ ಹಾಕಿದರೂ ನಾಗಾರ್ಜುನಾ ಕಂಪನಿಗೆ ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಗ್ರಾಮ ಪಂಚಾಯತದ ಅದೆಷ್ಟೋ ನಿರಾಕ್ಷೇಪಣಾ ಪತ್ರಗಳೇ ಸಿಗಲಿಲ್ಲ. ದಿಕ್ಕೆಟ್ಟ ಜನರ ಬದುಕಿನ ಹೋರಾಟವಂತೂ ನಿಲ್ಲಲೇ ಇಲ್ಲ. ನ್ಯಾಯಾಲಯದಲ್ಲಿ ಹಲವು ವ್ಯಾಜ್ಯಗಳೂ ನಡೆಯುತ್ತಿದ್ದವು. ಆದರೆ ಆಚಾರ್ಯ ಪ್ರಳಯಾಂತಕ ನಾಗಾರ್ಜುನ ಕರೆಂಟ್ ಯೋಜನೆಗೆ ಒತ್ತಾಸೆಯಾಗಿ ನಿಂತಿದ್ದರು. ಆತನ ಭರವಸೆ-ಕುಮ್ಮಕ್ಕಿನಿಂದ ಆಂಧ್ರ ಮುಳ್ಳುಗಳು ಈ ವಿದ್ಯುತ್ ಉತ್ಪಾದನೆ ಆರಂಭಿಸಿಯೇ ಬಿಟ್ಟರು.

ವಿದ್ಯುತ್ ಸಾಗಾಣಿಕೆಗೆ ತಂತಿ ಮಾರ್ಗವಿಲ್ಲದಿದ್ದರೂ ಈ ವಿದ್ಯುತ್ ಸ್ಥಳೀಯವಾಗಿ ಬಳಸಿಕೊಳ್ಳಲಾಗುತ್ತದೆ ಎಂದು ಎಡವಟ್ಟು ಹೇಳಿಕೆ ಎಸೆದು ಬಿಟ್ಟರು. ಪೆದ್ದು ಮಂತ್ರಿ ಆಚಾರ್ಯ. ಪಶ್ಚಿಮ ಘಟ್ಟದ ಕಾಡಲ್ಲಿ 440 ಕೆವಿ ವಿದ್ಯುತ್ ಲೈನ್ ಎಳೆಯಲು ಕೇಂದ್ರ ಪರಿಸರ ಇಲಾಖೆ ಇವತ್ತಿಗೂ ಅನುಮತಿ ಕೊಟ್ಟಿಲ್ಲ. ಪ್ರಭೃತಿಯಂತೆ ಪೋಸು ಕೊಡುವ ಆಚಾರ್ಯನನ್ನು 'ಈ ವಿದ್ಯುತ್ ರಿಕ್ಷಾ-ಲಾರಿಗಳಲ್ಲಿ ಸಾಗಾಣಿಕಾ ಮಾಡ್ತಾರಾ?' ಎಂದು ನಾಗಾರ್ಜುನಾ ವಿರೋಧಿ ಸಂಘಟನೆಗಳು ಕೇಳುತ್ತಿದ್ದಾರೆ. ಆಚಾರ್ಯ ಉತ್ತರ ಕೊಡದೆ ತಲೆ ತಪ್ಪಿಸಿಕೊಂಡು ಕೆಂಪು ಗೂಟದ ಕಾರಲ್ಲಿ ಅಂಡಲೆಯುತ್ತಿದ್ದಾರೆ.

ಈ ಅಧಿಕ ಪ್ರಸಂಗಿ ಆಚಾರ್ಯನ ನಂಬಿ ಕರೆಂಟ್ ಉತ್ಪಾದಿಸಿದ ನಾಗಾರ್ಜುನಾ ಕಂಪನಿ ಕುಳಗಳೀಗ ಹಳ್ಳಕ್ಕೆ ಬಿದ್ದಂತೆ ಚಡಪಡಿಸುತ್ತಿದ್ದಾರೆ. ಕೇಂದ್ರ ಪರಿಸರ ಇಲಾಖೆ ಆಕ್ಷೇಪದಿಂದಾಗಿ ಆ ಕಂಪನಿಗೆ ಪಡುಬಿದ್ರಿಯಿಂದಾಚೆ ವಿದ್ಯುತ್ ಸಾಗಿಸುವುದೇ ಕಷ್ಟವಾಗಿದೆ. ಇತ್ತ ಜನರಂತೂ ಆಚಾರ್ಯನ ಘೋರ ಅನ್ಯಾಯದಿಂದ ರೌರವನರಕ ಕೂಪಕ್ಕೆ ಬಿದ್ದು ಒದ್ದಾಡುತ್ತಿದ್ದಾರೆ. ನಾಗಾರ್ಜುನಾ ಸೈಟ್‌ನಿಂದ ಐದಾರು ಕಿ.ಮೀ. ವ್ಯಾಪ್ತಿಯ ಬಾವಿಯ ನೀರು ಕಲ್ಲಿದ್ದಲು ಮತ್ತು ಹಾರುಬೂದಿಯಿಂದ ಹಾಳಾಗಿಹೋಗಿದೆ; ಗದ್ದೆ ತೋಟಗಳು ಬಂಜರಾಗಿದೆ; ಮೀನುಗಾರರು ಸಮುದ್ರಕ್ಕೆ



ಸ್ಥಾವರದ ವಿಷ ಬೆ ಭಯದಿಂದ ಕಂಗಾಲಾಗಿದ್ದಾರೆ. ನಾಗಾರ್ಜುನಾದ ಸಮಸ್ಯೆಯಿಂದ ಪಡುಬಿದ್ರಿ-ನಂದಿಕೂ ಮಂದಿ ಸಂಕಟ ಅನುಭವಿಸುತ್ತಿದ್ದರೂ ಜಿಲ್ಲೆಯ ಉಸ್ತುವಾ ರಾಜ 'ಥರ್ಮಕಾರ' ಪಿಟೀಲು ಬಾರಿಸು ಐಲು ಆಚಾರ್ಯ ನಾಗಾರ್ಜುನದ ಏಜೆಂಟನಂತೆ ಬಹಿರಂ ಬೊಬ್ಬೆ ಹೊಡೆಯುತ್ತಿದ್ದಾರೆ. ಈ ಪವರ್ ಸಚಿವ ಸಂಪುಟ ಸಭೆಯಲ್ಲಿ ಬರೋಬ್ಬರಿ 565 ಕೊಡಿಸಿದ್ದಾರೆ. 600 ಮೆವ್ಯಾ ವಿದ್ಯುತ್ ಉತ್ಪಾದನಾ ಸಾ ಈ ಸ್ಥಾವರ 612 ಮೆವ್ಯಾ ಕರೆಂಟು ತಯಾರು ಎಂದು ಬುದ್ಧಿಪೂರ್ವಕವಾಗೇ ಮಸಲತ್ತು ಮಾಡ ಗರಿಷ್ಠವೆಂದರೆ ಶೇಕಡ 65ರಷ್ಟು ಮಾತ್ರ ವಿದ್ಯು ಸ್ಥಾವರದಿಂದ ಉತ್ಪಾದಿಸಲು ಸಾಧ್ಯವೆಂಬ ಸತ್ಯ ಗೊ ಜನರನ್ನು ದಾರಿ ತಪ್ಪಿಸಲು ನಾಟಕವಾಡು ನಾಗಾರ್ಜುನದ 'ಹಮ್ಮಿಣಿ'ಗಾಗಿ ಆ ಕಂಪನಿಯ ವ ಯಡ್ಡಿಯ ಮಂತ್ರಿ ಆಚಾರ್ಯ ಬೊಗಳುತ್ತಿ ಉಡುಪಿ ಜನರಿಗೆ ವಾಕರಿಕೆ ಮೂಡಿಸಿ ಬಿಟ್ಟಿದೆ.

ಕರಾವಳಿಯಲ್ಲಿ ವಿದ್ಯುತ್ ಪ್ರತಿ ಯುನಿಟ್‌ಗೆ ಪೈಸೆಗೆ ದೊರೆಯುತ್ತಿರುವಾಗ ನಾಗಾರ್ಜುನದ ಕರೆಂಟ್ ಪ್ರತಿ ಯುನಿಟ್‌ಗೆ 2.65 ರೂ. ಕೊಟ್ಟು ಖರೀದಿಸುತ್ತಾರೆ? ಇಂಥ ಪ್ರಶ್ನೆಗಳು ಎದು ಆಚಾರ್ಯ ಮಳ್ಳಿಯಂತೆ ನಗುತ್ತ ಜಾಗ ಖಾಲಿ ಆಚಾರ್ಯ ಅದೆಂಥ ಜನದ್ರೋಹಿಯೆಂದರೆ, ಪ್ರಳ ನಾಗಾರ್ಜುನ ಪ್ರಾಜೆಕ್ಟನ್ನು ಅಡಿಗಡಿಗೆ ತಾರೀಫು ಮಾ ಇದ್ದಾರೆ. 620 ಮೆಗಾವ್ಯಾಟ್‌ನ ಮೊದಲ ಸಮರ್ಪಕವಾಗಿ ಕೆಲಸ ಮಾಡದಿರುವಾಗ ಇನ್ನೂ ಮೆಗಾವ್ಯಾಟ್ ಕರೆಂಟನ್ನು ಕಲ್ಲಿದ್ದಲು ಸುಟ್ಟು ನಂ ಉತ್ಪಾದಿಸಲಾಗುತ್ತದೆಂದು ಕಿರುಚಾಡುತ್ತಿದ್ದಾರೆ. ನ ಯದ ಒಳಗೆ-ಹೊರಗೆ ನಾಗಾರ್ಜುನಾ ವಿರೋಧಿ ಯವರು ಹೋರಾಡುತ್ತಿರುವಾಗ, ಹಲವು ಪರಿಸರ ಕ್ಲಿ ಗಳು ಸಿಗದಿರುವಾಗ-ಮೀನುಗಾರರ 'ರೈತರ' ಇನ್ನಿತ ಸಂಕುಲದ ಬದುಕು ಆಪೋಷನ ಪಡೆವ ಥರ್ಮಲ್ ಪರವಹಿಸಿ ಪಾತಕ ಮಾಡುತ್ತಿರುವ ಆಚಾರ್ಯ ಪಾಪಿ ಮತ್ತೇನು?

ಇನ್ನಾದರೂ ಕರಾವಳಿಗರಿಗೆ ಸಂಘಪರಿವಾರಗ ಘಾತುಕ ಗುಣಧರ್ಮ ಅರ್ಥವಾದೀತಾ?


• ನ

ಪೇಜಾವರರೇಕೆ ಹಾಗೇ ಸುಮ್ಮನಿದ್ದಾರೆ?


ಬಿಜೆಪಿ 'ರಾಜಗುರು' ಪೇಜಾವರ ಮಠಾಧೀಶ ವಿಶ್ವೇಶತೀರ್ಥರೇಕೆ ತಮ್ಮ ಮಠದ ಪಕ್ಕವೇ ಸ್ಥಾಪಿತವಾಗಿ ಕಾಡುತ್ತಿರುವ ಕಲ್ಲಿದ್ದಲು ಕರೆಂಟ್ ಭೂತ ಕಂಡೂಕಾಣದಂತಾಗಿದ್ದಾರೆ? ಮಂಗಳೂರಿನ ಎಸ್‌ಇಝಡ್ ವಿರುದ್ಧ ಆಗಾಗ 'ಮಂತ್ರ ದಂಡು' ಝಳಪಿಸುವ ಪೇಜಾವರರು ತಮ್ಮ ಪಟ್ಟ ಶಿಷ್ಯ ಡಾ. ಆಚಾರ್ಯನೇ ಖುದ್ದು ನಿಂತು ಜೀವನಾಶಿ ನಾಗಾರ್ಜುನಾ ಪವರ್ ಪ್ರಾಜೆಕ್ಟ್ ಪ್ರಾರಂಭಿಸಿದರೂ ಹಾಂಗೇ ಸುಮ್ಮನೇಕಿದ್ದಾರೆ? ಪರಿಸರ ಕಾಳಜಿ, ರೈತ-ಮೀನುಗಾರರ ಹಿತ ಗುತ್ತಿಗೆ ಹಿಡಿದಂತೆ ಮಾತು-ಭಾಷಣ ಬಿತ್ತರಿಸುವ ಈ ಪಾಲಿಟಿಕಲ್ ಸ್ವಾಮಿ ನಾಗಾರ್ಜುನದ ಹಣವಂತರ ಜಾದೂಕ್ಕೇನಾದರೂ ಮರುಳಾಗಿದ್ದಾರಾ? ಈ ಒಗಟು ಇವತ್ತು ಕರಾವಳಿಗರಿಗೆ ಬಿಡಿಸಲಾಗದೆ ಸಿಕ್ಕುಸಿಕ್ಕಾಗುತ್ತಿದೆ...

ಬಿಜೆಪಿ ಸರ್ಕಾರದಲ್ಲಿ ಪವರ್‌ಫುಲ್ ಆಗಿರುವ ಪೇಜಾವರರೇನಾದರೂ ನಾಗಾರ್ಜುನ ಸ್ಥಾವರದ ವಿರುದ್ಧ ಪ್ರಾಮಾಣಿಕವಾಗಿ ಚಳವಳಿ ಮಾಡಿದ್ದರೆ ಇಷ್ಟೊತ್ತಿಗೆ ಕರಾವಳಿ ಸೇಫಾಗುತ್ತಿತ್ತು! ಕೋಟ್ಯಾಂತರ ರೂ. ಆದಾಯದ ಕೃಷ್ಣ ದೇಗುಲವನ್ನೇ ಒಂದೇಟಿಗೆ ಜೋಳಿಗೆ ತುಂಬಿಕೊಂಡಿರುವ ಪೇಜಾವರರಿಗೆ ನಾಗಾರ್ಜುನ ಕಂಪನಿಯವರ ಗಂಟು ಮೂಟೆ ಕಟ್ಟಿಸಿ ಓಡಿಸುವುದು ಅಂಥ ದೊಡ್ಡ ಕೆಲಸವೇನಾಗಿರಲಿಲ್ಲ. ಕೃಷ್ಣ ದೇಗುಲ ಕಬಳಿಸುವಾಗ ತೋರಿಸಿದ 'ಬದ್ಧತೆ-ಶ್ರದ್ಧೆ'ಯ ಕಾಲುಭಾಗ ನಾಗಾರ್ಜುನಾ ಪಲಾಯನಕ್ಕೆ ತೋರಿಸಿದ್ದರೆ ಸಾಕಿತ್ತು. ಆದರೆ ಅದ್ಯಾಕೋ ಪೇಜಾವರರು ನಿಗೂಢ 'ಪಾಟಸ್ಥ ವ್ರತ' ಆಚರಣೆಯಲ್ಲಿದ್ದಾರೆ.

ಉತ್ತರ ಕನ್ನಡಿಗರು ಒಂದಲ್ಲ ಎರಡು ಹಾರುಬೂದಿ ಪ್ರಾಜೆಕ್ಟ್‌ಗಳನ್ನು ಜಿಲ್ಲೆಯಲ್ಲಿ ತಳವೂರುವ ಮೊದಲೇ ಬಡಿದೋಡಿಸಿದ್ದಾರೆ. ಒಂದಂತೂ ಬಿಜೆಪಿ ಮಾಂಡಲೀಕ ವೆಂಕಯ್ಯನಾಯ್ಡುವೇ ಒಡೆಯನಾಗಿದ್ದ ಹಣಕೋಣ ಥರ್ಮಲ್ ಸ್ಥಾವರ. ಇನ್ನೊಂದು ಕಾಂಗ್ರೆಸ್ ನಾಯಕಿ ಮಾರ್ಗರೆಟ್ ಆಳ್ವ ತನ್ನ ಪಕ್ಷದ ಕೇಂದ್ರ ಸರ್ಕಾರಕ್ಕೆ ಪ್ರಾಜೆಕ್ಟ್ ಬಗೆಗಿನ ಜನ ವಿರೋಧ ಅರುಹಿ ಹಿಂತೆಗೆಸಿದ ತದಡಿ ಕಲ್ಲಿದ್ದಲು ವಿದ್ಯುತ್ ಯೋಜನೆ. ಇಲ್ಲಿ ಜನರ ಹೋರಾಟ ಗೆಲ್ಲಲು ಕಾರಣ- ಆಚಾರ್ಯನಂಥ ದಗಾಕೋರ ಪುಢಾರಿಗಾಗಲಿ, ಪೇಜಾವರರಂಥ ಢೋಂಗಿ ಸ್ವಾಮೀಜಿಗಾಗಲಿ ಜನರು ತಮ್ಮ ಚಳವಳಿಯಲ್ಲಿ ಮೂ ತೂರಿಸಿ ಡಬ್ಬಲ್ ಗೇಮ್ ಆಡಲು ಅವಕಾಶ ಕೊಟ್ಟಿರಲಿಲ್ಲ. ಆದರೆ ಹಿಂದುತ್ವದ ಅಮಲೇರಿಸಿ ಉಡುಪಿ ಜನರಿಗೆ ಆಚಾರ್ಯ-ಪೇಜಾವರರು ಯಾಮಾರಿಸಿ ನೋಡುತ್ತಿದ್ದಾರೆ. ಜನ ದ್ರೋಹ ಮಾಡುತ್ತಿದ್ದಾರೆ.



ಮೂರುಸಾವಿರ ಮಠ ಕಳ್ಳಸ್ವಾಮಿ ಗುರುಸಿದ್ಧ ಮತ್ತೆ ಆಸ್ತಿ ಮಾರಿದ!


|| ಶ್ರೀ ||
ಖರೀದಿ ಪತ್ರ
ಶ್ರೀ. ಶಿವಾನಂದ ತಂದೆ ಪ್ರಭಾಕರ ಹಿಪ್ಪರಗಿ.

ಹುಬ್ಬಳ್ಳಿ ಜಮೀನಿನ ಖರೀದಿ ಪತ್ರ



ಸಹಿ ಜಡಿದು ಬರುತ್ತಾನೋ ಗೊತ್ತಿಲ್ಲ.


ಮೂರು ಸಾವಿರ ಮಠದ ಸ್ವಾಮಿ ಗುರುಸಿದ್ಧ ಮತ್ತೆ ...ಕರಿ ಕಾಯಕಕ್ಕೆ ನಿಷ್ಠೆಯಿಂದ ಚಾಲನೆ ಕೊಟ್ಟಿದ್ದಾನೆ. ... ತಿಂಗಳ ಹಿಂದೆ ಬರೋಬ್ಬರಿ 42 ಆಸ್ತಿಗಳಿಗೆ ...ಬಿಟ್ಟಿದ್ದ ಗುರುಸಿದ್ಧ ಈಗ ಮತ್ತೊಂದು ಬೆಲೆಬಾಳುವ ...ರ್ಟಿಯನ್ನ ಸೇಲ್ ಮಾಡಿ ಹಣ ಎಣಿಸಿಕೊಂಡು ...ಮೌನವ್ರತ ಆರಂಭಿಸಿದ್ದಾನೆ. ಹೀಗೆ ಮಠದ ಆಸ್ತಿಗಳನ್ನು ...ಂದಂತೆ ಮಾರುತ್ತಿರುವ ಗುರುಸಿದ್ಧನ ಕಾವಿ ಕಿತ್ತು ...ನ್ನು ಮನೆಗೆ ಕಳುಹಿಸಬೇಕಾದ ಮಠದ ಹೈ ಪವರ್ ... ಮಾತ್ರ ತೆಪ್ಪಗಿದೆ.

...ಹಾನಗಲ್ಲ ಕುಮಾರೇಶ್ವರ ಮಠದಿಂದ ಹುಬ್ಬಳ್ಳಿಯ ...ರು ಸಾವಿರ ಮಠಕ್ಕೆ ಪ್ರಮೋಶನ್ ಪಡೆದು ಬಂದು ...ಗುರುಸಿದ್ಧನ ಸ್ಟೇಟಸ್ ಹೆಚ್ಚಿಗೆ ಆದಂತೆ ಸ್ವಾಮಿಯ ...ನನ್ಸ್ ಕೂಡಾ ತಾರಕಕ್ಕೇರಿದೆ. ಅದಕ್ಕೆ ಈಗ ಮಠದ ...ಳೇ ಒಂದೊಂದಾಗಿ ಕರಗಹತ್ತಿವೆ.

...ಂಥಾ ಮಾನಗೇಡಿ ಗುರುಸಿದ್ಧ ಇದೀಗ ಸಿಂಧೋಗಿ-...ವಳ್ಳಿಯ ಆಲೂರು ಮಠದ (ಹಾನಗಲ್ಲ ಕುಮಾರೇಶ್ವರ ... ಶಾಖಾ ಮಠ) ಆಸ್ತಿಯನ್ನ ವ್ಯಾಪಾರಿ ಒಬ್ಬನಿಗೆ ... ಮತ್ತೆ ಸುದ್ದಿಯಲ್ಲಿದ್ದಾನೆ. ಹುಬ್ಬಳ್ಳಿಯ ಸೊರಬದ ... ಹೊಂದಿಕೊಂಡಿರುವ ಮಠದ ಈ ಆಸ್ತಿಯನ್ನ ...ಕರ ಹಿಪ್ಪರಗಿ ಎಂಬುವರಿಗೆ ಮಾರಾಟ ಮಾಡಲಾಗಿದೆ. ...ವಳ್ಳಿ ಆಲೂರು ಮಠದ ಆಸ್ತಿಗಳ ಜೆಪಿಎ ಹೋಲ್ಡರ್ ...ಬಿ.ಜಿ. ಸಂಕನಮಠ ಗುರುಸಿದ್ಧ ತೋರಿಸಿದ ...ಕಡೆ ಸಹಿ ಮಾಡಿ ಕೈ ತೊಳೆದುಕೊಂಡಿದ್ದಾನೆ. ... ಪತ್ರದ ಪ್ರಕಾರ ಈ ಆಸ್ತಿಯನ್ನ ಒಂದು ... ಎಂಟು ಸಾವಿರ ರೂಪಾಯಿಗೆ ಮಾರಾಟ ...ಲಾಗಿದೆ. ಅಸಲಿಗೆ ಈ ಮಾರಾಟದ ಬೆಲೆ ...ಮುದಿದೆ.

...ಮಿಯ ಎಲ್ಲ ಹಲ್ಕಾ ಕೆಲಸಗಳ ... ಸೆಕ್ಯೂರಿಟಿಗೆ ನಿಲ್ಲುವ ಬಸವರಾಜ ...ಗಿಮಠ ಈ ಡೀಲು ...ಸಿದ್ದಾನೆ. ಹೆಚ್ಚಿನ ಕೆಲಸದ ನಿಮಿತ್ತ ...ಊರುಗಳಿಗೆ ಓಡಾಡಲು. ... ಮಠದ ಇಸ್ನಿತರೆ ...ಳನ್ನ ನಡೆಸಿಕೊಂಡು ...ಲು ಹಣಕಾಸಿನ ...ಕೆ ಇಡುವುದರಿಂದ ...ಗಳನ್ನ ಮಾರಿದ್ದೇನೆ

...ಕೊಂಡಿರುವ ...ದ್ದ ನೋಂದಣಿ ...ಲ್ಲಿ ತೋರಿಸಿರುವ ...ಸ್ತಿ ಅಸಲಿ ...ಬಂದ ಹಣವನ್ನ ...ಗುಟ್ಟಿಗೆ



ಇಡುತ್ತಿದ್ದಾನೆ ಎಂಬ ಪ್ರಶ್ನೆ ಕೂಡಾ ಮೂಡುತ್ತಿದೆ. ಸ್ವಾಮಿ ಜೊತೆಗಿರುವ ಚೇಲಾಗಳ ಪುಕಾರಿನಂತೆ ಈಗ ಮಾರಿರುವ ಆಸ್ತಿಗೆ ಮಾರುಕಟ್ಟೆಯಲ್ಲಿ ಒಂದು ಕೋಟಿಗೂ ಹೆಚ್ಚು ಬೆಲೆ ಇದೆ.

ಬಾಡಿಗೆಗೆ ಇದ್ದವನೇ ಮಾಲೀಕನಾದ



ಈಗ ಪರಭಾರೆ ಮಾಡಿರುವ ಆಸ್ತಿಯಲ್ಲಿ ಶಿವಾನಂದ ಪ್ರಭಾಕರ ಹಿಪ್ಪರಗಿ ಹಲವಾರು ವರ್ಷಗಳಿಂದ ಬಾಡಿಗೆಗೆ ಇದ್ದರು. ಈಗ ಅದೇ ಆಸ್ತಿಗೆ ಅವರು ಮಾಲೀಕರಾಗಿದ್ದಾರೆ. 26 ಮೇ 2010 ರಂದು ಈ ಆಸ್ತಿಯನ್ನ ಹಿಪ್ಪರಗಿಗೆ ಮಾರಾಟ ಮಾಡಲಾಗಿದೆ. ಜೆಪಿಎ ಹೋಲ್ಡರ್ ಬಿ.ಜಿ. ಸಂಕಿನಮಠ ಹಿರಿಯ ಉಪನೋಂದಣಾಧಿಕಾರಿ ಎನ್. ಶ್ರೀನಿಧಿ ಎಂಬುವರ ಮುಂದೆ ಖರೀದಿ ಕಾಗದಕ್ಕೆ ಸಹಿ ಮಾಡಿದ್ದಾನೆ. ಇದಕ್ಕೆ ಸಾಕ್ಷಿಗಳಾಗಿ ಹುಬ್ಬಳ್ಳಿಯ ಕೌಲ್ ಪೇಟೆಯ ಆರ್.ಪಿ. ಬದ್ದಿ ಮತ್ತು ಉಣಕಲ್ಲಿನ ಮಂಜುನಾಥ ಫಿರಂಗಿ ಎಂಬುವರು ರುಜು ಮಾಡಿದ್ದಾರೆ. ಈ ಆಸ್ತಿ ಮಾರಾಟದ ಪತ್ರವನ್ನ ಶ್ರೀಕಾಂತ ಬದ್ದಿ ಎಂಬುವನು ತಯಾರಿಸಿಕೊಟ್ಟಿದ್ದಾನೆ. ಐದು ತಿಂಗಳ ಹಿಂದೆ ಈ ಗೌಪ್ಯ ಪರಭಾರೆ ಕಾರ್ಯ ಮುಗಿದುಹೋಗಿದ್ದರೂ ಇದುವರೆಗೆ ಇದರ ವಾಸನೆ ಬಡಿದಿರಲಿಲ್ಲ.

ಉದಾಸಿಯೂ ಉಂಡನೇ?

ಹಾನಗಲ್ಲ ಕುಮಾರೇಶ್ವರ ಮಠಕ್ಕೆ ಯಾವುದೇ ಆಡಳಿತ ಮಂಡಳಿ ಇಲ್ಲ. ಗುರುಸಿದ್ಧ ಸ್ವಾಮಿಯೇ ಸೋಲ್ ಟ್ರಸ್ಟಿ. ಆಸ್ತಿಗಳಿಗೆ ಮಾತ್ರ ಸಂಕಿನಮಠ ಜೆಪಿಎ ಹೋಲ್ಡರ್. ಇಷ್ಟೆಲ್ಲಾ ಇದ್ದರೂ ಮಠದ ಮೇಲೆ ಮಂತ್ರಿ ಸಿ.ಎಂ. ಉದಾಸಿಯ ನೆರಳು ಮಾತ್ರ ಬಹಳ ಹಿಂದಿನಿಂದಲೂ ಇದೆ. ಈ ಮಠದ ಪರಮ 'ಭಕ್ತ'ನಾದ ಉದಾಸಿ ಹೇಳಿದಂತೆ ಇಲ್ಲಿ ಎಲ್ಲಾ ನಡೆಯುತ್ತೆ. ಅದರಂತೆ ಈ ಆಸ್ತಿಗಳನ್ನು ಉದಾಸಿಯ ಅಪ್ಪಣೆಯಂತೆ ಮಾರಲಾಗಿದೆಯೇ? ಎಂಬ ಪ್ರಶ್ನೆ ಕೂಡಾ ಈಗ ಮಠದ ಭಕ್ತರಲ್ಲಿ ಮೂಡಿದೆ. ಸ್ವಾಮಿ ಸದ್ದಿಲ್ಲದೆ ಗೌಪ್ಯವಾಗಿ ಒಂದೊಂದೆ ಆಸ್ತಿಗಳನ್ನ ಮಾರವಾಡಿಗಳಿಗೆ ಮಾರುತ್ತಿರುವುದು, ಕೋಟ್ಯಾಂತರ ಹಣಕ್ಕೆ ಡೀಲ್ ಕುದುರಿಸಿ ಕೊಳ್ಳುತ್ತಿರುವುದು ಉದಾಸಿಗೆ ಗೊತ್ತಿಲ್ಲವೇ? ಅಥವಾ ಸ್ವಾಮಿಯ ಕಳ್ಳ ವ್ಯವಹಾರಗಳಲ್ಲಿ ಮಳ್ಳ ಮಂತ್ರಿ ಉದಾಸಿಗೂ ಪಾಲಿದೆಯಾ?

ಮಾಜಿ ಸ್ವಾಮಿ ಮುಜಗಂ ಸಮಾಧಿ ಸೇರಿದ ನಂತರ ಮೂರು ಸಾವಿರ ಮಠಕ್ಕೆ ಗುರುಸಿದ್ಧನನ್ನ ತಂದು ಕೂರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದು ಇದೇ ಉದಾಸಿ. ಮೂರುಸಾವಿರಮಠದ ಹೈಪವರ್ ಕಮಿಟಿಯಲ್ಲಿರುವ ಮಂತ್ರಿಗಳಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಶಾಸಕರುಗಳಾದ ವಿಜಯ ಸಂಕೇಶ್ವರ, ಮೋಹನ ಲಿಂಬಿಕಾಯಿ, ವೀರಣ್ಣ ಮತ್ತಿಗಟ್ಟಿ, ಬಸವರಾಜ ಹೊರಟ್ಟಿ ಅಲ್ಲದೇ ಶಂಕ್ರಣ್ಣ ಮುನವಳ್ಳಿಯಂಥವರೂ ಸ್ವಾಮಿಯ ಆಸ್ತಿ ಮಾರಾಟದ ಕಳ್ಳ ವ್ಯವಹಾರ ಗೊತ್ತಾದ ನಂತರವೂ ತೆಪ್ಪಗಿರುವುದು ಸಂಶಯ ಹುಟ್ಟಿಸುತ್ತಿದೆ.

ಇನ್ನು ಗುರುಶಿದ್ಧ ಸ್ವಾಮಿಯೊಂದಿಗೆ ಸೇರಿಕೊಂಡು ಆಸ್ತಿಯುನ್ನು ಕೊಳ್ಳೆ ಹೊಡೆಯುತ್ತಿರುವ ಬಸವರಾಜ ಕುರಡಗಿಮಠನನ್ನ ಮಂತ್ರಿ ಉದಾಸಿ ರಸ್ತೆ ಅಭಿವೃದ್ಧಿ ಮಂಡಳಿಗೆ ನೇಮಕ ಮಾಡಿರುವುದು ಮತ್ತೊಂದು ಸಂಶಯಕ್ಕೆ ಕಾರಣವಾಗಿದೆ. ಕೈ ಮುಗಿಯುವ ಮಠದ ಆಸ್ತಿಯನ್ನೆ ಬಿಡದ ಕಳ್ಳ ಕುರಡಗಿಮಠ ಇನ್ನು ರಾಜ್ಯದ ರಸ್ತೆಗಳನ್ನು ಬಿಟ್ಟಾನೆಯೇ? ನಡು ರಸ್ತೆಯಲ್ಲಿ ರೌಡಿ ಪಲ್ಲಿಯನ್ನ ಮಚ್ಚಿನಿಂದ ಕೊಂದು ಜೈಲು ಸೇರಿರುವ ರೌಡಿ ರಜನಿಕಾಂತ ಬಿಜವಾಡನ ರೈಟ್‌ಹ್ಯಾಂಡ್ ಆಗಿರುವ ಕುರಡಗಿಮಠ ಪಾತಕಿಗಳ ಬೆಂಬಲದೊಂದಿಗೆ ಗುರುಸಿದ್ಧನ ಹಲ್ಕಾ ಕೆಲಸಗಳಿಗೆ ನೇರಳಾಗಿ ನಿಂತಿದ್ದಾನೆ.

ಮತ್ತೊಂದು ಪ್ರಾಪರ್ಟಿ ಸೇಲ್‌ಗೆ ರೇಡಿ!

ತಾನು ಸ್ವಾಮಿಯಾಗಿದ್ದೆ ಮಠದ ಪ್ರಾಪರ್ಟಿಗಳನ್ನು ಮಾರಲು ಎಂಬಂತೆ ವರ್ತಿಸುತ್ತಿರುವ ಗುರುಸಿದ್ಧ ಸ್ವಾಮಿ ಈಗಾಗಲೇ ಎರಡು ಸಲ ಬೇರೆ ಬೇರೆ ಆಸ್ತಿಗಳನ್ನ ಪರಭಾರೆ ಮಾಡಿ ಸುದ್ದಿ ಮಾಡಿದ್ದಾನೆ. ಆದರೂ ಈಗ ಮತ್ತೊಂದು ಆಸ್ತಿಯನ್ನ ಪರಭಾರೆ ಮಾಡಲು ತಯಾರಿ ನಡೆಸಿದ್ದಾನೆ ಎಂಬ ಸುದ್ದಿ ಕೂಡಾ ಈಗ ಹೊರಬಿದ್ದಿದೆ.

ಬೆಳಗಾಂವ ಜಿಲ್ಲೆಯ ಸೌದತ್ತಿ ತಾಲೂಕಿನ ಮುನವಳ್ಳಿ-ಸಿಂಧೋಗಿ ಮಠಕ್ಕೆ ಸೇರಿದ ಬರೋಬ್ಬರಿ 42 ಎಕರೆ ಫಲವತ್ತಾದ ಜಮೀನು ಇದೆ. ಈ ಜಮೀನನ್ನು ಮಾರುವುದಾಗಿ ಹೇಳಿ ಗುರುಸಿದ್ಧ ವ್ಯವಹಾರ ವನ್ನು ಕುದುರಿಸಿದ್ದಾನೆ. ಕಳ್ಳ ಅಕ್ಕಿ ಸಾಗಾಣಿಕೆಯ ಹುಬ್ಬಳ್ಳಿಯ ಹರ್ಲಾಪುರ ಮಂಜು ಎಂಬುವರಿಂದ ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಈಗಾಗಲೇ 15 ಲಕ್ಷ ರೂಪಾಯಿಗಳನ್ನು ಗುರುಸಿದ್ಧ ಅಡ್ವಾನ್ಸ್ ಆಗಿ ಪಡೆದಿದ್ದಾನೆ. ಮಾರಾಟಕ್ಕೆ ಬಹುತೇಕ ಎಲ್ಲ ಸಿದ್ದತೆಗಳು ಪೂರ್ಣಗೊಂಡಿವೆ. ಆದರೆ ಮಾರಾಟದ ವಾಸನೆ ಹೊರಗಡೆಯ ಜನರ ಮೂಗಿಗೆ ಬಡಿದಿದ್ದರಿಂದ ಸದ್ಯಕ್ಕೆ ಮಠದ ಕೋಣೆ ಸೇರಿರುವ ಗುರುಸಿದ್ಧ ಆದ್ಯಾವಾಗ ಹೊರಬಂದು ನೋಂದಣಿ ಇಲಾಖೆಗೆ ಹೋಗಿ ಸಹಿ ಜಡಿದು ಬರುತ್ತಾನೋ ಗೊತ್ತಿಲ್ಲ.

ಅಸಲಿಗೆ ಈ 42 ಎಕರೆ ಜಮೀನನ್ನ ಖರೀದಿಸಲು ಹೊರಟಿರುವ ಅಕ್ಕಿ ಕಳ್ಳ ಹರ್ಲಾಪುರ ಮಂಜು ಹುಬ್ಬಳ್ಳಿಯ ನಾರ್ಥ್ ಟ್ರಾಫಿಕ್ ಇನ್ಸ್‌ಪೆಕ್ಟರ್ ಸಂದಿಗವಾಡನ ವಸೂಲಿ ಮನುಷ್ಯ. ಸಂದಿಗವಾಡನ ನಾಲ್ಕು ಪೆಟ್ರೋಲ್ ಬಂಕುಗಳು, ತೋಟ ಇತ್ಯಾದಿಗಳನ್ನು ನೋಡಿಕೊಳ್ಳುವುದಲ್ಲದೆ ಆತನ ಪರವಾಗಿ ಎಲ್ಲ ಮೂಲಗಳಿಂದ ಮಾಮೂಲಿಯನ್ನು ವಸೂಲಿ ಮಾಡುವವನೇ ಈ ಹರ್ಲಾಪುರ. ಸದ್ಯ ಆಸ್ತಿ ಖರೀದಿಯಲ್ಲಿ ಹರ್ಲಾಪುರ ಮಂಜುನ ಹೆಸರು ಕೇಳಿಬಂದಿದೆಯಾದರೂ ಸಂದಿಗವಾಡನೆ ಮಾಲೀಕನಾಗುವುದು ಗೌಪ್ಯವೇನಲ್ಲ. ಇತ್ತೀಚೆಗೆ ನಡೆದ ಹುಬ್ಬಳ್ಳಿಯ ಗ್ಯಾಂಗ್‌ವಾರ್‌ನಲ್ಲಿ ಮಾರಕಾಸ್ತ್ರಗಳೊಂದಿಗೆ ಸಿಕ್ಕಿ ಬಿದ್ದ ವಾಹನ ಇದೇ ಹರ್ಲಾಪುರ ಮಂಜುವಿನದ್ದು ಅಂತಲೂ ಈಗ ಪುಕಾರೆದ್ದಿದೆ.


ಪ್ರತಿಷ್ಠಿತ ಮಠವೆನಿಸಿಕೊಂಡಿರುವ ಮೂರು ಸಾವಿರ ಮಠಕ್ಕೆ ಜಗದ್ಗುರು ಆಗಿ ಇಡೀ ಉತ್ತರ ಕರ್ನಾಟಕದ ಧಾರ್ಮಿಕ ಕ್ಷೇತ್ರಕ್ಕೆ ಮಾರ್ಗದರ್ಶಕನಾಗಬೇಕಿದ್ದ ಗುರುಸಿದ್ಧ ಮಠದ ಆಸ್ತಿಗಳನ್ನ ಮೂರು ಕಾಸಿಗೆ ಮಾರಿ ಮಜಾ ಉಡಾಯಿಸುತ್ತಿದ್ದಾನೆ. ಸ್ವಾಮಿಯ ರಾತ್ರಿ ಪುರಾಣಗಳ ಬಗ್ಗೆ ಹೇಳಿ ಇಲ್ಲಿಯ ಜನ ರೋಸಿಹೋಗುತ್ತಿದ್ದಾರೆ. ಮುಂದೊಂದು ದಿನ ಭಕ್ತರೇ ಮಠಕ್ಕೆ ನುಗ್ಗಿ ಸ್ವಾಮಿಯನ್ನ ಅಟ್ಟಾಡಿಸುವ ಮುನ್ನ "ಪವರ್‌ಲೆಸ್" ಕಮಿಟಿಯವರು ಹೈ ಪವರ್ ಆದರೆ ಮೂರು ಸಾವಿರ ಮಠದ ಮಾನ ಉಳಿದೀತು.



ಉದಾಸಿ




ಹೊರಟ್ಟಿ



ಸಂಕೇಶ್ವರ



ಮುನವಳ್ಳಿ



ಬೊಮ್ಮಾಯಿ

• ಹುರುಳಿಕುಪ್ಪಿ ವಿನಯ
vinaylankesh@gmail.com

ಪಲ್ಲಂಗ ಸ್ವಾಮಿಗೆ ಪೊಲಿಟಿಕಲ್ ಪ್ರೇಯಸಿಯರು

ಸ್ವಾಮಿಯ ಶ್ವಾಸ ಪ್ರೇಯಸಿಯರಿಗಾಗಿ ಸದಾ ಮಿಡಿಯುತ್ತಿರುತ್ತದೆ. ಪೊಲಿಟಿಕಲ್ ಪ್ರೇಯಸಿಯರಂತೂ ಗುರುಸಿದ್ಧನಿಗೆ ನಿತ್ಯ ಪೂಜೆ, ನೈವೇದ್ಯ ನೀಡುತ್ತಾರೆ. ಗುರುಸಿದ್ಧನ ಇಂತಹ ಕರ್ಮಕಾಂಡದ ಬಗ್ಗೆ 'ಲಂಕೇಶ್' ಈ ಹಿಂದೆ ಕೂಡಾ ಬರೆದಿತ್ತು. ಹಾನಗಲ್ಲಿನ ಮಠದಲ್ಲಿ ಈತನ ಸೇವೆಗೈಯ್ಯುವ ಸಂಗೀತ ಶಿಕ್ಷಕಿ, ಧಾರವಾಡದವಲ್ಲಿರುವ ಇಬ್ಬರು ನಿತ್ಯ ಸೇವಕಿಯರದ್ದು ಹಳೇ ವಿಚಾರ. ಆದರೀಗ ಕಳ್ಳ ಸಿದ್ಧನಿಗೆ ಪೊಲಿಟಿಕಲ್ ಪ್ರೇಯಸಿಯರೂ ಇದ್ದಾರೆಂಬ ಹೊಸ ಪುರಾಣ ಮಠದ ಪಲ್ಲಂಗದಿಂದ ಹೊರಬಿದ್ದಿದೆ.

ಗಂಡನ ಸಾವಿನ ನಂತರ ರಾಜಕೀಯ ರಂಗಕ್ಕೆ ಧುಮುಕಿ, ಗುರುಸಿದ್ಧ ಹಾಕಿದ ಬಂಡವಾಳದ ಶಕ್ತಿಯಿಂದ ಜಿಲ್ಲಾ ಪಂಚಾಯತಿ ರಾಜಕಾರಣದಲ್ಲಿ ಸಕ್ರಿಯಳಾಗಿರುವ ಒಬ್ಬಳು ಇಂದಿಗೂ ಈ ಕಳ್ಳ ಸ್ವಾಮಿಯ ಸೇವೆಯನ್ನ ನಿಷ್ಠೆಯಿಂದ ಮುಂದುವರೆಸಿದ್ದಾಳೆ. ಸ್ವಾಮಿಯ ಬಹುತೇಕ ಬೇಡಿಕೆಗಳನ್ನು ಈಡೇರಿಸಿ, ಆತನ ಆಶೀರ್ವಾದ ಪಡೆದು ಕೃತಾರ್ಥಳಾಗಿ ಈಗ ಆತನೊಂದಿಗೆ ಪಲ್ಲಂಗದ ಜೀವನ ಕಳೆಯುತ್ತಿದ್ದಾಳೆ ಎಂಬ ರೋಚಕ ಸುದ್ದಿ ಈಗ ಹುಬ್ಬಳ್ಳಿಯಾದ್ಯಂತ ಹರಡಿದೆ.

ದೆಹಲಿಯ ಆತ್ಮ ಹಳೆ ದೆಹಲಿಯಲ್ಲಿದೆ. ಇಲ್ಲಿನ ಗಲ್ಲಿಗಲ್ಲಿಗಳು, ಹಳೆಯ ಕಟ್ಟಡಗಳು, ಕೋಟೆ, ಕೊತ್ತಲಗಳು, ಅಂಗಡಿ, ಮುಂಗಟ್ಟುಗಳು ಗತಕಾಲಕ್ಕೆ ನಮ್ಮನ್ನು ಮರಳಿ ಒಯ್ಯುತ್ತವೆ. ಅಲ್ಲೆಲ್ಲ ಸುತ್ತಾಡಿ ಕನ್ನಡಿಗರಾದ, ಈಗ ಸಿಎನ್‌ಎನ್–ಐಬಿಎನ್ ಸುದ್ದಿ ವಾಹಿನಿಯಲ್ಲಿ ಸುದ್ದಿ ಸಂಪಾದಕರಾಗಿ ಕೆಲಸ ನಿರ್ವಹಿಸುತ್ತಿರುವ ಡಿ.ಪಿ. ಸತೀಶ್ ಬರೆದಿರುವ ಲೇಖನ ಇಲ್ಲಿದೆ.

ಹಳೆ ದೆಹಲಿಯಲ್ಲಿ ಅಲೆದಾಟ

ವಿಶೇಷ ಲೇಖನ

• ಡಿ.ಪಿ. ಸತೀಶ್

ಬೆಳಗ್ಗೆ ಎದ್ದಾಗ ಏಳು ಗಂಟೆ. ನನ್ನ ಫ್ಲಾಟ್‌ನ ಬಾಲ್ಕನಿಗೆ ಹೋದಾಗ ಎಲ್ಲೆಲ್ಲೂ ಮಬ್ಬು ಕವಿದಿತ್ತು, ಸೂರ್ಯನ ಸುಳಿವಿಲ್ಲ. ಮನೆಯಿಂದ ಕೇವಲ ಒಂದೇ ಕಿಲೋ ಮೀಟರ್ ದೂರದಲ್ಲಿ ಹರಿಯುವ ಯಮುನಾ ನದಿಯತ್ತ ಕಣ್ಣಾಡಿಸಿದೆ. ದೆಹಲಿಯ ಶತಮಾನದ ಮಳೆಯಲ್ಲಿ ಕೇವಲ ತಿಂಗಳ ಹಿಂದೆ ಮನೆ ಹತ್ತಿರದ ರಸ್ತೆ ತನಕ ಬಂದಿದ್ದ ನೀರು ಬಹುತೇಕ ಇಳಿದರೂ, ನದಿಯ ನೀರಿನಲ್ಲಿ ಸೆಳೆತ ಇದ್ದೇ ಇತ್ತು. ಇನ್ನೇನು ಚಳಿಗಾಲ ಬಂತಲ್ಲ, ಹಿಮಾಲಯದಲ್ಲಿ ಹಿಮ ಸುರಿದಾಗ ನದಿ ನೀರು ಪಾತಾಳ ಸೇರುತ್ತದೆ ಎಂದು ಮನಸ್ಸಲ್ಲೇ ಅಂದುಕೊಂಡೆ.

ಈ ವರ್ಷ ಚಳಿಗಾಲ ಬೇಗ ಬಂದಂತಿದೆ ಎನ್ನುತ್ತಾ ಬಿಸಿಬಿಸಿ ಕಾಫಿಯ ಮಗ್ ಎತ್ತಿಕೊಂಡೆ. ಎಷ್ಟು ಬೇಗ ಕಾಲ ಸರಿಯುತ್ತದೆ. ದೆಹಲಿಗೆ ನಾನು ಕಾಲಿಟ್ಟ ಹತ್ತನೇ ವರ್ಷವಿದು. ಬಂದಾಗ ನಾಲ್ಕಕ್ಷರ ಹಿಂದಿಯೂ ಬಾರದ ನನಗೀಗ, ಪಂಜಾಬಿ, ಉರ್ದು ಭಾಷೆಗಳೂ ಪರಕೀಯವಲ್ಲ, ದೆಹಲಿಯ ಇಂಚಿಂಚೂ ನನಗೆ ನನ್ನೂರಿನಷ್ಟೇ ಪರಿಚಿತ. ದೆಹಲಿಯಲ್ಲೇ ಹುಟ್ಟಿ ಬೆಳೆದ ಕೆಲವರು ನನ್ನ ಬಳಿಯೇ ಇಲ್ಲಿನ ಜಾಗಗಳ ವಿಳಾಸ ಕೇಳುವುದರಿಂದ, ನನಗೋ ದಿಲ್ಲಿವಾಲಾನಾದ ಸಂತಸ.

ಭಾನುವಾರವಾದ್ದರಿಂದ 10-12 ಇಂಗ್ಲಿಷ್ ದಿನಪತ್ರಿಕೆಗಳನ್ನು ಓದಿ, ಒಂದಿಷ್ಟು ಹೊತ್ತು ಟೀವಿ ನೋಡಿ ಹಳೆ ದೆಹಲಿಯತ್ತ ಹೊರಟೆ. ನಾನು ದೆಹಲಿಗೆ ಬಂದಾಗಿನಿಂದ ಪ್ರತಿ ಭಾನುವಾರ ಇಲ್ಲಿಗೆ ಹೋಗಿ ಅಡ್ಡಾಡುವುದನ್ನು ತಪ್ಪಿಸಿಕೊಳ್ಳುವುದಿಲ್ಲ, ಐದಾರು ಶತಮಾನದ ಹಳೆಯದಾದ ಪುರಾನೀ ದಿಲ್ಲಿ ಮತ್ತು ಈ ಡಿಸೆಂಬರ್‌ನಲ್ಲಿ ಶತಕ ಬಾರಿಸುವ ಹೊಸ ದಿಲ್ಲಿಗಳೆರಡೂ ನನಗೆ ಪ್ರಿಯವಾದ ತಾಣಗಳು.

ದೆಹಲಿಯ ಆತ್ಮ ಹಳೆ ದೆಹಲಿಯಲ್ಲಿದೆ. ಇಲ್ಲಿನ ಗಲ್ಲಿಗಲ್ಲಿಗಳೂ, ಹಳೆಯ ಕಟ್ಟಡಗಳು, ಕೋಟೆ, ಕೊತ್ತಲಗಳು, ಅಂಗಡಿ, ಮುಂಗಟ್ಟುಗಳು ಗತಕಾಲಕ್ಕೆ ನಮ್ಮನ್ನು ಮರಳಿ ಒಯ್ಯುತ್ತವೆ. ಯಾರು ಏನೇ ಹೇಳಲಿ. ಕಾಮನ್‌ವೆಲ್ತ್ ಗೇಮ್ಸ್‌ನಿಂದ ದೆಹಲಿಯ ರಸ್ತೆ ಸೇತುವೆಗಳಿಗಂತೂ ತುಂಬಾ ಪ್ರಯೋಜನವಾಗಿದೆ. ಕೇವಲ ಹತ್ತು ವರ್ಷದ ಹಿಂದೆ ಕಿಷ್ಕಿಂಧೆಯಂತಿದ್ದ ಜಾಗಗಳೂ ಈಗ ಥಳ ಥಳ ಹೊಳೆಯುತ್ತಾ ವಿಶಾಲವಾಗಿವೆ. ನಾನು ಬಂದಾಗ ದೆಹಲಿಯನ್ನು ಪೂರ್ವ – ಪಶ್ಚಿಮವಾಗಿ ಇಬ್ಭಾಗಿಸಿ ಸುಮಾರು 40 ಕಿಲೋ ಮೀಟರ್ ಈ ಮಹಾ ನಗರದೊಳಗೆ ಹರಿಯುವ ಯಮುನಾ ನದಿಗಿದ್ದದ್ದು ಕೇವಲ ನಾಲ್ಕು ಸೇತುವೆಗಳು. ಅದೀಗ 9ಕ್ಕೆ ಏರಿದೆ.

ನಾನು ಪ್ರತಿ ಭಾನುವಾರ ಹೋಗುವುದು ಹಳೆ ದೆಹಲಿಯ ದರಿಯಾ ಗಂಜ್‌ನ ಹಳೆ ಪುಸ್ತಕ ಮಾರುಕಟ್ಟೆಗೆ. ದೆಹಲಿ ಗೇಟ್‌ನಿಂದ ಜಾಮಾ ಮಸೀದಿಯ ತನಕ ಸುಮಾರು ಮೂರು ಕಿಲೋ ಮೀಟರ್ ದೂರ ಪ್ರತೀ ಭಾನುವಾರ ಮುಚ್ಚಿದ ಅಂಗಡಿ, ಕಚೇರಿಗಳ ಎದುರು ನೂರಾರು ಪುಸ್ತಕ ವ್ಯಾಪಾರಿಗಳು ಹಳೇ ಪುಸ್ತಕದ ರಾಶಿ ಹಾಕಿ ಮಾರುತ್ತಾರೆ. ನನಗೆ ಇಲ್ಲಿ ಸಿಗದ ಪುಸ್ತಕವೇ ಇಲ್ಲ. ಇಲ್ಲಿಗೆ ಬರುವ ತರಹೇವಾರಿ ಜನರನ್ನು ನೋಡುವುದು, ಅವರ ಪುಸ್ತಕಗಳ ಹುಡುಕಾಟ ಕಣ್ಣಲ್ಲಿ ತುಂಬಿಕೊಳ್ಳುವುದೇ ದಿವ್ಯಾನುಭವ.

ಇಲ್ಲಿಗೆ ಹೋದಾಗಲೆಲ್ಲಾ ರಾಶಿ ರಾಶಿ ಪುಸ್ತಕ ತಂದು ಮನೆಯಲ್ಲಿ ಸುರಿಯುತ್ತೇನೆ. ಕಳೆದ ಎರಡು ಮೂರು ವರ್ಷದಲ್ಲಿ ಮೊದಲಿನಂತೆ ಪುಸ್ತಕಗಳ ವ್ಯಾಪಾರದ ಭರಾಟೆ ಇಲ್ಲದಿರುವುದು ಗಮನಕ್ಕೆ ಬರುತ್ತಿದೆ. ಹದವಾದ ಹವೆಯಲ್ಲಿ ಸಣ್ಣ ಬಿಸಿಲಿನಲ್ಲಿ ಪುಸ್ತಕಗಳತ್ತ ಕಣ್ಣು ನೆಟ್ಟು ಜಾಮಾ ಮಸೀದಿಯಿಂದ ಪಹಾಡ್ ಗಂಜ್‌ನತ್ತ ಹೊರಟೆ. ಯಾಕೋ ಏನೋ ಯಾವುದೇ ಪುಸ್ತಕ ಕೊಳ್ಳುವ ಮನಸ್ಸಾಗಲಿಲ್ಲ. ಪುಸ್ತಕಗಳ ನಡುವೆ ಬಟ್ಟೆ ಮಾರುವ ಕೆಲವು ಅಂಗಡಿಗಳೂ ತಲೆ ಎತ್ತಿದ್ದವು.

ಗೋಲ್ಚಾ ಸಿನಿಮಾ ಥಿಯೇಟರ್ ಬಳಿ ಭಾರಿ ಜನ ಸಂತೆಯೇ ನೆರೆದಿತ್ತು. ಮಾಲ್, ಮಲ್ಟಿಪ್ಲೆಕ್ಸ್‌ಗಳ ಹಾವಳಿ ಇಲ್ಲದ ಏಕೈಕ ಜಾಗ ಹಳೆದೆಹಲಿ. ಈ ಗೋಲ್ಚಾ ಥಿಯೇಟರ್ ಸ್ವಾತಂತ್ರ್ಯ ಬರುವ ಹಿಂದಿನ ಕಾಲದ್ದು. ಇಂದಿಗೂ ಹಾಗೆಯೇ ಇದೆ. ಇತ್ತೀಚೆಗೆ ಬಿಡುಗಡೆಯಾದ 'ಗೋಲ್‌ಮಾಲ್' ಸಿನಿಮಾ ಹೌಸ್‌ಫುಲ್ ಆಗಿ ಓಡುತ್ತಿತ್ತು. ಎಷ್ಟೋ ವರ್ಷಗಳ ನಂತರ ಥಿಯೇಟರ್‌ನ ಬಾಗಿಲಿಗೆ ಸಿಕ್ಕಿಸಿದ್ದ ಹೌಸ್‌ಫುಲ್ ಬೋರ್ಡ್ ನೋಡಿ ಏನೋ ಒಂಥರಾ ಪುಳಕವಾಯಿತು.

ಥಿಯೇಟರ್ ಎದುರಿನ ಬೀಡಾ ಅಂಗಡಿ ಮಾಲೀಕ ಜಗ್ಗು ಎಂದೂ ಬದಲಾಗದಂತೆ ತಣ್ಣಗೆ ಕುಳಿತ್ತಿದ್ದ. ಬಹುಶಃ ಅವನು ಮೂವತ್ತು ವರ್ಷದ ಹಿಂದೆಯೂ ಹಾಗೆಯೇ ಕುಳಿತಿದ್ದಿರಬೇಕು.

ಅಮೆರಿಕಾ ಅಧ್ಯಕ್ಷ ಬರಾಕ್ ಒಬಾಮಾ ದೆಹಲಿಯಲ್ಲೇ ಇದ್ದಿದ್ದರಿಂದ ಪೊಲೀಸ್ ಕಟ್ಟೆಚ್ಚರ ಜಾಸ್ತಿಯಾಗಿತ್ತು, ಹಳೆ ದೆಹಲಿಯ ಬೀದಿಗಳ ಮೇಲೆ ಅವರು ಕಣ್ಣಿಟ್ಟು ಕಾಯುತ್ತಿದ್ದರು.

ಪುರಾತನ ದೆಹಲಿ ಗೇಟ್ ಬಳಿ ರಸ್ತೆ ಬದಿಯ ಚಹಾ ಅಂಗಡಿ ಎದುರು ಸೈಕಲ್ ರಿಕ್ಷಾದವರು, ಹಮಾಲರು, ಪೊಲೀಸರು, ಕ್ಷೌರಿಕರು, ರಸ್ತೆ ಬದಿ ವ್ಯಾಪಾರಿಗಳು ಮತ್ತು ಕೆಲವು ವಿದೇಶೀ ಪ್ರವಾಸಿಗರು ಚಳಿ ಕಾಯಿಸುತ್ತಾ ಚಹಾ ಹೀರುತ್ತಿದ್ದರು. ಅವರ ಲೋಕದಲ್ಲಿ ಒಬಾಮ, ಅಮೆರಿಕ, ಉದಾರೀಕರಣ ಮುಂತಾದವುಗಳಿಗೆ ಜಾಗವಿದ್ದಂತೆ ಕಾಣಲಿಲ್ಲ, ಅವರಲ್ಲಿ ಕೆಲವರು ಹಳೆ ದೆಹಲಿಯಲ್ಲಿ ಇನ್ನೂ ಗುಟ್ಟಾಗಿ ನಡೆಯುವ ಮುಜ್ರಾಗಳ ಬಗ್ಗೆ ಮಾತಾಡುತ್ತಿದ್ದರು. ಉಳಿದವರು ಇಲ್ಲಿನ ಜಗತ್ ಪ್ರಸಿದ್ಧ ಕರೀಮ್ ಹೋಟೆಲ್ ನಿಂದ ಇನ್ನೂ ಬಾರದ ಬಿರಿಯಾನಿಗೆ ಅಸಹನೆಯಿಂದ ಕಾಯುತ್ತಿದ್ದರು.

ಇನ್ನೂ ಸ್ವಲ್ಪ ದೂರ ಬಂದಾಗ ಓರಿಯೆಂಟಲ್ ಇನ್‌ಶೂರೆನ್ಸ್ ಕಟ್ಟಡದ ಎದುರಿನ ಸಂಡೇ ಬಜಾರ್ ಸತ್ವ ಕಳೆದುಕೊಂಡು ಪೇಲವವಾಗಿತ್ತು, ಮಾರುವವರು ಮತ್ತು ಕೊಳ್ಳುವವರಿಬ್ಬರೂ ಜಾಸ್ತಿ ಕಾಣಲಿಲ್ಲ. ಇಲ್ಲಿನ ಮತ್ತೊಂದು ಹಳೇ ಸಿನಿಮಾ ಥಿಯೇಟರ್ ಡಿಲೈಟ್ ಕೂಡಾ ಹೌಸ್‌ಫುಲ್ ಆಗಿತ್ತು. ಅದೇ ಗೋಲ್‌ಮಾಲ್ ಸಿನಿಮಾ ಭರ್ಜರಿ ಓಡುತ್ತಿತ್ತು. ವಿಶಾಲವಾದ ಈ ಕಟ್ಟಡ ಇಂದಿಗೂ ತನ್ನ ಆಕರ್ಷಣೆ ಕಳೆದುಕೊಂಡಿಲ್ಲ. ಇದೇ ಪ್ರದೇಶದಲ್ಲಿರುವ ದೆಹಲಿಯ ಮೂರು ಅತಿ ಪ್ರಸಿದ್ಧ ಸಿನಿಮಾ ಥಿಯೇಟರ್‌ಗಳು ಗೋಲ್ಚಾ, ಡಿಲೈಟ್ ಮತ್ತು ಶೀಲಾ.

ಈ ಮೂರಕ್ಕೂ ಜೀವನದಲ್ಲಿ ಒಮ್ಮೆಯೂ ಭೇಟಿ ನೀಡದ ಹಳೆಯ ಜನ ಇಡೀ ದೆಹಲಿಯಲ್ಲಿ ಎಲ್ಲೂ ಇಲ್ಲ. ಜಾಗಕ್ಕೆ ಬಂಗಾರದ ಬೆಲೆ ಬಂದರೂ, ಬಹುಪಾಲು ಜನ ಮಲ್ಟಿಪ್ಲೆಕ್ಸ್‌ಗಳತ್ತ ಮುಖ ಮಾಡಿದರೂ ಈ ಥಿಯೇಟರ್ ಮಾಲೀಕರು ಮಾತ್ರ ಅದರಾಸೆಗೆ ಹೋಗಿಲ್ಲ. ಸಿನಿಮಾ ಥಿಯೇಟರ್ ಕೆಡವಿ ಮಾಲ್ ಕಟ್ಟಿಲ್ಲ. ಹಳೆ ದೆಹಲಿಯ ಲ್ಯಾಂಡ್‌ಮಾರ್ಕ್‌ಗಳಾದ ಇವುಗಳನ್ನು ಓರಣವಾಗಿ ಇನ್ನೂ ನಡೆಸುತ್ತಿದ್ದಾರೆ. ಇತಿಹಾಸದ ತುಣುಕೊಂದು ಮಾಯವಾಗದಂತೆ ಜೋಪಾನ ಮಾಡಿದ್ದಾರೆ.



ಅದೇರೀತಿ ಇಲ್ಲಿಂದ ಮೂರು ಕಿಲೋಮೀಟರ್ ದೂರದ ಸದರ್ ಬಜಾರ್‌ನಲ್ಲಿರುವ ಫಿಲ್ಮಿಸ್ತಾನ್ ಕೂಡಾ ತನ್ನ ಹಳೆಯ ಚಾರ್ಮ್ ಉಳಿಸಿಕೊಂಡಿದೆ. ಹಳೆ ದೆಹಲಿಯ ಜನ ಕೈಬಿಡುವತನಕ ಈ ಸಿನಿಮಾ ಥಿಯೇಟರ್‌ಗಳು ಹೀಗೆಯೇ ಉಳಿಯಬಹುದು.


* * * * * *

ದೆಹಲಿಗೆ ಸಿನಿಮಾ ಪ್ರವೇಶಿಸಿದ್ದು ಸ್ವಲ್ಪ ತಡವಾಗಿ. ಮುಂಬಯಿ, ಬೆಂಗಳೂರಿಗೆಲ್ಲಾ ಸಿನಿಮಾ ಮಂದಿರ ಬಂದ ಕೆಲ ವರ್ಷಗಳ ನಂತರ ದೆಹಲಿಗೂ ಸಿನಿಮಾಮಂದಿರಗಳ ಸಾಲುಸಾಲು ಪ್ರವೇಶವಾಯ್ತು. ಸ್ವಾತಂತ್ರ್ಯ ಬಂದ ದಿನಗಳಲ್ಲಿ ದೆಹಲಿಯೆಂದರೆ ಕೇವಲ ಹಳೆ ದೆಹಲಿ, ಕರೋಲ್ ಭಾಗ್ ಮತ್ತು ಲುಟ್ಯೆನ್ ಕಟ್ಟಿದ ಭವ್ಯ ರಾಜಧಾನಿ ನವದೆಹಲಿ ಮಾತ್ರ. ಈಗಿನ ಪ್ರಗತಿ ಮೈದಾನ್ ಪೂರ್ವದಲ್ಲಿ, ನಿಜಾಮುದ್ದೀನ್ ದರ್ಗಾ ಮತ್ತು ಸಫ್ದರ್ ಜಂಗ್ ದಕ್ಷಿಣದಲ್ಲಿ ದೆಹಲಿಯ ಗಡಿಗಳು. ಸಿನಿಮಾ ನೋಡಲು, ವ್ಯಾಪಾರ, ವ್ಯವಹಾರ ಮಾಡಲು ಜನ ಹೋಗುತ್ತಿದ್ದುದು ಹಳೆ ದೆಹಲಿ ಅಥವಾ ಕನಾಟ್ ಪ್ಲೇಸ್‌ಗೆ.




ಒಂದು ಕಾಲದಲ್ಲಿ ಇಡೀ ದೆಹಲಿಯಲ್ಲೇ ಅತ್ಯಂತ ಎತ್ತರದ ಕಟ್ಟಡ ಎನ್ನುವ ಖ್ಯಾತಿ ಡಿಲೈಟ್ ಸಿನಿಮಾ ಥಿಯೇಟರ್‌ನದ್ದು. ಇಲ್ಲಿಗೆ ಜವಾಹರ್‌ಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಜಯಪ್ರಕಾಶ್ ನಾರಾಯಣ್, ವಾಜಪೇಯಿ, ನೂತನ್, ರಾಜ್ ಕಪೂರ್ ಕೂಡಾ ಸಿನಿಮಾ ನೋಡಲು ಬರುತ್ತಿದ್ದರಂತೆ. ಈಗ ದೆಹಲಿಯ ಬಹುಪಾಲು ಜನರಿಗೆ ಡಿಲೈಟ್ ಎಂದರೆ ಎಲ್ಲಿದೆ ಎಂದೂ ಗೊತ್ತಿಲ್ಲ. ಶೀಲಾ ಥಿಯೇಟರ್ ಬಾಗಿಲು ಹಾಕುತ್ತಾರೆ ಎನ್ನುವ ವದಂತಿ ಬಹಳ ದಿನಗಳಿಂದ ಇದೆ. ಹಾಗಾದರೆ ಪಹಾಡ್ ಗಂಜ್‌ನ ಹಳೆಯ ಇತಿಹಾಸದ ಸಾಕ್ಷಿಯೊಂದು ಗತಕಾಲ ಸೇರುತ್ತದೆ.

ಮೊಗಲರ ಕಾಲದ ಹಳೆದೆಹಲಿ ಮತ್ತು ಶೇಕಡಾ ನೂರರಷ್ಟು ಬ್ರಿಟಿಷ್ ಕಾಲದ ಹೊಸ ದೆಹಲಿ ನಡುವೆ ಇರುವುದು ನವ ದೆಹಲಿ ರೈಲು ನಿಲ್ದಾಣ, ಪಂಚ್ ಕುಯಿನ್ ರಸ್ತೆ ಮತ್ತು ಮಿಂಟೋ ಬ್ರಿಡ್ಜ್. ಇಲ್ಲಿನ ಭವ್ಯ ಕನಾಟ್ ಪ್ಲೇಸ್‌ನಲ್ಲಿ ಆ ಕಾಲದ ನಾಲ್ಕು ಸಿನಿಮಾ ಥಿಯೇಟರ್‌ಗಳು ಇನ್ನೂ ಇವೆ. ನಾನು ದೆಹಲಿಗೆ ಬಂದಾಗ ಹಳೆಯ ಆಕಾರದಲ್ಲೇ ಇದ್ದ ಔಟರ್ ಸರ್ಕಲ್‌ನ ರಿವೋಲಿ ಚಿತ್ರಮಂದಿರ ಈಗ ರಿವೋಲಿ ಪಿವಿಆರ್ ಆಗಿದೆ. ಒಳಭಾಗದ ಪ್ಲಾಜಾ ಈಗ ಪಿವಿಆರ್ ಪ್ಲಾಜಾ ಮತ್ತು ಓಡಿಯನ್ ಈಗ ಬಿಗ್ ಸಿನಿಮಾ ಆಗಿದೆ. ಆದರೆ ರೀಗಲ್ ಮಾತ್ರ ಹಾಗೆಯೇ ಇದೆ.



ಜಿಲೇಬಿ ಮತ್ತು ಗುಲಾಬ್ ಜಾಮೂನ್‌ಗಳು ದೆಹಲಿ ಜನರ ಅತ್ಯಂತ ಪ್ರೀತಿ ಪಾ... ಸಿಹಿತಿಂಡಿಗಳು. ಬೆಳಗ್ಗೆ ಆರು... ಇವುಗಳ ಸಮಾರಾಧನೆ ... ಆರಂಭವಾಗುತ್ತದೆ. ... ದೆಹಲಿಯಲ್ಲಿರುವಷ್ಟು ... ಕಾಲದ ಜಾಮೂನ್ ವ... ಜಿಲೇಬಿ ಅಂಗಡಿಗಳು ಮತ್ತೆಲ್ಲೂ ಇಲ್ಲ. ಚಾಂದಿನಿ ಚೌ... ಶೀಶ್ ಗಂಜ್ ಗುರುದ್ವಾರದ ಹತ್ತಿರ ಇರುವ ... ಫೇಮಸ್ ಜಲೇಬಿವಾಲಾ ಅಂಗಡಿಗೆ ಸುಮಾರು ಮೂ... ನೂರು ವರ್ಷ. ಷಹಜಹಾನ್ ಕಾಲದಿಂದ ಇಲ್ಲಿ...



ಜಿಲೇಬಿ ಮಾಡುತ್ತಿದ್ದೇವೆ ಎಂದು ಅಂಗಡಿಯ ಈಗಿ... ಮಾಲೀಕ ಹೇಳುತ್ತಾರೆ. ಈ ಅಂಗಡಿಯ ಜಿಲೇ... ಮಾಡುತ್ತಿದ್ದಂತೆಯೇ ಖಾಲಿಯಾಗುತ್ತದೆ. ದೂರ ದೂರದಿ... ಜಿಲೇಬಿಗಾಗಿ ಜನ ಇಲ್ಲಿಗೆ ಬರುತ್ತಾರೆ. ಮಹಾತ್ಮಾ ಗಾಂ... ಕೂಡಾ ಇಲ್ಲಿಯ ಜಿಲೇಬಿ ತಿನ್ನುತ್ತಿದ್ದರಂತೆ. ಇಳಿಸಂಜೆಯ... ಇಲ್ಲಿ ಜಿಲೇಬಿಯ ವ್ಯಾಪಾರದ ಭರಾಟೆ ಜೋರಾಗುತ್ತ... ಜನ ಕ್ಯೂ ನಿಂತು ಜಿಲೇಬಿ ಕೊಳ್ಳುತ್ತಾರೆ.

ಇಲ್ಲಿಂದ ಒಂದು ಕಿಲೋಮೀಟರ್ ದೂರದ ಚಾವಡಿ ಬಜಾರ್‌ನಲ್ಲಿರುವ ಸಸ್ಯಾಹಾರಿ ಹೋಟೆಲ್‌ನ ಹೆಸರೇ ಶಾಖಾಹಾರಿ. ಇದು ... ಶತಮಾನ ಹಳೆಯದು. ಜಾಮಾ ಮಸೀದಿ ಹತ್ತಿರ ಇರುವ ಕರೀಮ್ಸ್ ಹೋಟೆ... ದೆಹಲಿಯ ಪ್ರಪಂಚ ಪ್ರಸಿದ್ಧ ... ಹೋಟೆಲ್. ಇಲ್ಲಿನ ಬಿರಿಯಾನಿ, ರೋಟಿ, ಚಿಕನ್ ಮುಂತಾದವುಗಳು ಜಗದ್ವಿಖ್ಯಾತ. ಇದನ್ನು ಹುಡುಕಿಕೊಂಡು ದೂರದೂರದಿಂದ ಪ್ರವಾಸಿಗರು, ಸ್ಥಳೀಯರು ಬರುತ್ತಾರೆ. ಕರೀಮ್ಸ್ ಹೋಟೆಲ್‌ನ ಪೂರ್ವಜರು ಮೊಗಲರ ಅಡುಗೆಯವರಾಗಿದ್ದರಂತೆ. ಮೊಗಲರ ಅವಸಾನದ ನಂತರ ಕಳೆದ ಶತಮಾನದ ಆರಂಭದಲ್ಲಿ ಸಣ್ಣದಾಗಿ ಆರಂಭಿಸಿದ ಹೋಟೆಲ್ ಈಗ ಬೃಹದಾಕಾರವಾಗಿ ಬೆಳೆದಿದೆ. ಕರೀಮ್ಸ್‌ನಿಂದ ಮೇಲಕ್ಕೆ ಹೋದರೆ ಸುಮಾರು ಒಂದು ಕಿಲೋ ಮೀಟರ್ ದೂರದ ರಸ್ತೆಯಲ್ಲಿ ಎರಡೂ ಕಡೆ ಆಹ್ವಾನ ಪತ್ರಿಕೆಗಳನ್ನು ತಯಾರು ಮಾಡುವ ಅಂಗಡಿಗಳಿವೆ. ಇಡೀ ದೇಶ... ಅತಿ ದೊಡ್ಡ ಆಹ್ವಾನ ಪತ್ರಿಕೆಗಳ ಮಾರುಕಟ್ಟೆಯಿದು. ಈ ರಸ್ತೆಯ ಆರಂಭದಲ್ಲಿ ಕಿವಿಯ ಗುಗ್ಗೆ ತೆಗೆಯುವ ಜನ ಕೆಂಪು ಟೋಪಿ ಧರಿಸಿ ಇನ್ನೂ... ಗಿರಾಕಿಗಳಿಗಾಗಿ






...ತ್ತಿರುತ್ತಾರೆ. ಈ ಪ್ರದೇಶದ ಕೆಲವು ರಸ್ತೆ ಪಕ್ಕದ ...ು ಗಿರಾಕಿಗಳನ್ನು ಆಕರ್ಷಿಸಲು ತಮ್ಮ ...ು ಮೊಗಲರ ಕ್ಷೌರಿಕರಾಗಿದ್ದರು ಎಂದು ಪುಂಗಿ ...ುತ್ತಾರೆ.

...ಮ್ಮಲ್ಲಿ ಊರಿಗೆ ಬಂದವರು ನೀರಿಗೆ ಬರದಿರು ...ೀ ಎನ್ನುವ ಗಾದೆ ಇದೆಯಲ್ಲ, ಹಾಗೆಯೇ ...ದಲ್ಲಿ ಮದುವೆಯ ಸಮಯ ಬಂದಾಗ ದೆಹಲಿಯ ಚಾಂದಿನಿ ಚೌಕಕ್ಕೆ ಬರಲೇಬೇಕು ಎನ್ನುವ ಗಾದೆ ...ಮದುವೆ ಬಟ್ಟೆ ಮಾರುವ ನೂರಾರು ಪುರಾತನ ...ಗಳು ಇಲ್ಲಿವೆ. ವಧುವಿನ ಲೆಹಂಗಾ ಕೊಳ್ಳಲು ...ಕ ಎಲ್ಲರೂ ಇಲ್ಲಿಗೆ ಬಂದೇಬರುತ್ತಾರೆ. ಇಲ್ಲಿನ ...ಂಗಡಿಗಳ ಬಗ್ಗೆ ನೂರಾರು ಪುಟ ಬರೆಯಬಹುದು.

...ಂದಿನಿ ಚೌಕದಿಂದ ಒಂದು ಕಿಲೋ ಮೀಟರ್ ಹಳೆ ದೆಹಲಿ ರೈಲು ನಿಲ್ದಾಣ ಸುಂದರವಾದ ಕಟ್ಟಡ. 1864 ರಲ್ಲಿ ಕಟ್ಟದ ಇದು ಇಂದಿಗೂ ...ಂದರ್ಯ, ಪ್ರಾಮುಖ್ಯತೆ ಉಳಿಸಿಕೊಂಡಿದೆ. ಇದು ಅತಿ ದೊಡ್ಡ ಮತ್ತು ಬ್ಯುಸಿಯಾದ ರೈಲು ...ಗಳಲ್ಲಿ ಒಂದು. ಜಮ್ಮು, ಪಂಜಾಬ್, ಹಿಮಾಚಲ ಉತ್ತರಾಖಾಂಡ್, ಉತ್ತರ ಪ್ರದೇಶ ಮುಂತಾದ ...ಗೆ ಹೋಗುವ ರೈಲುಗಳು ಇಲ್ಲಿಂದಲೇ ಹೊರಡು ...ಪಾಕಿಸ್ತಾನಕ್ಕೆ ಹೋಗುವ ಸಂಜೋತಾ ಎಕ್ಸ್‌ಪ್ರೆಸ್ ...ಕೂಡಾ ಇಲ್ಲಿಂದಲೇ ಹೊರಡುವುದು. 2001ರ ...ರ್ 13ರ ಸಂಸತ್ ಕಟ್ಟಡದ ಮೇಲೆ ಭಯೋತ್ಪಾದಕ ...ನಂತರ ಈ ರೈಲಿನ ಸಂಚಾರ ಕೆಲ ವರ್ಷ ರದ್ದಾಗಿತ್ತು. ...ರೈಲಿನ ಕೊನೆಯ ಪ್ರಯಾಣ ವರದಿ ಮಾಡಲು ...ರ ಡಿಸೆಂಬರ್‌ನ ಕೊರೆಯುವ ಚಳಿಯಲ್ಲಿ ನಾನು ...ಹನ್ನೊಂದರ ಸುಮಾರಿಗೆ ಇಲ್ಲಿಯೇ ಇದ್ದೆ. ಆ ರಾತ್ರಿ ...ಬಂಧು, ಬಾಂಧವರನ್ನು ಬೀಳ್ಕೊಡಲು ಬಂದ ಜನ ...ುತ್ತಿದ್ದ ದೃಶ್ಯ ನನ್ನನ್ನು ಇಂದಿಗೂ ಕಾಡುತ್ತಿದೆ. ದೇಶ ...ಯಾದಾಗ ಈ ಜನ ಅದೆಂತಹಾ ಸಂಕಟ ...ಸಿರಬಹುದು?

...ಸು ಈ ಕಡೆ ಬಂದಾಗಲೆಲ್ಲಾ ರೈಲು ನಿಲ್ದಾಣ ...ಸ್ವಲ್ಪ ಹೊತ್ತು ಜನರ ಜೊತೆ ಬೆರೆತು ವಾಪಸಾಗುತ್ತೇನೆ. ಮುಂದೆ ಕಾಶ್ಮೀರಿ ಗೇಟ್ ದಾಟಿದ ನಂತರ ...ಲೈನ್ಸ್‌ನಲ್ಲಿರುವ ಒಬೆರಾಯ್ ಮೈಡನ್ಸ್ ದೆಹಲಿಯ ...ಮೊದಲ ಪಂಚತಾರಾ ಹೊಟೆಲ್. 1903 ರಲ್ಲಿ ...ಈ ಭವ್ಯ ಹೊಟೇಲ್ ಇಂದಿಗೂ ತನ್ನ ಗಾಂಭೀರ್ಯ, ...ರ್ಯ ಉಳಿಸಿಕೊಂಡಿದೆ. ಚಳಿಗಾಲದಲ್ಲಿ ಇದರ ...ಿ ಕನಿಷ್ಠ ಐದು ನೂರು ವರ್ಷ ಹಳೆಯದಾದ ...ರದ ಹತ್ತಿರ ಕುಳಿತು ಚಹಾ, ಕಾಫಿ ಹೀರುವುದು ...ಮೆಚ್ಚಿನ ಕೆಲಸಗಳಲ್ಲೊಂದು. ಪ್ರತಿ ವರ್ಷ ನಾನು ...ಕ್ಕಾಗಿ ಎದುರು ನೋಡುತ್ತಿರುತ್ತೇನೆ. ಇದರ ಎದು ...ಲ್ಲೀ ಕ್ಯಾಸಲ್, ಪಕ್ಕದ ಮೇಸೋನಿಕ್ ಕ್ಲಬ್‌ಗಳೂ ...ಟಿಷ್ ಇತಿಹಾಸ ಹೊಂದಿವೆ. ●



▶▶ 2 ಮುಂದಿರುವ ಸವಾಲುಗಳು!

ತಿಳಿವಳಿಕೆ ಮತ್ತು ಪ್ರತಿರೋಧ ಕಂಡುಬಂದಿರಲಿಲ್ಲ. ಹೀಗಾಗಿ ಮೇಧಾ ಮತ್ತವರ ಸ್ನೇಹಿತರು ಪ್ರಾರಂಭದಲ್ಲಿ ಮಧ್ಯಪ್ರದೇಶದ ಆಜುಬಾಜುವಿನಲ್ಲಿ ಜನರ ಪ್ರಜ್ಞೆಯನ್ನು ಹೆಚ್ಚಿಸುವ ಕಾರ್ಯಗಳಲ್ಲಿ ತೊಡಗಿಕೊಂಡರು. ಪ್ರಪ್ರಥಮ ಬಾರಿಗೆ ಕೇವಲ ಸಂತ್ರಸ್ತರ ಸರಿಯಾದ ಪುನರ್‌ವಸತಿಯ ಸೀಮಿತ ಚೌಕಟ್ಟಿನಾಚೆಗೆ ಹೋಗಿ ಇಡೀ ಡ್ಯಾಂ ಯೋಜನೆಯ ಪರಿಸರ ವಿರೋಧಿ ಮತ್ತು ಜನವಿರೋಧಿ ಸ್ವರೂಪದ ಬಗ್ಗೆ ಪ್ರಶ್ನೆಗಳನ್ನೆತ್ತಲಾಯಿತು. ಈ ಡ್ಯಾಂಗಳು ಪ್ರತಿನಿಧಿಸುವ ಅಭಿವೃದ್ಧಿ ರಾಜಕಾರಣದ ಬಗ್ಗೆ ಪ್ರಶ್ನೆಗಳನ್ನೆತ್ತಲಾಯಿತು. ಆದಿವಾಸಿಗಳ ಮತ್ತು ಸಣ್ಣ ರೈತರ ಅಭಿವೃದ್ಧಿಯನ್ನು ಸಾಧಿಸದ ಅಭಿವೃದ್ಧಿ ರಾಜಕಾರಣದ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಪ್ರಶ್ನಿಸಲಾಯಿತು. ಈ ಪ್ರಶ್ನೆಗಳೊಂದಿಗೆ "ನರ್ಮದಾ ಬಚಾವ್ ಆಂದೋಲನ" ರೂಪುಗೊಂಡಿತು. ಈ ಆಂದೋಲನಕ್ಕೆ



ಸ್ಥಳೀಯ ಆದಿವಾಸಿಗಳು ಮಾತ್ರವಲ್ಲದೆ ದೂರದೂರುಗಳ ವಿದ್ವಾಂಸರು, ಕಾರ್ಯಕರ್ತರು, ಬುದ್ಧಿಜೀವಿಗಳು ಸಾಥ್ ಕೊಡಲಾರಂಭಿಸಿದರು. ನೂರಾರು ಸಂಖ್ಯೆಯಲ್ಲಿ ಹಲವಾರು ನಗರಗಳಿಂದ ವಿದ್ಯಾರ್ಥಿಗಳು, ಯುವಜನರು ಮತ್ತು ಸಾಮಾಜಿಕ ಕಾರ್ಯಕರ್ತರು ನೇರ ನರ್ಮದಾ ಕೊಳ್ಳಕ್ಕೆ ತೆರಳಿ ತಿಂಗಳುಗಟ್ಟಲೇ ಕಾಡಿನಲ್ಲಿ ಆದಿವಾಸಿಗಳ ಜೊತೆ ಉಳಿದು ಅವರ ಹೋರಾಟಕ್ಕೆ ಸಜೀವ ಸೌಹಾರ್ದತೆ ವ್ಯಕ್ತಪಡಿಸಿದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂಥಾ ಬೆಳವಣಿಗೆ ಅತ್ಯಂತ ಅಪರೂಪವಾದದ್ದೇ ಆಗಿತ್ತು. ಇದು ಒಂದು ತಲೆಮಾರಿನ ಜೀವನ ವಿಧಾನ ಮತ್ತು ಚಿಂತನಾ ವಿಧಾನದ ಮೇಲೂ ಅಚ್ಚಳಿಯದ ಪರಿಣಾಮ ಬೀರಿತು. ಈ ಹೋರಾಟಕ್ಕೆ ಬೆಂಬಲ ಸೂಚಿಸುತ್ತಾ ದೇಶಾದ್ಯಂತ ಮತ್ತು ವಿದೇಶಗಳಲ್ಲೂ ಸುಮಾರು 150 ಕಡೆ 'ಸೌಹಾರ್ದ ಸಂಘಟನೆಗಳು' ಸ್ಥಾಪಿತವಾದವು.

ಈ ಎಲ್ಲಾ ಬೆಂಬಲದೊಂದಿಗೆ ಆಂದೋಲನ ಹತ್ತು ಹಲವು ಅಹಿಂಸಾತ್ಮಕ ಆದರೆ ಸಾಮೂಹಿಕ ಹೋರಾಟಗಳನ್ನು ಹಮ್ಮಿಕೊಂಡಿತು. 1990ರಲ್ಲಿ 5000ಕ್ಕೂ ಹೆಚ್ಚು ಸಂತ್ರಸ್ತ ಆದಿವಾಸಿಗಳು ಪ್ರಧಾನಿ ವಿ.ಪಿ.ಸಿಂಗ್ ಮನೆಮುಂದೆ ನಿರಂತರ ಎರಡು ದಿನಗಳ ಧರಣಿ ನಡೆಸಿದರು. ಇದಕ್ಕೆ ಮಣಿದ ಸರ್ಕಾರ ಯೋಜನೆಯ ಪುನರ್‌ವಿಮರ್ಶೆ ನಡೆಸುವುದಾಗಿ ಭರವಸೆ ನೀಡಿತು. ಭರವಸೆ ಕಾಗದದ ಮೇಲೆ ಉಳಿಯಿತು. 1991ರ ಜನವರಿಯಲ್ಲಿ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತ ಬಾಬಾ ಆಮ್ಟೆ ನೇತೃತ್ವದಲ್ಲಿ ನರ್ಮದಾ ಕೊಳ್ಳದಲ್ಲಿ ಹತ್ತಾರು ಸಾವಿರ ಜನರ ಬೆಂಬಲದೊಂದಿಗೆ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಅದೇ ಸಮಯದಲ್ಲಿ ಮೇಧಾ ಪಾಟ್ಕರ್ ನೇತೃತ್ವದಲ್ಲಿ ಮತ್ತೊಂದು ಕಡೆ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭವಾಯಿತು. 21 ದಿನಗಳ ಕಾಲ ನಡೆದ ಈ ಸತ್ಯಾಗ್ರಹಕ್ಕೆ ಸರ್ಕಾರ ಮಣಿಯದೇ ಇದ್ದರೂ ಈ ಹೋರಾಟ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಮನ ಸೆಳೆಯಿತು. ನರ್ಮದಾ ಕೊಳ್ಳದಾದ್ಯಂತ ಕರ ನಿರಾಕರಣೆಯಂಥ "ಅಸಹಕಾರ ಚಳವಳಿ"ಯನ್ನು ಪ್ರಾರಂಭಿಸಲಾಯಿತು. ನಂತರದ ಅವಧಿಯಲ್ಲಿ ಡ್ಯಾಂನಲ್ಲಿ ನೀರು ಸಂಗ್ರಹವಾಗಿ ಮುಳುಗಡೆಯಾಗುತ್ತಿದ್ದ ಮೊಟ್ಟಮೊದಲ ಹಳ್ಳಿ ಮನಿಬೇಲಿಯಲ್ಲಿ ಸಾವಿರಾರು ಜನ ಸ್ತಬ್ಧವಾಗಿ ನಿಂತು ನಿಧಾನವಾಗಿ ಏರುತ್ತಿದ್ದ ನೀರಿನಲ್ಲಿ ಜಲಸಮರ್ಪಣೆಯಾಗುವ ಹೋರಾಟವನ್ನೂ ನಡೆಸಿದರು. ಈ ಪ್ರಕ್ರಿಯೆಯಲ್ಲಿ ಹೋರಾಟಗಾರರು ಹಲವಾರು ಬಾರಿ ಬಂಧನ, ಜೈಲು, ಲಾಠಿಚಾರ್ಜುಗಳಿಗೆ ಗುರಿಯಾದರು.

ಈ ಆಂದೋಲನದ ಒಂದು ಮುಖ್ಯ ವಿಶೇಷತೆಯೆಂದರೆ ಇದಕ್ಕೆ ಸಿಕ್ಕ ಅಂತರರಾಷ್ಟ್ರೀಯ ಬೆಂಬಲ. 1989ರಲ್ಲಿ ವಿಶ್ವಬ್ಯಾಂಕು ಈ ಯೋಜನೆಗೆ 450 ಮಿಲಿಯನ್ ಡಾಲರ್ ಸಹಾಯಧನ ಕೊಡಲು ಮುಂದಾದಾಗ ಆಂದೋಲನದ ಬೆಂಬಲಿಗರು ಅಮೆರಿಕ, ಜಪಾನ್ ಯುರೋಪ್‌ಗಳಲ್ಲಿ ತೀವ್ರರೀತಿಯ ಪ್ರತಿಭಟನೆ ನಡೆಸಿ ಪರಿಸರ ಮತ್ತು ಆದಿವಾಸಿಗಳಿಗೆ ಧಕ್ಕೆ ತರುತ್ತಿರುವ ಈ ಯೋಜನೆಗೆ ಯಾವ ಕಾರಣದಿಂದಲೂ ಹಣ ಸಹಾಯ ಮಾಡದಂತೆ ವಿಶ್ವಬ್ಯಾಂಕಿನ ಮೇಲೆ ಒತ್ತಡ ತರುವಲ್ಲಿ ಯಶಸ್ವಿಯಾದರು. ಇದಕ್ಕೆ ಮಣಿದು ವಿಶ್ವಬ್ಯಾಂಕ್ ತನ್ನ ಕಂತಿನ ಹಣವನ್ನು ನೀಡುವ ಮುನ್ನ ಪುನರ್‌ವಸತಿ ಮತ್ತು ಪರಿಸರ ವಿಷಯಗಳ ಬಗ್ಗೆ ಅಧ್ಯಯನ ಮಾಡಲು ಒಂದು ಸ್ವತಂತ್ರ ಅಧ್ಯಯನ ಸಮಿತಿಯನ್ನು ನೇಮಿಸಿತು. ಅದು ಸಹ ಆಂದೋಲನದ ಆತಂಕ ಮತ್ತು ವಾದಗಳು ಸರಿಯಾದದ್ದು ಎಂದು ವರದಿ ನೀಡಿತು. ವಿಶ್ವಬ್ಯಾಂಕ್ ಆ ವರದಿಯನ್ನು ತಿರಸ್ಕರಿಸಿದರೂ ಪರಿಸರ ಮತ್ತು ಪುನರ್‌ವಸತಿ ವಿಷಯದಲ್ಲಿ 6 ತಿಂಗಳೊಳಗೆ ಕ್ರಮ ತೆಗೆದುಕೊಳ್ಳಲು ಶರತ್ತು ವಿಧಿಸಿತು. ಆದರೆ ಸರ್ಕಾರ ವಿಶ್ವಬ್ಯಾಂಕ್‌ನ ಸಹಾಯವೂ ಬೇಡ ಷರತ್ತೂ ಬೇಡ ಎಂದು ಅದರ ಸಲಹೆಗಳನ್ನು ನಿರಾಕರಿಸಿ ತನ್ನ ಯೋಜನೆಯಲ್ಲಿ ಮುಂದುವರೆಯಿತು. ಅದೇನೇ ಇದ್ದರೂ ಹೋರಾಟ ಮತ್ತು ಒತ್ತಡಗಳಿಂದಾಗಿ ಒಂದು ಯೋಜನೆಯಿಂದ ವಿಶ್ವಬ್ಯಾಂಕ್ ಹೊರಹೋಗುವಂತಾಗಿದ್ದು ಜಗತ್ತಿನಾದ್ಯಂತ ಎಲ್ಲಾ ಹೋರಾಟಗಾರರಿಗೂ ಹುರುಪು ತಂದುಕೊಟ್ಟಿತು. ಆದರೆ ಇತ್ತ ಯೋಜನೆ ಮಾತ್ರ ನಿರಾತಂಕವಾಗಿ ಮುಂದುವರೆಯಿತು!

ಈ ಯೋಜನೆಯು ಸಂವಿಧಾನಬಾಹಿರ, ಕಾನೂನುಬಾಹಿರವೂ ಆದ್ದರಿಂದ ಈ ಯೋಜನೆಯನ್ನು ರದ್ದುಗೊಳಿಸಬೇಕೆಂದು ಕೋರುತ್ತಾ 1994ರಲ್ಲಿ ನರ್ಮದಾ ಆಂದೋಲನವು ಸುಪ್ರೀಂಕೋರ್ಟಿನಲ್ಲಿ ದಾವೆ ಹೂಡಿತು. ಕೋರ್ಟು ಡ್ಯಾಂ ನಿರ್ಮಾಣಕ್ಕೆ ತಡೆಯಾಜ್ಞೆ ನೀಡಿದ್ದೂ ಸಹ ಕಾರ್ಯಕರ್ತರಲ್ಲಿ ಹುಮ್ಮಸ್ಸು ತಂದಿತ್ತು. ಆದರೆ ಅದು ಜಾಸ್ತಿ ಕಾಲ ಉಳಿಯಲಿಲ್ಲ. 1999ರಲ್ಲಿ ಮಧ್ಯಂತರ ತೀರ್ಮಾನ ನೀಡಿದ ಸರ್ವೋಚ್ಚ ನ್ಯಾಯಾಲಯ ಡ್ಯಾಮಿನ ಎತ್ತರವನ್ನು 80.3 ಮೀಟರಿನಿಂದ 85 ಮೀಟರಿಗೆ ಏರಿಸಲು ಅನುಮತಿ ನೀಡಿತು. ಅದಕ್ಕೆ ನೀಡಿದ ಕಾರಣ "ಒಂದು ಅಭಿವೃದ್ಧಿ ಯೋಜನೆಗೆ ನ್ಯಾಯಾಲಯಗಳು ತಡೆ ಹಾಕಿದರೆ ದೇಶಕ್ಕೆ ವಿದೇಶಿ ಬಂಡವಾಳದ ಹರಿವು ಕಡಿಮೆಯಾಗುತ್ತದೆ" ಎಂದು! ಇದು ಜಾಗತೀಕರಣದ ಕಾಲಘಟ್ಟದಲ್ಲಿ ನ್ಯಾಯಾಂಗವನ್ನೂ ಒಳಗೊಂಡಂತೆ ಬದಲಾಗುತ್ತಿದ್ದ ಪ್ರಭುತ್ವದ ಸ್ವರೂಪಕ್ಕೆ ಸೂಚನೆಯಂತಿತ್ತು. 2000ದ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠ ಈ ಯೋಜನೆಯ ಬಗ್ಗೆ ಅಂತಿಮ ತೀರ್ಮಾನ ನೀಡಿ 1979ರಲ್ಲಿ ನರ್ಮದಾ ಟ್ರಿಬ್ಯುನಲ್ ನೀಡಿದ ತೀರ್ಮಾನವನ್ನು ಸಂಪೂರ್ಣವಾಗಿ ಎತ್ತಿಹಿಡಿಯಿತು. 90 ಅಡಿಯ ನಂತರ ಡ್ಯಾಮಿನ ಎತ್ತರವನ್ನು ಪ್ರತಿಬಾರಿ ಏರಿಸಬೇಕಾದರೂ ಪರಿಸರ ಕ್ರಮ ಮತ್ತು ಪುನರವಸತಿ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಖಾತರಿ ಪಡೆದುಕೊಳ್ಳಬೇಕೆಂದು ಹಾಕಿದ ಶರತ್ತನ್ನು ಬಿಟ್ಟರೆ ಆಂದೋಲನವು ಎತ್ತಿದ್ದ ಅಭಿವೃದ್ಧಿ, ಆದಿವಾಸಿ ಮತ್ತು ಪರಿಸರ ಸಂಬಂಧಿ ಯಾವ ಪ್ರಶ್ನೆಗಳನ್ನೂ ಕೋರ್ಟೂ ಪರಿಗಣಿಸಲಿಲ್ಲ. ಪರಿಗಣಿಸಲು ಸಾಧ್ಯವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿತು. ಹೀಗೆ ಕೋರ್ಟೂ ಸಹ ಸಂವಿಧಾನಬದ್ಧವಾಗಿ ಮಾರುಕಟ್ಟೆ ಪರ ಕಾರ್ಪೊರೇಟ್ ಶಕ್ತಿಗಳ ಪರ ವಹಿಸಿತು.



ಇದು ಆಂದೋಲನದ ಹೋರಾಟಕ್ಕೆ ಜನಪರ-ಆಸಕ್ತಿಗೆ ಕೊಟ್ಟ ದೊಡ್ಡ ಪೆಟ್ಟಾಗಿತ್ತು. ನಂತರದಲ್ಲಿ ಪುನರ್‌ವಸತಿಯನ್ನಾದರೂ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲು ಆಂದೋಲನ ತನ್ನೆಲ್ಲಾ ಶಕ್ತಿಯನ್ನು ವಿನಿಯೋಗಿಸುತ್ತಿದೆ. ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ. ಇದು ಚಳವಳಿಯ ಪ್ರಾಮಾಣಿಕತೆ ಮತ್ತು ಜನರ ಬಗ್ಗೆ ಅದಕ್ಕಿರುವ ಬದ್ಧತೆಯನ್ನು ಸೂಚಿಸುತ್ತದೆ. ಈ ಪ್ರಯತ್ನಗಳ ಭಾಗವಾಗಿಯೇ ಈ 25ನೇ ವರ್ಷದ ಸಂದರ್ಭದಲ್ಲಿ ಡ್ಯಾಂ ನಿರ್ಮಾಣ ನಿಲ್ಲಿಸಲು ಸಾಧ್ಯವಾಗದಿದ್ದರೂ ಅದರ ಎತ್ತರವನ್ನು 122.5 ಮೀಟರಿಗೆ ನಿಲ್ಲಿಸಲಾಗಿದೆ. 25ನೇ ವರ್ಷದ ಸಂದರ್ಭದಲ್ಲಿ ಮತ್ತೊಮ್ಮೆ ಜನರ ಪರವಾಗಿ ಹೋರಾಡುವ ಮತ್ತು ಪ್ರಸ್ತುತ ಆರ್ಥಿಕತೆ ಮತು ರಾಜಕಾರಣವನ್ನು ಪ್ರಜಾತಂತ್ರೀಕರಿಸುವ ಹೋರಾಟವನ್ನು ಮುಂದುವರೆಸುವ ಬಗ್ಗೆ ದೇಶ-ವಿದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಮತ್ತು ಆದಿವಾಸಿಗಳು ಪಣತೊಟ್ಟಿದ್ದಾರೆ. ಇವೆಲ್ಲವೂ ತತ್ವಭ್ರಷ್ಟ ಮತ್ತು ನೀತಿ ಭ್ರಷ್ಟ ರಾಜಕಾರಣದ ನಡುವೆ ಪರ್ಯಾಯ ಮೌಲ್ಯ ಸಂಹಿತೆಯ ಬಗ್ಗೆ ಭರವಸೆಯನ್ನು ಹುಟ್ಟಿಸುವುದು ನಿಜ, ಆದರೆ...


ನರ್ಮದಾ ಆಂದೋಲನದ 25ರ ಈ ಸಂದರ್ಭದಲ್ಲಿ ಇಂಥಾ ಬೃಹತ್ ಅಹಿಂಸಾತ್ಮಕ ಜನಾಂದೋಲನವೂ ಡ್ಯಾಂ ನಿರ್ಮಾಣವನ್ನು ತಡೆಗಟ್ಟಲು ಮತ್ತು ಪರ್ಯಾಯ ಅಭಿವೃದ್ಧಿ ರಾಜಕಾರಣವನ್ನು ಹುಟ್ಟುಹಾಕಲು ವಿಫಲವಾದದ್ದೇಕೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ! ನರ್ಮದಾ ಆಂದೋಲನ "ಸಂಘರ್ಷ ಮತ್ತು ನವನಿರ್ಮಾಣ್" ಎಂಬ ಎರಡು ಕಾರ್ಯಕ್ರಮಗಳನ್ನು ಏಕಕಾಲದಲ್ಲಿ ನಡೆಸಲು ಪ್ರಾಮಾಣಿಕವಾಗಿ ಯತ್ನಿಸುತ್ತಿದೆ. ಪರ್ಯಾಯ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ಪರ್ಯಾಯ ಶಾಲೆ, ಆಸ್ಪತ್ರೆ ಇತ್ಯಾದಿಗಳನ್ನು ನಿರ್ಮಿಸುವ ಪ್ರಯತ್ನ ನಡೆಸಿದೆ. ಆದರೆ ಈ ಪ್ರಯತ್ನಗಳು ಅತ್ಯಂತ ಸೀಮಿತ ಮಟ್ಟದಲ್ಲಿ ವ್ಯಕ್ತಿ ಅಥವಾ ಹಳ್ಳಿ ಮಟ್ಟದಲ್ಲಿ ಮಾತ್ರ ಪರಿಣಾಮಕಾರಿಯಾದೀತು. ಇದು ದೇಶ ಮಟ್ಟದಲ್ಲಿ 110 ಕೋಟಿ ಜನತೆಗೆ ಪರ್ಯಾಯವನ್ನು ಒದಗಿಸಬಲ್ಲದೇ? ಖಂಡಿತಾ ಇಲ್ಲ. ಏಕೆಂದರೆ ಅದಕ್ಕೆ ಬೇಕಾಗಿರುವ ರಾಜಕೀಯ ಮತ್ತು ಆರ್ಥಿಕ ಅಧಿಕಾರವನ್ನು ಈಗಿರುವ ಪ್ರಜಾತಂತ್ರ ಮತ್ತು ಪ್ರಭುತ್ವ ಒದಗಿಸುವುದಿಲ್ಲ.

"ಸಾರ್ವಭೌಮತೆಯ ಹೆಸರಿನಲ್ಲಿ ಈ ದೇಶದ ಪ್ರಭುತ್ವಕ್ಕೆ ಈ ದೇಶದ ಎಲ್ಲಾ ಸಂಪನ್ಮೂಲಗಳ ಮೇಲೆ ಪರಮಾಧಿಕಾರ ಇದ್ದಾಗ ಅದನ್ನು ಅತ್ಯಂತ ನಿರ್ಲಕ್ಷಿತ ಸಮುದಾಯಗಳ ಪರವಾಗಿ ಬಳಸುವುದು ಅದರ ಕರ್ತವ್ಯ. ಆದರೆ ಜಾಗತೀಕರಣ ಮತ್ತು ಉದಾರೀಕರಣದ ಸಂದರ್ಭದಲ್ಲಿ ಪ್ರಭುತ್ವವು ಖಾಸಗೀಕರಣಗೊಂಡಿದ್ದು ಸಂಪನ್ಮೂಲಗಳನ್ನು ಮತ್ತು ಪೊಲೀಸ್ ಅಧಿಕಾರವನ್ನು ಕಾರ್ಪೊರೇಟ್ ಉದ್ಯಮಪತಿಗಳ ಪರವಾಗಿ ಬಳಸುತ್ತಾ ಅದರ ಏಜೆಂಟೇ ಆಗಿಬಿಟ್ಟಿದೆ."

ಇದು ಈ ದೇಶದ ಪ್ರಭುತ್ವದ ಬಗ್ಗೆ ಮೇಧಾ ಪಾಟ್ಕರ್ ತಮ್ಮ 25 ವರ್ಷಗಳ ಆಂದೋಲನದಿಂದ ಅಂತಿಮವಾಗಿ ರೂಪಿಸಿಕೊಂಡ ಅಭಿಪ್ರಾಯ. ಇದು ಅಕ್ಷರಶಃ ನಿಜ. ಆದರೆ ಇಂಥಾ ಪ್ರಭುತ್ವವನ್ನು ನಿರ್ನಾಮ ಮಾಡದೆ ನವನಿರ್ಮಾಣ ಸಾಧ್ಯವೇ? ಅದಕ್ಕಾಗಿ ನಮ್ಮ ಕಾರ್ಯಕ್ರಮಗಳೇನಾಗಿರಬೇಕು? ಒಂದು ಡ್ಯಾಂ ಅಥವಾ ಒಂದು ಯೋಜನೆಯ ವಿರುದ್ಧ ಪ್ರಾರಂಭವಾದ ಒಂದು ಹೋರಾಟ ನಿಧಾನವಾಗಿ ಅನುಭವದಿಂದಲೇ ತನ್ನ ಅರಿವಿನ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುತ್ತಾ ಒಂದು ಸಮಗ್ರ ಬದಲಾವಣೆಯ ಅರಿವನ್ನು ಪಡೆದುಕೊಳ್ಳುವುದು ಮತ್ತು ಅದನ್ನು ಅನಕ್ಷರಸ್ಥ ಆದಿವಾಸಿಗಳಿಗೂ ವಿಸ್ತರಿಸುವುದು ಸುಲಭದ ಕೆಲಸವಲ್ಲ. ಆದಕ್ಕಾಗಿ ಆಂದೋಲನವನ್ನು ಅಭಿನಂದಿಸೋಣ. ಆದರೆ ಈಗ ಅದು ತನ್ನ ಅನುಭವದಿಂದಲೇ ಪ್ರಭುತ್ವದ ಬಗ್ಗೆ ಕಂಡುಕೊಂಡಂಥ ಕಟುಸತ್ಯವನ್ನು ಹೇಗೆ ಮುಖಾಮುಖಿ ಮಾಡುತ್ತದೆ? ಇತ್ತೀಚೆಗೆ ಈ ಆಂದೋಲನದಲ್ಲಿದ್ದವರು ಸಮಾನಮನಸ್ಕರೊಡನೆ ಸೇರಿ ಒಂದು ರಾಜಕೀಯ ಪಕ್ಷವಾಗುವ ಪ್ರಯತ್ನವನ್ನೂ ಮಾಡಲಾಯಿತು. ಆದರೆ ಪ್ರಭುತ್ವವೆಂದರೆ ಕೇವಲ ಶಾಸಕಾಂಗ ಮಾತ್ರವಲ್ಲ. ಚುನಾವಣೆ ಈಗ ಜನಪರ ಅಸ್ತ್ರವಾಗಿಯೂ ಉಳಿದಿಲ್ಲ. ಅಲ್ಲದೆ ಈ ದೇಶದ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳು ಶಾಸನಬದ್ಧವಾಗಿಯೇ ಜನವಿರೋಧಿಯಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ನಾವೂ ಒಂದು ರಾಜಕೀಯ ಪಕ್ಷವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಪ್ರಭುತ್ವದ ಈ ಜನವಿರೋಧಿತನವನ್ನು ಬದಲಿಸಬಹುದೇ? ಇಂದು ಇಡೀ ವ್ಯವಸ್ಥೆಯನ್ನೇ ಆಮೂಲಾಗ್ರವಾಗಿ ಬದಲಾಯಿಸುವ ಮತ್ತೊಂದು ಸ್ವಾತಂತ್ರ್ಯ ಹೋರಾಟದ ಅಗತ್ಯವಿದೆಯಲ್ಲವೇ? ಅಂಥಾ ಹೋರಾಟ ಈ ಪ್ರಭುತ್ವವನ್ನು ರಾಜಕೀಯವಾಗಿಯೂ, ಸಾಂಸ್ಕೃತಿಕವಾಗಿಯೂ, ಸೇನಾತ್ಮಕವಾಗಿಯೂ ಮುಖಾಮುಖಿಯಾಗುತ್ತಾ ಸಮಗ್ರ ಸಂಘರ್ಷ ಹೂಡುತ್ತಾ ಹಳೆಯ ಪ್ರಭುತ್ವದ ನಿರ್ನಾಮ ಮಾಡಿದರೆ ಮಾತ್ರ ನವನಿರ್ಮಾಣಕ್ಕೆ ಬೇಕಾದ ರಾಜಕೀಯ ಮತ್ತು ಸಾಮಾಜಿಕ ಸ್ಪೇಸ್ ದೊರೆಯುತ್ತದೆ. ಅಲ್ಲಿಯತನಕ ಜನರಿಗೆ ಒಳಿತಾಗುವ ಶಾಲೆ, ಆಸ್ಪತ್ರೆಗಳನ್ನು ನಡೆಸಬಾರದೆಂದಲ್ಲ. ಆದರೆ ಅದೇ ನವನಿರ್ಮಾಣ ಅಲ್ಲ ಎಂಬ ಸ್ಪಷ್ಟತೆ ಇರಬೇಕಷ್ಟೆ.

ಇದು ಪ್ರಾಮಾಣಿಕರೂ ನೈತಿಕವಾಗಿ ರಾಜಕೀಯವಾಗಿ ದಣಿಯುತ್ತಿರುವ ಕಾಲ. ಹಲವಾರು ಬಾರಿ ಸಂಘರ್ಷ ಸಮಾಧಿಯ ಮೇಲೆ ನಿರ್ಮಾಣದ ಕನಸುಗಳೂ ಹುಟ್ಟಿಕೊಳ್ಳುತ್ತವೆ. 25 ನೇ ವರ್ಷದ ಸಂಭ್ರಮದಲ್ಲಿ ಈ ಎಚ್ಚರ ನಮ್ಮೆಲ್ಲರಲ್ಲೂ ಇರಲಿ. ●

ದಲಿತರಿಗೆ ಅಕ್ಷರಗಳ ಬದಲು ಮಂತ್ರಾಕ್ಷತೆಯೆ?



ಇತ್ತೀಚೆಗೆ ಪೇಜಾವರ ಶ್ರೀಗಳು ಪತ್ರಿಕೆಗಳಿಗೆ ಪತ್ರ ಬರೆದು ತಾವು ದಲಿತರಿಗೆ ನೀಡುತ್ತಿರುವ ಭಕ್ತಿ ವೈಷ್ಣವ ದೀಕ್ಷೆಗಳ ಬಗ್ಗೆ ಆಕ್ಷೇಪ, ಆಕ್ರೋಶ ಸಲ್ಲದು ಎಂದು ತಿಳಿಸಿದ್ದಾರೆ. ದಲಿತರು ಹಿಂದುಗಳೇ ಆಗಿರುವುದರಿಂದ ತಾವು ಕೈಗೊಂಡಿರುವ ಈ ಕಾರ್ಯಕ್ರಮ ಮತಾಂತರವಲ್ಲ ಎಂದು ಅವರು ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ. ತಮ್ಮನ್ನು ಆಕ್ಷೇಪಿಸುವವರ ವಾದಗಳನ್ನು ಪೇಜಾವರ ಶ್ರೀಗಳು ತಪ್ಪಾಗಿ ಗ್ರಹಿಸಿದ್ದಾರೆ ಎಂದು ಹೇಳದೆ ವಿಧಿಯಿಲ್ಲ. ದಶಕಗಳ ಹಿಂದೆ ಅವರು ದಲಿತರ ಕೇರಿಗೆ ಭೇಟಿ ನೀಡಿದಾಗಲೂ ಆಕ್ಷೇಪಗಳು ಕೇಳಿಬಂದಿದ್ದವು. ಮಾಧ್ವ ಯತಿಯೋರ್ವರು ದಲಿತರ ಕೇರಿಗೆ ಪಾದ ಬೆಳೆಸಿದ ಮಾತ್ರಕ್ಕೆ ದಲಿತರು ಸವರ್ಣೀಯರಿಗೆ ಸಮಾನರಾಗಲಾರರು, ಇಂತಹ ಸಾಂಕೇತಿಕ ಕಾರ್ಯಕ್ರಮಗಳಿಂದ ದಲಿತರಿಗೆ ಏನೂ ಪ್ರಯೋಜನವಿಲ್ಲವೆಂಬುದು ಆಕ್ಷೇಪಗಳ ತಾತ್ಪರ್ಯವಾಗಿದ್ದಿತು. ಈಗಲೂ ನಾವು ಹೇಳುತ್ತಿರುವುದು ಅದನ್ನೇ. 'ವೈಷ್ಣವ ದೀಕ್ಷೆ' ಈ ಲೋಕದಲ್ಲಿ ದಲಿತರು ಎದುರಿಸುತ್ತಿರುವ ಸಮಸ್ಯೆಗೂ ಪರಿಹಾರವಲ್ಲ, ಈ ಲೋಕ ದೇವರ ಸೃಷ್ಟಿಯಾಗಿದ್ದು ಅವನ ಕಣ್ಣಲ್ಲಿ ನರ ಮನುಷ್ಯರೆಲ್ಲರೂ ಸಮಾನರಾಗಿರಬಹುದು. ಆದರೆ ದಲಿತರೂ ಸೇರಿದಂತೆ ಶೋಷಿತರೆಲ್ಲರೂ ಬಯಸುವ ಸಮಾನತೆ ಆ ಬಗೆಯದ್ದಲ್ಲ. ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯ ಎಂದು ಹೇಳಿದ ಬಸವನೇ ಕಾಯಕವನ್ನು ಕೈಲಾಸವೆಂದು ಕರೆದ. (ಅವನ ಕಾಲದಲ್ಲಿ ಕಮ್ಮಟವೆಂಬ ಶಬ್ದಕ್ಕೆ ನಾಣ್ಯಗಳನ್ನು ಅಚ್ಚುವ ಟಂಕಸಾಲೆ ಎಂಬ ಅರ್ಥವಿತ್ತು. ಬಸವಾದಿಶರಣರು ಕಾಯಕ ಜೀವಿಗಳ ಸಮಾನತೆಯನ್ನು ಎತ್ತಿಹಿಡಿದರು. ಆದರೆ ಹಿಂದೂ ಧರ್ಮ ಈ ಬಗೆಯ ಸಮಾನತೆಯನ್ನು ಸಾಂಕೇತಿಕವಾಗಿ ಕೂಡ ಮನ್ನಿಸುವುದಿಲ್ಲ. ದಲಿತರು ಆಧ್ಯಾತ್ಮಿಕ ಸಮಾನತೆಗಿಂತ ಹೆಚ್ಚಾಗಿ, ತಾವು ವಾಸಿಸುತ್ತಿರುವ ಊರುಗಳ ಕೆರೆ, ಬಾವಿ, ಹೊಲ, ಗದ್ದೆ, ತೋಟ, ರಸ್ತೆ, ಶಾಲೆ, ಆಸ್ಪತ್ರೆ ಕಚೇರಿಗಳಲ್ಲಿ ಇತರರ ಜೊತೆ ಸಮಾನ ಗೌರವ ಮತ್ತು ಸಮಾನ ಅವಕಾಶಗಳನ್ನು ಬಯಸುತ್ತಿದ್ದಾರೆ. ಭಿಕ್ಷೆಯಾಗಿ ಅಲ್ಲ, ಹಕ್ಕೊತ್ತಾಯವಾಗಿ. ಪೇಜಾವರ ಶ್ರೀಗಳ ವೈಷ್ಣವ ದೀಕ್ಷೆ ಅದಕ್ಕೆ ಪರ್ಯಾಯವಾಗಲಾರದು. ಹೆಚ್ಚೆಂದರೆ ಅದೊಂದು ಸಂಕೇತವಷ್ಟೇ.

ಸಂಕೇತವೊಂದರ ಅರ್ಥವನ್ನು ನಾವು ಎಷ್ಟು ಬೆಳೆಸಿದರೂ ಅದು ವಸ್ತುಸ್ಥಿತಿಯಾಗಲಾರದು. ಉದಾಹರಣೆಗೆ ಉಡುಪಿಯ ಜೊತೆ ನಿಕಟ ಸಂಬಂಧವಿದ್ದ 16ನೆಯ ಶತಮಾನದ ಭಕ್ತ ಬಂಡಾಯಗಾರ ಮತ್ತು ಕವಿ ಕನಕನ ನೆನಪನ್ನು ಎರಡು ಸಂಕೇತಗಳ ಮೂಲಕ ಈ ಕ್ಷೇತ್ರ ಈಗಲೂ ಉಳಿಸಿಕೊಂಡಿದೆ. ದೇವರ ಕಣ್ಣಲ್ಲಿ ಸಕಲ ಜಾತಿಗಳವರೂ ಸಮಾನರು ಎಂಬ ಕನಕನ ಪ್ರತಿಪಾದನೆಯನ್ನು ದೇಗುಲದ ಹೊರಗೋಡೆಯ ಕನಕನ ಕಿಂಡಿ ಸಂಕೇತಿಸುತ್ತದೆ. ರಾಗಿ ಉಡುಪಿಯಲ್ಲಿ ಯಾರ ಆಹಾರವೂ ಅಲ್ಲವಾದರೂ ಕನಕನ ನೆನಪಿಗೆ ಇಲ್ಲ ಪ್ರತಿನಿತ್ಯ ದೇವರಿಗೆ ಸಮರ್ಪಿತವಾಗುವ ಪದಾರ್ಥಗಳಲ್ಲಿ ರಾಗಿ ಅಂಬಲಿಯೂ ಇರುವುದು ಪದ್ಧತಿ. ಈ ಸಂಕೇತಗಳು ಸೂಚಿಸುವ ಸಮಾನತೆ, ಕ್ಷೇತ್ರದ ಜನ ಜೀವನದಲ್ಲಿ ಅಂದಿನಿಂದ ಇಂದಿನವರೆಗೆ ಯಾವತ್ತೂ ಕೂಡ ವಾಸ್ತವವಾಗಲೇ ಇಲ್ಲ. ಪೇಜಾವರ ಶ್ರೀಗಳ ವೈಷ್ಣವ ದೀಕ್ಷೆಯೂ ಇದೇ ಬಗೆಯ ಸಂಕೇತವಾಗಿದ್ದು ಅದು ನೀಡುವ ಸಮಾನತೆಯ ಆಶ್ವಾಸನೆ ಕೇವಲ ಭ್ರಮಾತ್ಮಕವಾದದ್ದು.

ಪೇಜಾವರ ಶ್ರೀಗಳು ತಮ್ಮ ಪತ್ರದಲ್ಲಿ ಮತಾಂತರದ ಬಗ್ಗೆ ಪ್ರಸ್ತಾಪಿಸಿ 'ನಮ್ಮ ನಾಡಿನ ಮೂಲೆಮೂಲೆಗಳಲ್ಲಿ ಆಮಿಷ ಪ್ರಲೋಭನೆಗಳನ್ನು ನೀಡಿ ಮತಾಂತರ ನಡೆಯುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ' ಎಂದು ಹೇಳುತ್ತಾರೆ. ಅವರ ಪ್ರಕಾರ ಮತಾಂತರ ವ್ಯಾಪಕವಾಗಿ ನಡೆಯುತ್ತಿದ್ದು ಅದು ಈಗಾಗಲೇ ಎಲ್ಲರಿಗೂ ಮನವರಿಕೆಯಾಗಿರುವ ಸತ್ಯ. ಆದರೆ ಶ್ರೀಗಳು ಆತಂಕಪಡುವಷ್ಟು ದೊಡ್ಡ ಪ್ರಮಾಣದ ಮತಾಂತರ ಈಗ ನಡೆಯುತ್ತಿದೆ ಅಥವಾ ಹಿಂದೆ ನಡೆದಿತ್ತು ಎಂಬುದಕ್ಕೆ ಯಾವ ಸಾಕ್ಷ್ಯಾಧಾರವೂ ಇಲ್ಲ. ಅಲ್ಲೊಂದು ಇಲ್ಲೊಂದು ಎಂಬಂತೆ ನಡೆದಿರುವ ಮತಾಂತರಗಳಾದರೂ ಈ ದೇಶದ ಸಂವಿಧಾನ ಪ್ರಜೆಗಳಿಗೆ ಕೊಡಮಾಡಿರುವ ಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ಅನುಗುಣವಾಗಿಯೇ ನಡೆದಿವೆ. 16ನೆಯ ಶತಮಾನದಲ್ಲಿ ಪೋರ್ಚುಗೀಸರು, ಗೋವಾದಲ್ಲಿ ನಡೆಸಿದ ಬಲಾತ್ಕಾರದ ಮತಾಂತರಗಳ ಒಂದು ಅಪವಾದವನ್ನು ಹೊರತುಪಡಿಸಿದರೆ ಈ ಹಿಂದೆ ಕೂಡ ಹಿಂಸೆ, ಬಲಾತ್ಕಾರಗಳಿಂದ ಮತಾಂತರ ನಡೆದಿರುವುದಕ್ಕೆ ಪುರಾವೆಗಳೇ ಇಲ್ಲ. ಮತಾಂತರದ ಬಗ್ಗೆ ಸಂಘ ಪರಿವಾರ ನಡೆಸುತ್ತಿರುವ ಅಪಪ್ರಚಾರವನ್ನೇ ಪೇಜಾವರ ಶ್ರೀಗಳು ಪುನರುಚ್ಚರಿಸುತ್ತಿದ್ದಾರೆ. ದಲಿತರಿಗೆ ವೈಷ್ಣವ ದೀಕ್ಷೆ ಕೊಡುವ ಪೇಜಾವರ ಶ್ರೀಗಳ ನಿಜವಾದ ಉದ್ದೇಶ ಹಿಂದೂಗಳನ್ನು ಒಗ್ಗಟ್ಟಾಗಿಸುವುದೇ ಹೊರತು ಹಿಂದೂಗಳ ನಡುವೆ ಸಮಾನತೆ ತರುವುದಲ್ಲ, ಪೇಜಾವರ ಶ್ರೀಗಳು ಸಂಘ ಪರಿವಾರದ ನಿಕಟವರ್ತಿ ಹಾಗೂ ಹಿಂದೆ ವಿಹಿಂಪದಲ್ಲಿ ಉನ್ನತ ಪದಾಧಿಕಾರಿಯೂ ಆಗಿದ್ದವರು.


ಮುಸ್ಲಿಮರು ಮತ್ತು ಕ್ರೈಸ್ತರ ವಿರುದ್ಧ ಹಿಂದುಗಳನ್ನು ಎತ್ತಿ ಕಟ್ಟುವುದಕ್ಕೆ ಸಂಘ ಪರಿವಾರ ಮಾಮೂಲಾಗಿ ಹೇಳುವ ಸುಳ್ಳುಗಳಲ್ಲಿ ಮತಾಂತರ ಕುರಿತು ಅದರ ಆರೋಪವೂ ಸೇರಿದೆ. ಮುಸ್ಲಿಮರು ಮತ್ತು ಕ್ರೈಸ್ತರ ತಲೆ ಒಡೆಯಲು ಮಾತ್ರ ಹಿಂದುಗಳು ಒಗ್ಗಟ್ಟಾಗಬೇಕು ಎಂದು ಸಂಘ ಪರಿವಾರ ಬಯಸುತ್ತದೆ. ಶಿಕ್ಷಣ, ಉದ್ಯೋಗ, ಆಸ್ತಿ ಮತ್ತು ಸಾಮಾಜಿಕ ಅವಕಾಶಗಳಲ್ಲಿ ಸಮಾನತೆ ಸಂಘ ಪರಿವಾರದ ಆದರ್ಶಗಳೇ ಅಲ್ಲ, ತನ್ನ ಹುಟ್ಟಿನಿಂದಲೂ ಅಂದರೆ ಆರ್.ಎಸ್.ಎಸ್. ಪ್ರಾರಂಭವಾದಂದಿನಿಂದಲೂ ಅದು ಈ ದೇಶದ ಭೂಮಾಲಕ ಬಂಡವಾಳ ಶಾಹಿಯ ಪರವಾಗಿಯೇ ಇದೆ. ಬಿಜೆಪಿ ಸೇರಿದಂತೆ ಸಂಘ ಪರಿವಾರದ ಎಲ್ಲ ಸಂಘಟನೆಗಳೂ ಸಮಾನತೆಯ ಆದರ್ಶಕ್ಕೆ ಬದಲಾಗಿ ಭಿಕ್ಷೆ, ದಾನ, ನೈಸರ್ಗಿಕ ಆಪತ್ತುಗಳಲ್ಲಿ ನೊಂದವರ ಸಹಾಯಕ್ಕೆ ಧಾವಿಸುವ ಆರ್.ಎಸ್.ಎಸ್. ಇತ್ಯಾದಿ ನೆಪ ಮಾತ್ರವೂ, ನೊಂದವರಿಗೆ ಅವಮಾನಕಾರಿಯೂ ಆದ ಸಂಕೇತಗಳನ್ನೇ ನೆಚ್ಚಿಕೊಂಡಿವೆ. ತಾವು ಮಾತ್ರ ಈ ದೇಶದ ಅಸಲಿ ಮತ್ತು ಏಕಮೇವ ದೇಶ ಪ್ರೇಮಿಗಳು ಎಂದು ಹಗಲೆಲ್ಲ ಕೊಚ್ಚಿಕೊಳ್ಳುವ ಸಂಘ ಪರಿವಾರ ದೇಶದ ಅರ್ಥ ವ್ಯವಸ್ಥೆಯಲ್ಲಿ ವಿದೇಶಿ ಹಸ್ತಕ್ಷೇಪವನ್ನು ಮಾತ್ರ ಯಾವತ್ತೂ ವಿರೋಧಿಸಿಲ್ಲ, ಕೇಂದ್ರದಲ್ಲಿ ಎನ್.ಡಿ.ಎ. ಸರಕಾರವಿದ್ದಾಗ ವಿದೇಶಿ ಮಾಲುಗಳ ವಿರುದ್ಧ ಅಣಕು ಪ್ರತಿಭಟನೆಗಳನ್ನು ನಡೆಸಿದ ಸ್ವದೇಶಿ ಜಾಗರಣ್ ಮಂಚ್ ಎಂಬ ಪರಿವಾರದ ಸಂಘಟನೆಯ ಸದ್ಯದ ವಿಳಾಸ ಯಾವುದು ಎಂದು ಯಾರಿಗೂ ಗೊತ್ತಿಲ್ಲ, ಒಟ್ಟಾರೆಯಾಗಿ ಸಂಘ ಪರಿವಾರದ ಆರ್ಥಿಕ ಸಿದ್ಧಾಂತವೇ ದೇಶವನ್ನು ಸ್ವದೇಶಿ ಬಂಡವಾಳ ಶಾಹಿ ಮತ್ತು ಅಮೆರಿಕದ ಸಾಮ್ರಾಜ್ಯ ಶಾಹಿಗೆ ಪರಾಧೀನಗೊಳಿಸುವಂತಹದ್ದಾಗಿದೆ. ಅದು ಪ್ರತಿಪಾದಿಸುವ ಅಭಿವೃದ್ಧಿ ಸಿದ್ಧಾಂತ, ದೇಶದ ರೈತರನ್ನು ಮತ್ತು ಆದಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿದೆ. ಸಂಘ ಪರಿವಾರ ಹಿಂದೂಗಳ ಒಗ್ಗಟ್ಟನ್ನು ಬಯಸುತ್ತದೆ ಆದರೆ ಅದರ ಧೋರಣೆಗಳು ಬಹುಪಾಲು ಹಿಂದುಗಳನ್ನೇ ದಿವಾಳಿ ಎಬ್ಬಿಸುತ್ತದೆ. ಸಂಘ ಪರಿವಾರದ ನಿರ್ದೇಶನದಲ್ಲಿ ನಡೆಯುತ್ತಿರುವ ಛತ್ತೀಸ್‌ಗಡದ ಬಿಜೆಪಿ ಸರಕಾರ ಗಣಿಗಾರಿಕೆಗೋಸ್ಕರ ಅಲ್ಲಿನ ಆದಿವಾಸಿಗಳನ್ನು ಒಕ್ಕಲೆಬ್ಬಿಸುವುದರಲ್ಲಿ ಕೇಂದ್ರದ ಸರಕಾರದ ಜೊತೆ ಶಾಮೀಲಾಗಿದೆ; ಕರ್ನಾಟಕದ ಬಿಜೆಪಿ ... ಶಿಕ್ಷಣ, ಸಾರಿಗೆ, ಕೃಷಿ, ತೋಟಗಾರಿಕೆ, ವೈದ್ಯಕೀಯ ... ಎಲ್ಲ ಕ್ಷೇತ್ರಗಳನ್ನೂ ಖಾಸಗಿ ಬಂಡವಾಳಶಾ... ಒಪ್ಪಿಸಿ, ಬಡ ಹೆಂಗಸರಿಗೆ ಸೀರೆ ಹಂಚುವ ಕಾ... ನಡೆಸುತ್ತಿದೆ. ದಲಿತರಿಗೆ ವೈಷ್ಣವ ದೀಕ್ಷೆ ನೀಡುವ ಪ... ಶ್ರೀಗಳ ಕಾರ್ಯಕ್ರಮ ನಡೆಯುತ್ತಿರುವುದು ಈ ಹಿನ್... ಅವರ ಈ ಕಾರ್ಯಕ್ರಮವನ್ನು ಯಾರೂ, ... ತಡೆದಿಲ್ಲ, ಪ್ರತಿಭಟಿಸಿಯೂ ಇಲ್ಲ. ಆದರೆ ... ಸನ್ನಿವೇಶದಲ್ಲಿ ಶ್ರೀಗಳ ಈ ವಿಶಿಷ್ಟ 'ದಲಿ... ಕಾರ್ಯಕ್ರಮ ನಡೆಯುತ್ತಿದೆ ಎಂದು ವಿವರಿಸಿ ಹೇ... ಸಹ ಅವರಿಗೆ ಅನಗತ್ಯ ಆಕ್ಷೇಪ ಹಾಗೂ ಆಕ್ರೋ... ಕಂಡಿದೆ. ತನ್ನ ವೈಷ್ಣವ ದೀಕ್ಷೆಯನ್ನು ಆಕ್ಷೇಪಿಸು... ಕ್ರೈಸ್ತ ಬೌದ್ಧ ಮತ್ತು ಇತರ ಮತೀಯರು ನಡೆಸ... ಮತಾಂತರದ ಚಟುವಟಿಕೆಗಳನ್ನು ಸ್ವಲ್ಪವೂ ವಿರೋ... ದಿಲ್ಲ ಎಂದು ಅವರು ಆಪಾದಿಸುತ್ತಾರೆ. ಯಾಕೆ ವಿ... ಬೇಕು? ಮತಾಂತರ ಸ್ವತಂತ್ರ ಭಾರತದ ಪ್ರತಿ... ಪ್ರಜೆಯ ಮೂಲಭೂತ ಹಕ್ಕು.

• ಜಿ. ರಾಜಶೇ...

ಹಾಯ್ಕು

ಜಪಾನಿ ಮೂಲ: ಟಾನೆಡಾ ಸಾಂಟೋಕ

(1882-1940)





ಇಲ್ಲಿ ಹಿಮದ ನಿಶ್ಚಲತೆಯಲ್ಲಿ
ಬೀಳುತ್ತಿದೆ
ಹಿಮ
****

ನನ್ನ ಭಿಕ್ಷಾಪಾತ್ರೆ
ಸ್ವೀಕರಿಸುತ್ತಿದೆ
ಉದುರಿದ ಎಲೆಗಳು
****

ಅಲೆಗಳ ಭೋರ್ಗರೆತದಲ್ಲಿ
ನೆನೆಯುತ್ತಿದೆ
ಕತ್ತಲೆ
****


ಬೆಳಗಿನ ಇಬ್ಬನಿಯಲ್ಲಿ ನೆನೆಯುತ್ತಾ
ಸಾಗುತ್ತೇನೆ
ನಾನು ಬಯಸಿದ ದಿಕ್ಕಿನಲ್ಲಿ
****


ಏನೂ ಉಳಿದಿಲ್ಲ
ನಾನು ಹುಟ್ಟಿದ ಮನೆಯಲ್ಲಿ
ಮಿಂಚುಹುಳಗಳು
****

ಅಮಲು
ಕೇಳುತ್ತವೆ ಬಗೆಬಗೆಯ ಧ್ವನಿಗಳು
ಚಳಿಗಾಲದ ಮಳೆ
****

ಸೂರ್ಯಾಸ್ತದ ಸೌಂದರ್ಯಕ್ಕೆ
ಇಲ್ಲ
ಮುಳುಗುವ ದುಃಖ
****

ಸೂತ್ರಗಳನ್ನು ಪಠಿಸುತ್ತ
ಅನ್ನ ಸ್ವೀಕರಿಸುತ್ತೇನೆ
ಚಾತಕಪಕ್ಷಿ ಹಾಡುತ್ತಿದೆ
****





ಈ ನೀರ ದಾರಿಯುದ್ದಕ್ಕೂ
ತುಂಬಿಕೊಂಡಿದೆ
ಏಕಾಂತ
****

ಇನ್ನೂ ಇನ್ನೂ
ಒಳಗಿಳಿಯುತ್ತವೆ
ಹಸಿರು ಬೆಟ್ಟಸಾಲು
****

ಭಿಕ್ಷೆ
ಸ್ವೀಕರಿಸುತ್ತೇನೆ
ಸುಡುವ ಸೂರ್ಯ
ನಿಸ್ತೇಜನಾಗಿ ಮರಳುತ್ತೇನೆ ಗುಡಿಸಲಿಗೆ
ಆಗಸದಲ್ಲಿ ತುಂಬಿಕೊಳ್ಳುತ್ತಾನೆ
ಚಂದ್ರ
****

ಒಂಟಿ ಮನ
ಕೊರೆಯುತ್ತಿದೆ
ಮರಕುಟುಕ
****

ತಣ್ಣಗಿನ ಕನ್ನಡಿಯಲ್ಲಿ
ಈ ಮುಖ
ನನ್ನದು
****







ಕೊನೆಯಿರದ ಹಾದಿಯಲ್ಲಿ
ಮುಗಿಯದ ಹೆಜ್ಜೆ
ಎಲೆಗಳು ಉದುರುತ್ತಿವೆ
****

ಕಾದ ಬಂಡೆಯ ಮೇಲೆ
ಹಗಲುಗನಸು ಕಾಣುತ್ತಿದೆ
ಏರೋಪ್ಲೇನ್ ಚಿಟ್ಟೆ
****

ಖುಷಿಯಿಂದ ಮೂತ್ರ ಮಾಡು...
ಮಗು
ಚಿಗುರು ಹುಲ್ಲಿನ ಮೇಲೆ
****

ಚಂದಿರನ ತಂಪು ಕಿರಣಗಳು
ಛೇದಿಸಿವೆ
ಹಸಿದ ಹೊಟ್ಟೆ
****

ಬುದ್ಧನಿಗೆ
ಅರ್ಪಿತವಾಗುತ್ತಿವೆ
ಹೆಸರಿಲ್ಲದ ಹೂಗಳು
****

ಈಗ ಉಳಿದಿರುವುದು
ತುಸು ಬೂದಿ
ನನ್ನ ದಿನಚರಿಯ ಪುಟಗಳು

ಅನುವಾದ: ಡಾ. ಸಿ. ರವೀಂದ್ರನ...

...ೂ ನಿನ್ನ ಬಂಡ ಬಾಳಿಗೆ ಬೆಂಕಿ ಹಾಕ

...ೇಕಿಲ್ಲದಿದ್ದರೂ ಬಂದು ಸುರಿಯುತ್ತಿರುವ ಮಳೆ, ...ೇಕಿಲ್ಲದಿದ್ದರೂ ವಕ್ಕರಿಸಿ ಕಾಡುತ್ತಿರುವ ಎಡೂರಪ್ಪ ...ನ್ನು ಹಾಗೇ ನೋಡುತ್ತಿದ್ದ ಕಾಳ ಮಾವ ಸುಸ್ತಾದವ

...ಡುಗಾಲ ಬತ್ತು ಬುಡ್ತ" ಎಂದ.

...ಡುಗಾಲವೆ ಬುಡು. ಬೆಳದ ವಲ ಕೂದು ... ಹಾಕಂಗಿಲ್ಲ, ವಲ್ಯಲ್ಲ ಮನಿಗ್ಯವೆ, ಈರುಳ್ಳಿ ...ದೊ, ಮೆಣಸಿನಕಾಯಿ ಹಾಳಾದೊ, ಅಂತೂ ... ಪದಾರ್ಥ ಮಣ್ಣಾಯ್ತು" ಎಂದ ಸೀರ.

...ಯ ಲು ಸೀ ಮೆ

...ಟ್ಟೆಪುರಾಣ

▶ ಬಿ. ಚಂದ್ರೇಗೌಡ

...ತ ಮಳೆ ನಾನು ಹುಟ್ಟಿದ್ದೂ ನೋಡ್ಲಿಲ್ಲ ಕಣ ... ಎಂದಳು ಜುಮ್ಮಿ.

...ಗೊಂದು ಸತಿ ಒಂದು ತಿಂಗಳೂದಿತ್ತು ಕಂಡ್ಯ."

...ದ್ದು ಕಳೆ ಕೀಳಕ್ಕೂ ಅವುಕಾಸಿಲ್ಲದಂಗೆ ಊದೂ ...ರಿಗಿಂತ ಕಳೆನೆ ಬ್ಯಳಕಂಡಿತ್ತು" ಎಂದ ಉಗ್ರಿ.

...ಮುಂದ್ಕೆ ಜೀವನ ಮಾಡದ್ಯಂಗಪ್ಪಾ?" ಎಂದ ಸೀರ.

...ದ್ಯೋಗ ಕಾತ್ರಿ ಕ್ಯಲಸ ಮಾಡಿ ಜೀವನ ಮಾಡಿವೆ ... ಎಂದಳು ಜುಮ್ಮಿ.

...ಯ್ಯೊ ಅದರಲ್ಲಿ ನ್ಯಡಿತಾಯಿರೋ ಮೋಸ ಗೊತೇ? ...ಲಿರೊ ಜನಗಳ್ಯಲ್ಲ ವಡಕಂಡು ತಿಂತಾ ಅವ್ರುರೆ. ...ಖಲ್ಲ ಹೇಳೋರಿಲ್ಲ."

...ದ್ಯಂಕೇಳ್ತರ್ಲ? ಎಡೂರಪ್ಪಾದಿಯಾಗಿ ಅವುನ ...ಳ್ಯಲ್ಲ ಮೈಮ್ಯಾಲೆ ನ್ಯದುರು ಬಂದೋರಂಗೆ ತಿಂತಾ ...ಾಗ ಅಧಿಕಾರಿಗಳ ಕೇಳೋರ್ಯಾರೂ?" ಎಂದ ...ಾವ.

...ಜ ಕಣಮಾವ. ಈ ಸರಕಾರಿ ಜನವ ಆ ...ಪ್ ಹಗ್ಗೆ ಎಷ್ಟು ಅಂತ ಹಿಡದನೂ. ಎಷ್ಟು ...ಾ ಕೇರ್ ಮಾಡ್ತಾಯಿಲ್ಲ, ನೋಡಾಗ್ಲೆ ನ್ಯನ್ನೆ ದಿನೇ ಹತ್ತು ಜನ ಹಿಡದವ್ರುನೆ. ಯಲ್ಲಾ ಸೂಳೆಮಕ್ಕಳೂ ಕೋಟಿಗಟ್ಲೆ ಬಾಚಿ ಗುಡ್ಡೆ ಹಾಯ್ಕಂಡವ್ರುರೆ. ಅವ್ರುರ್ಯಲ್ಲ ಯಂಗಪ್ಪ ಸಂಪಾದ್ನೆ ಮಾಡಿದ್ರು ಅಂದ್ರೇ, ನೋಡಿಂಗೆ ಉದ್ಯೋಗ ಖಾತ್ರಿಯೋಜನೆ ತರದವು ಸರಕಾರದಲ್ಲವೆ. ಅದೂ ಅಲ್ದೆ ಸರಕಾರಿ ಜನ ತಿನ್ನಕ್ಕೇ ಅಂತ ಹಲವಾರು ಯೋಜನೆ ಅವೆ. ಅವು ನನಿಗೂ ನಿನಿಗೂ ಗೊತ್ತಿಲ್ಲ, ಅವ್ರುರಿಗೆ ಮಾತ್ರ ಗೊತ್ತು, ಆ ಕರುಣಾನಿಧಿ ಪಾರ್ಟಿ ಮಂತ್ರಿ ರಾಜ ಅನ್ನೋನು, ಸಾವುರಾರು ಕೊಟಿ ವಡಕಂಡನಂತೆ. ಅದ್ಯಾತರಲ್ಲಿ ವಡದ, ಹ್ಯಂಗ್ವಡದ ಅಂತ ಇವತಿಗೂ ನನಿಗೆ ಗೊತ್ತಾಯ್ತಾಯಿಲವಪ್ಪ" ಎಂದ ಉಗ್ರಿ.

"ಸಾವುರಾರು ಕೋಟಿ ಅಂದ್ರೆ ಹುಡುಗಾಟಗುಳಿ ಮಾತೇನ್ಲ?"

"ಊ ಕಣಮಾವ, ಬಿಜೆಪಿಗಳು ಗಲಾಟೆ ಮಾಡಿದ್ಕೆ ಸೋನಿಯಾಗಾಂಧಿ ರಾಜನಿಂದ ರಾಜೀನಾಮೆ ಬರಿಸಿಗಂಡು ಕಳಿಸ್ಯವ್ರುಳೆ. ಅದೇ ಬಿಜೆಪಿಗಳು ಎಡೂರಪ್ಪನ ವಿಷಯದಲ್ಲಿ ಮಾತಾಡ್ತಯಿಲ್ಲ."

"ಅಂಗರೆ ಎಡೂರಪ್ಪನೂ ಸಾವುರಾರು ಕೋಟಿ ವಡದವ್ರುನೇನ್ಲಾ?" ಎಂದಳು ಜುಮ್ಮಿ.

"ಸಾವುರಾರು ಕೋಟಿ ಅಲ್ದಿಯಿದ್ರು ನೂರಾರು ಕೋಟಿ ವಡದವ್ರುನೆ ಕಣಕ್ಕ" ಎನ್ನುತ್ತಾ ವಾಟಿಸ್ಸೆ ಬಂದ.

"ಅದ್ಯಂಗೆ ವಡುದುನ್ಲ?"

"ಅವುನೆ ಸಿಕ್ಕಿದಾಗ ಕೇಳು. ಕೇಳಿದ್ರೆ ಏನಂತನೆ ಗೊತ್ತೇ? ಹಿಂದಿನವರು ವಡದಿಲವೆ? ಕುಮಾರಸ್ವಾಮಿ ವಡದಿಲವೆ? ಧರ್ಮಸಿಂಗ್ ಲಪಟಾಯಿಸಿಲವೆ? ಬರಿ ನಂದನೆ ಹೇಳ್ತಿರಲ್ಲಾ ಅವ್ರುರದನ್ಯಲ್ಲ ಮರತಬುಟ್ರ ಅಂತನೆ ಗೊತ್ತೇ?"

"ಥೂ ಇವುನ ಬಂಡಬಾಳಿಗೆ ಬೆಂಕಿ ಹಾಕ."

"ವಳ್ಳೆ ಮಾತೆಳಿದೆ ಕಣಕ್ಕ, ನಿಜವಾಗ್ಲು ಬಂಡಬಾಳು ಇದೆ. ಈಗಾಗ್ಲೆ ಶಿಕಾರಿಪುರದಲ್ಲಿರೊ ಆಸ್ತಿ ಅಳದ್ರೆ ಅವುನ ಮನೆತನ ಇರೋವರಿಗೂ ಸುಖವಾಗಿರಬವುದಂತೆ. ಆದ್ರು ಶಿವಮೊಗ್ಗಕ್ಕೆ ಹೋಗಿ ಬೇಕಾದೋಟು ಆಸ್ತಿ ಮಾಡಿದ್ದನಂತೆ. ಈಗ ಬೆಂಗಳೂರಲ್ಲೂ ಮಕ್ಕಳಿಗೆ ಜಮೀನು, ಸೈಟು ತಗದು ಕೊಟ್ಟಿದ್ದನಂತೆ. ಕೇಳಿದ್ರೆ ಇದ್ಯಲ್ಲನೂ ಕಾನೂನುಬದ್ದವಾಗೇ ಮಾಡಿದ್ದಿನಿ. ನನ್ನ ಮಕ್ಕಳು ಆಸ್ತಿ ಮಾಡಬಾರ್ದ? ನಾನು ಮುಖ್ಯಮಂತ್ರಿ ಪಟ್ಟದಿಂದ ಇಳಿದ ಮ್ಯಾಲೆ ಮಾಡಕ್ಯಾಯ್ತದಾ ನೀವೆ ಹೇಳಿ ಅಂತನಲ್ಲಾ, ಇಂಥೋನ್ನ ಎಲ್ಯಾರ ನೋಡಿದ್ದಿ ದ್ವಡಪ್ಪ?"

"ಇಲ್ಲ ಬುಡ್ಯ, ಇಂಥ ಲೋಬಿ ಮನುಸನ್ನ ಇಲ್ಲಿಗಂಟ ನೋಡಲಿಲ್ಲ."

"ಅದೋಗ್ಲಿ ದ್ವಡಪ್ಪ, ಇಂತ ಕ್ಯಲಸ ಮಾಡಿಬುಟ್ಟು ಇನ್ನ ಮುಂದೆ ಮಾಡದಿಲ್ಲ ಅಂತನಲ್ಲ ಅದೇಳು?"

"ಅಂಗಂದ್ರೆ, ಇಲ್ಲಿಗಂಟ ಮಾಡಿದ್ಕೆ ಏನು ಮಾಡಬೇಕಂತೆ" ಎಂದ ಸೀರೆ.

"ಕ್ಷಮಿಸಿಬುಡಿ ಅಂತಾ ಅವುನೆ."

"ಕ್ಷಮಿಸಿಬುಡಕ್ಕೆ ತೆಪ್ಪು ಮಾತಾಡಿದ್ರೆ ಕ್ಷಮುಸಬವುದು. ಕ'ಂಡ'.. ವಡದು ಗುಡ್ಡೆ ಹಾಯ್ಕಂಡು ಇನ್ನ ಮುಂದೆ ವಡಿಯದಿಲ್ಲ ಕ್ಷಮಿಸಿ ಅಂದ್ರೆ ಇನ್ಯಂಥ ಕಳುಗಾಡುಕ ಇದ್ದನಿವುನು. ಮರಿಯಾದಿ ಅನ್ನದೆ ಬ್ಯಾಡವೆ. ಇಂಥ ಕ್ಯಟ್ಟ ಕ್ಯಲಸ ಮಾಡ್ತಯಿರದಕ್ಕೆ ಕಂಡ್ಯ ಇವುನು ಸೀರೆ ಹಂಚತಾಯಿರದು" ಎಂದ ಸೀರ.

"ಸೀರೆ ಯಂಗಿದ್ದವ್ರುಲೆ?" ಎಂದ ಕಾಳಮಾವ.



"ಚನ್ನಾಗ್ಯವೆ ಕಣಮಾವ. ಸೀರೆ ಈಸಗಂಡೋರ್ಯಲ್ಲ ಎಡೂರಪ್ಪನಿಗೇ ಓಟಾಕ್ತರೆ."

"ಅವ್ರುರೋಗ್ಲಿ ಕಣೆ. ಸೀರೆ ರುಣ ಯಾರಿಗೆಬೇಕು ಅಂತ ಒಂದೋಟಾಕಬವುದು. ಈ ಸರಕಾರಿ ನೌಕರ್ರು ಹಾಕ್ತರಂತಲ್ಲಾ ಹೇಳು."

"ಅವ್ರುರ್ಯಾಕಾಕ್ತರ್ಲ?"

"ಅವ್ರುರಿಗೇನೂ ಸಂಬಳ ಜಾಸ್ತಿಯಾದತಂತೆ ದ್ವಡಪ್ಪ ಆರನೇ ವೇತನ ಆಯೋಗಕ್ಕೆ ಎಡೂರ ಸಯಿನು ಮಾಡಿದನಂತೆ. ಅದ್ಕೆ ಈ ಸರಕಾರಿ ಜನ ಎಡೂರಪ್ಪನೆ ಸರಿ ನಾವು ಅವುನಂಗೆ ಆರಾಮಾಗಿರಬವುದು ಅಂತ ಅವುನಿಗೇ ಓಟಾಕ್ತಿವಿ ಅಂತಾ ಅವ್ರುರೆ."

"ಯಲ್ಲಾರು ಅಂಗನ್ನದಿಲ್ಲ ಕಣೊ. ಲಿಂಗಾಯಿತ್ರ, ಬ್ರಾಂಬ್ರು ನೌಕರ್ರು ಅಂಗಂತರೆ. ಉಳುದೋರು ಹಾಕದು ಡವುಟು" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಸರಕಾರಿ ಜನವ ಏನಂತ ತಿಳಕಂಡಿದ್ದಿ ನೀನು? ಅವ್ರುರ್ಯಲ್ಲ ಒಂದೇ ಕಣೊ. ಬಡಬಗ್ಗರ ದುಡ್ಡ ತಿಂತರೆ, ಪ್ರವಾಹದ ಜನಗಳ ದುಡ್ಡ ತಿಂತರೆ, ಈ ಎಡೂರ ನೀವ್ಯಾಕೆ ತಿಂತಿರಿ ಅಂತ ಕೇಳದಿಲ್ಲ?"

"ಅವುನು ತಿಂತಾ ಅವುನಲ್ಲ ಅದ್ಕೆ."

"ಅಂಗೆ ಬಾ ಮತ್ತೆ, ನನಿಗೂ ಯಾಕೊ ಈ ಎಡೂರಪ್ಪನ್ನೇ ಇರ್ಲಿ ಅಂತಾ ಅನ್ನಸ್ತದೆ" ಎಂದ ವಾಟಿಸ್ಸೆ.

"ಅಯ್ಯೋ, ನಿನ್ನ ಬಾಯಿ ಬಡಿಯ. ಅದ್ಯಾಕ್ಲ ಅಂಗಂತಿ?"

"ಯಾಕೆ ಗೊತ್ತೇನಕ್ಕ? ಈ ಎಡೂರಪ್ಪನೇ ಇದ್ರೆ ಬಿಜೆಪಿ ಕೆಟ್ಟು ಕ್ಯರಹಿಂಡುದು ಹೋಯ್ತದೆ. ಅದ್ಕೆ!"


"ಇದೇನೂ ಹಿಂಗಂತಿ ನೀನೂ. ಎಡೂರಪ್ಪ ಇನ್ನ ಇದ್ದಿದ್ದೆ ಆದ್ರೆ ಭಾರಿ ಅನಾಹುತದೆ ಕಣೊ. ನೋಡೀಗಾಗ್ಲೆ ಉಡುಪಿ ದೇವಸ್ಥಾನ ಮಠಕ್ಕೆ ಬರದೇ ಬುಟ್ನಂತೆ. ಅದೇ ತರ ಇನ್ನೇನ್ ಯಾರ್ಯಾರಿಗೆ ಬರದೋಯ್ತನೊ ಏನೋ. ಅದ್ಕೆ ಇವುನು ಇರಬಾರ್ದು ಕಣೊ."

"ಸಾರಿ ಕಣೊ ಉಗ್ರಿ. ಇನ್ನು ಮುಂದೆ ಒಂದು ಸೆಕೆಂಡು ಇವುನಿರಬಾರ್ದು, ಮುಕ್ಯಮಂತ್ರಿ ಛೇರಿಂದ ಇಳಿಬೇಕು."

"ಇಳುದು ಮ್ಯಾಲೆ ಎಲ್ಲಿಗೋಯ್ತನೆ?" ಎಂದಳು ಜುಮ್ಮಿ.

"ಸತ್ತೋಯ್ತನೆ ಕಣಕ್ಕ!" ●

...ಹಿತ್ಯ ಸೇವೆಯ ಇನ್ನೊಂದು ಮುಖ



...ಹಿತ್ಯಸೇವೆ, ನಮ್ಮ ಸಂತೋಷಕ್ಕಾಗಿ ನಾವು ಬರೆಯುವುದು, ...ಾಡುತ್ತಿರುವುದು ಯಾರಾದರೂ ಕೇಳಲಿ, ಪ್ರಶಸ್ತಿ ಕೊಡಲಿ ...ಇವೆಲ್ಲ ಸರಿ. ಹಾಗೆಯೇ ಅನೇಕ ನವಸಾಹಿತಿಗಳ 'ಹುಳಿ... ...ು ಸಿದ್ಧಾಂತ. ಅವರು ಹೇಳುತ್ತಾರೆ, "ಬರೆಯುವುದು ನನಗೆ ... ಅನಿವಾರ್ಯ ಕರ್ಮವಾದ್ದರಿಂದ ಬರೀತಿದ್ದೇನೆ. ನನ್ನನ್ನು ...ಷ್ಟಪಡಿಸಿಕೊಳ್ಳಲು ಬರೆಯುತ್ತಿದ್ದೇನೆ" ಇತ್ಯಾದಿಯಾಗಿ. ಕಾಫ್ಕಾ ...ಜೀವನ ಅತ್ಯುತ್ತಮವಾದದ್ದನ್ನು ಬರೆದ; ಸದಾ ಜಾಡ್ಯ ಹಿಡಿದ ...ು ಮನುಷ್ಯನಾಗಿದ್ದ ಆತ ಸಾಯುವಾಗ ಗೆಳೆಯನಿಗೆ 'ನಾನು ...ನ್ನೆಲ್ಲ ಸುಟ್ಟುಬಿಡು. ಅವನ್ನು ಮತ್ತೆ ಪ್ರಕಟಿಸಕೂಡದು' ಅಂದ. ...ಸತ್ತಮೇಲೆ ಬರೆದದ್ದಕ್ಕೆ ಏನಾದರೆ ಏನು ಅನ್ನಿಸಬಹುದು; ...ದೇಹದ ದೃಷ್ಟಿಯಿಂದ ಸರಿ. ಆದರೆ ನಾವೆಲ್ಲ ಬರೆಯುವಾಗ ...ಪರಿಸರಕ್ಕೆ, ನಮ್ಮ ಭಾಷೆ ಮತ್ತು ನಮ್ಮವರ ಜೀವನಕ್ರಮಕ್ಕೆ ...ಬರೆದದ್ದರಿಂದ ಆಗಿದ್ದನ್ನು ಸ್ವಲ್ಪವಾದರೂ ತಿಳಿದಿರುತ್ತೇವೆ. ...ರ ನಾನು ಬರೆದದ್ದನ್ನು ನಾಶಮಾಡಿಹೋಗಲು ಇಷ್ಟಪಡುವುದಿಲ್ಲ. ...ು ಅರ್ಥದಲ್ಲಿ ಪ್ರತಿಯೊಂದು ಬರವಣಿಗೆಯೂ ಒಂದು ... ರಾಜಿ; ಅತ್ಯಂತ ಸಮರ್ಪಕವಾದದ್ದು, ನಮಗೆ ಸಂಪೂರ್ಣ ...ಪಡುವಂಥಾದ್ದು ನಮ್ಮಿಂದ ಸೃಷ್ಟಿಯಾಗುವುದೇ ಇಲ್ಲ, ಅದಕ್ಕೆ ...ಿಯ, ಇದ್ದದ್ದರಲ್ಲೇ ವಾಸಿ ಎನ್ನುವ ಮನೋಭಾವ ಬರವಣಿಗೆ ...ಲ್ಲಿ ಎನ್ನಿಸುತ್ತದೆ.


...ರೆ ಇದಕ್ಕೆಲ್ಲ ಗ್ರಾಹಕರ ಇನ್ನೊಂದು ಮುಖವಿದೆ. ನಿಮ್ಮ ಬರವಣಿಗೆ ಅಚ್ಚಾಗಬೇಕಾದರೆ ಲಕ್ಷಾಂತರ ...ು ಖರ್ಚಾಗಿರುವ ಮುದ್ರಣ ಯಂತ್ರ, ದುಬಾರಿಯಾದ ಕಾಗದ ಬೇಕಾಗುತ್ತದೆ. ಓದುವವರಿದ್ದರೆ (ಅಂದರೆ ...ವರಿದ್ದರೆ) ಮಾತ್ರ ಬರೆಯುವುದು ಸಾಧ್ಯವಾಗುತ್ತದೆ. ಹೀಗಾಗಿಯೇ 'ಕೊಳ್ಳುವವರಿಲ್ಲದಿದ್ದರೂ ಬರೆಯುತ್ತೇನೆ' ...ಬರೆದು ಬದುಕುವವರ ತಂಡವೇ ಇದೆ. ಹದಿನೆಂಟನೆ ... ತುಂಬ ರೊಮ್ಯಾಂಟಿಕ್ ಕವಿಗಳ ಎದುರಾಳಿಗಳಾಗಿ ಬರೆದು ಬದುಕುವವರ ತಂಡವೇ ಇದೆ. ಹದಿನೆಂಟನೆ ...ನದ ಇಂಗ್ಲಿಷ್ ವಿದ್ವಾಂಸ, ಮಾತುಗಾರ, ಕವಿ ಮತ್ತು ವಿಮರ್ಶಕ ಡಾ.ಜಾನ್‌ಸನ್ ಈ ತಂಡದ ನಾಯಕ. ...ುಕಿದ್ದೇ ಬರೆಯುವುದರಿಂದ. ಬರೆಯಲು ಬಾರದಿರುವ ರಾಜಕಾರಣಿಗಳಿಗೆ ಬರೆದುಕೊಡುತ್ತಿದ್ದ, ಮಾತಾಡಲು ...ನಿಗೆ ಓದಲು ಭಾಷಣಗಳನ್ನು ಸಿದ್ಧಪಡಿಸುತ್ತಿದ್ದ. ಯಾವುದನ್ನೂ ಬಿಟ್ಟಿಯಾಗಿ ಬರೆಯುತ್ತಿರಲಿಲ್ಲ, ಅವನೇ ... 'ದುಡ್ಡಿಗಲ್ಲದೆ ಬೇರೆ ಕಾರಣಕ್ಕೆ ಬರೆಯುತ್ತಾನೆ.' ... ಲೇಖಕ ಮಾತ್ರ ದುಡ್ಡಿಗಲ್ಲದೆ ಬೇರೆ ಕಾರಣಕ್ಕೆ ಬರೆಯುತ್ತಾನೆ.'

...ಸ 'ತಲೆಯಿಲ್ಲದ ಪೆದ್ದು ಲೇಖಕ ಮಾತ್ರ ದುಡ್ಡಿಗಲ್ಲದೆ ಬೇರೆ ಕಾರಣಕ್ಕೆ ಬರೆಯುತ್ತಾನೆ.' ...ಷ್ಯೆ ನಾನು ಒಮ್ಮೆ ಬರೆದಿದ್ದು: ಕತೆಯ ರೇಖೆ ಸ್ಪಷ್ಟವಾಗಿ ಪಾತ್ರಗಳು ಸ್ಫುಟವಾಗಿ, ಮಾತು ನೇರವಾಗಿರುವ ...ಸು ಕತೆ ಬರೆಯಿರಿ... ಮೂರು ತಿಂಗಳಲ್ಲಿ ಹದಿನೈದು ಸಾವಿರ ಪ್ರತಿ ಖರ್ಚಾಗುವಂಥ ಪತ್ತೇದಾರಿ, ...ತೆ, ಸಾಹಸದ ಘಟನೆ, ಸಾಮಾಜಿಕ ಪ್ರಸಂಗ-ಬರೆದರೆ ನೀವು ಜನಪ್ರಿಯರಾಗಿ ಹಣ ಗಳಿಸುವ ಜೊತೆಗೆ ... ಉಳಿಯಲೂಬಹುದು. ಶೇಕ್ಸ್‌ಪಿಯರ್ ಬರೆದದ್ದು ಹಾಗೆ; ಬಿಟ್ಟಿಯಾಗಿ ಬರೆಯಲು ಆತ ಹಿಂಜರಿಯುತ್ತಿದ್ದ.

ಘೋರ ರಕ್ತಪಾತದ ಜಾಗದಲ್ಲಿ...



ಮೊನ್ನೆ ಒಂದು ಕೌತುಕದ ಸಂಗತಿ ನಡೆಯಿತು. ಪ್ಯಾಲಿಸ್ಟೇನಿಗಳು ಮತ್ತು ಇಸ್ರೇಲಿಗಳು ಶಾಂತಿ ಒಪ್ಪಂದ ಮಾಡಿಕೊಂಡು ಪ್ರಖ್ಯಾತ ಪ್ಯಾಲಿಸ್ಟೇನಿ ನಾಯಕ ಯಾಸರ್ ಅರಾಫತ್ ಸಹಜ ಮನುಷ್ಯನಂತೆ, ಪ್ರೀತಿಯ ಮುಂದಾಳುವಿನಂತೆ ಎಲ್ಲರೊಂದಿಗೆ ತನ್ನ ಪ್ಯಾಲಿಸ್ಟೇನ್ ರಾಜ್ಯ ಕಟ್ಟಲು ಓಡಾಡುತ್ತಿರುವಾಗ... ಕಳೆದ ಹತ್ತಾರು ವರ್ಷದಿಂದ ಕ್ರಾಂತಿಕಾರಿಣಿಯಂತೆ ವರ್ತಿಸುತ್ತಾ ಅಗ್ನಿಭಕ್ಷಕಳಂತೆ ಮಾತಾಡುತ್ತ ಪ್ಯಾಲಿಸ್ಟೇನಿಗಳ ಪರವಾಗಿದ್ದ ನಟಿ ವ್ಯಾನೇಸಾ ರೆಡ್‌ಗ್ರೇವ್ ಪ್ಯಾಲಿಸ್ಟೇನ್‌ನಲ್ಲಿ 'ಬ್ರೆಸ್ಟ್ ಇನ್ ಎಕ್ಸೈಲ್' ಎಂಬ ನಾಟಕ ಆಡಲು ತೀರ್ಮಾನಿಸಿದಳು. ಈಕೆ ಬ್ರಿಟಿಷ್ ಕ್ರಾಂತಿಕಾರಿಣಿ; ಎಡಪಂಥೀಯ ಸದ್ಭಾವನೆಯವಳು; ಅರಾಫತ್ ಅಭಿಮಾನಿ ಮತ್ತು ನೊಂದ ಮುಸ್ಲಿಮರ ಪರವಾಗಿ ಸದಾ ಇರುವವಳು. ಹಾಗೆ ನೋಡಿದರೆ ಈ ಅಗ್ನಿಭಕ್ಷಕಳ 'ಬ್ರೆಸ್ಟ್ ಇನ್ ಎಕ್ಸೈಲ್' ನಾಟಕವನ್ನು ಪ್ಯಾಲಿಸ್ಟೇನ್‌ನಲ್ಲಿ ನೋಡಲು ಜನ ಘೇರಾಯಿಸಬೇಕಾಗಿತ್ತು. ನನ್ನಂಥವರು ನಿರೀಕ್ಷಿಸಿದ್ದಂತೆ ಹಾಗಾಗಲಿಲ್ಲ, ಕೆಲವೇ ಟಿಕೆಟ್ ಮಾರಾಟವಾದವು. ಇಸ್ರೇಲಿಗಳು ಈ ನಾಟಕವನ್ನು ಇಷ್ಟಪಡಲಾರರು ಎಂಬ ಗುಮಾನಿ ಹಬ್ಬಿತು. ನಟಿ ವ್ಯಾನೇಸಾ ಬಂದ ದಾರಿಗೆ ಸುಂಕವಿಲ್ಲ ಅಂದುಕೊಂಡು ನಾಟಕವನ್ನು ರದ್ದು ಮಾಡಿ ಇಂಗ್ಲೆಂಡಿಗೆ ಹಿಂದಿರುಗಬೇಕಾಯಿತು. ಪ್ಯಾಲಿಸ್ಟೇನಿನ ಒಬ್ಬರು ಹೇಳಿದರು, 'ಜನ ಪ್ಯಾಲಿಸ್ಟೇನ್ ನಾಯಕ ಅರಾಫತ್‌ರನ್ನು ಕ್ಷಮಿಸಿದ್ದಾರೆ, ವ್ಯಾನೇಸಾ ರೆಡ್‌ಗ್ರೇವ್ ತರಹದವರನ್ನು ಕ್ಷಮಿಸಿಲ್ಲ!'



ಯಾಕೆ? ಎಂದು ಊಹಿಸುವುದು ನಿಮಗೆ ಕಷ್ಟವಾಗಕೂಡದು. ಪ್ಯಾಲಿಸ್ಟೇನ್ ನಾಯಕ ಅರಾಫತ್ ತನ್ನ ಪ್ರಾಣವನ್ನು ಒತ್ತೆಯಿಟ್ಟು (ಸುಮಾರು ಹನ್ನೆರಡು ಸಲ ಈತ ಕೊಲೆಯಾಗುವುದರಿಂದ ತಪ್ಪಿಸಿಕೊಂಡ!) ತನ್ನ ಜನತೆಗಾಗಿ ಹೋರಾಡಿದ ತನ್ನ ಜನರಿಗಾಗಿರುವ ಅನ್ಯಾಯ ಅವನಿಗೂ ಆಗಿತ್ತು. ಆದರೆ ವ್ಯಾನೇಸಾ ತರಹದವರು ಕ್ರಾಂತಿಕಾರಿ ಪೋಸ್ ಕೊಡುತ್ತಾ ಎಲ್ಲೆಲ್ಲೂ ಮಿಂಚಿದರು. ಅವರಿಂದ ಎಷ್ಟೇ ಉಪಯೋಗವಾಗಿದ್ದರೂ ಈಗ ಅವರ ನಾಟಕ ನೋಡಿ ಆನಂದಿಸಲು ಜನಕ್ಕೆ ಇಷ್ಟವಿಲ್ಲ. ಘೋರ ರಕ್ತಪಾತದ ತಾಣದಲ್ಲಿ ನಮ್ಮ ಸೋಗಲಾಡಿತನ-ಎಷ್ಟೇ ಸೂಕ್ಷ್ಮವಾಗಿದ್ದರೂ-ಅಸಹ್ಯವಾಗಿ ಕಾಣಿಸುತ್ತದೆ.

ಹಾಗೆ ಜನಸಾಮಾನ್ಯರಿಗೆ ಕೂಡ ಕಾಣಿಸುವುದು ಇಲ್ಲಿ ಆಶಾವಾದವನ್ನು ಸಾಧ್ಯವಾಗಿಸುತ್ತದೆ.

-ಆಗಸ್ಟ್ 3, 1994

ಭ್ರಷ್ಟಾಚಾರದ ಡೈವೋರ್ಸ್


ಆಸ್ಪತ್ರೆಯಲ್ಲಿ ವೈದ್ಯರೊಡನೆ ಹರಟೆ ಹೊಡೀತಾ ಕುಂತಿದ್ವೆ. ದವಾನ ಬಂದ. 'ನಾಳೀಕೆ ರಜ ಬೇಕು ಸಾ' ಅಂದ. 'ಯಾಕೋ' ಅಂದರು ವೈದ್ಯರು. 'ಸಳಿಜರ ಬತ್ತದೆ ಸಾ' ಅಂದ ಅವ! ನಾಳೆ ಬರುವ ಕಾಯಿಲೆಯನ್ನು ಇಂದೇ ಊಹಿಂಸಿದ್ದ! 'ಅದೆಂಗೆ ಗೊತ್ತು?' ಕೇಳಿದರು ವೈದ್ಯರು 'ಮೈಕೈ ಒಡ್ತ ಆದೆ ಸಾ' ಅಂದ ಅವ!

ಎಂತಹ ಕಾಲಜ್ಞಾನಿ ಆತ!

ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ನಿಗಮ ಇಂತಹ ಕಾಲಜ್ಞಾನಿಗಳ ಆಗರ ಅಂದ್ರೆ ನಂಬ್ತೀರಾ?

ಒಮ್ಮೆ ಹೀಗಾಯಿತು. ಕೈಗಾರಿಕೆ ಪ್ರಾರಂಭಿಸಲು ಸ್ಥಳ ಕೋರಿ ಅರ್ಜಿಯೇ ಬಂದಿರಲಿಲ್ಲ, ಭಾವೀ

ಅನಿಕ



▶ ಎಚ್.ಎಲ್. ಕೇಶವಮೂರ್ತಿ

ಅರ್ಜಿದಾರರಿಗೆ ಸ್ಥಳ ಮಂಜೂರು ಮಾಡಿದರು!

ಭಾವೀ ಅರ್ಜಿದಾರರು ಮುಖ್ಯಮಂತ್ರಿಗಳ ಸಂತಾನ ಆಗಿದ್ದು ಆಕಸ್ಮಿಕ ಅಷ್ಟೇ!

ಇದನ್ನೂ ಹಗರಣ ಅನ್ನೋ ಹಣೆಪಟ್ಟಿ ಹಚ್ಚಿ ಮುಖ್ಯಮಂತ್ರಿಗಳಿಗೆ ಅಂಟಿಸ್ತಾರೆ!

* * * * *

ಇದು ಪವಾಡಗಳ ದೇಶ.

ಮಹಾಕವಿ ಕಾಳಿದಾಸನ ಕತೆ ಕೇಳೇ ಇರ್ತೀರಿ.

ತಂದೆ ಮುಖ್ಯಮಂತ್ರಿಯೋ, ಉಪಮುಖ್ಯಮಂತ್ರಿಯೋ ಆದರೆ ಸಾಕು. ಮಕ್ಕಳು ವಿವಿಧ ಕ್ಷೇತ್ರಗಳ ಪ್ರಾವೀಣ್ಯತೆ ಪಡೆಯುತ್ತಾರೆ! ಯಡ್ಯೂರಪ್ಪನವರ ಸಂತಾನವನ್ನೇ ನೋಡಿ. ಅಪ್ಪ ಉಪಮುಖ್ಯಮಂತ್ರಿ ಆದರು, ಮಕ್ಕಳು ತಾಂತ್ರಿಕ ತಜ್ಞರಾದರು!

ಈ ತಜ್ಞತೆಯ ಲಾಭ ದೊರಕಬಾರದೆ ರಾಜ್ಯಕ್ಕೆ?

ಕೈಗಾರಿಕೆ ಪ್ರಾರಂಭಿಸಲು ಮುಂದಾದರು

ಸ್ಥಳ ಬೇಕಲ್ಲ?

ತಂದೆ ಉಪಮುಖ್ಯಮಂತ್ರಿ.

ಸರ್ಕಾರದ ಭೂಮಿ ಪಡೆಯಲು ಇಷ್ಟವಿಲ್ಲ, ಬರುತ್ತದೆ ಅಧಿಕಾರ ದುರುಪಯೋಗದ ಕಳಂಕ.

ಆದರೆ... ಕೈಗಾರಿಕೆ ಪ್ರಾರಂಭಿಸದೇ ಹೋದಲ್ಲಿ ರಾಜ್ಯಕ್ಕೆ ತುಂಬಲಾರದ ನಷ್ಟ!

ತುಮುಲದಲ್ಲಿ ಬಿದ್ದರು ಯುವಕರು.

ಜಪಿಸಿದರು ಅಭಿವೃದ್ಧಿ ಮಂತ್ರ!

ಅಭಿವೃದ್ಧಿ ಎದುರು ಕಳಂಕ ತೃಣ ಸಮಾನ.

ಕೈಗಾರಿಕೆ ಅಭಿವೃದ್ಧಿ ನಿಗಮಕ್ಕೆ ಅರ್ಜಿ ಸಲ್ಲಿಸಿದರು.

ಉತ್ಸಾಹಿ ಯುವಕರು. ಕೈಗಾರಿಕೆ ಪ್ರಾರಂಭಿಸಲು ಮುಂದೆ ಬಂದಿದ್ದಾರೆ. ಇದಕ್ಕೆ ಪೂರಕವಾಗಿರಬಾರದೆ ನಿಗಮದ ನಿಲುವು? ಜಾಗ ಹುಡುಕಲು ನಿಂತಿತು ನಿಗಮ. ಆಗ ಅವರ ಕಣ್ಣಿಗೆ ಬಿತ್ತು- 1982ರಷ್ಟು ಹಿಂದೆಯೇ ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದಾಗ ಫಿರೋಜ್‌ಖಾನ್‌ಗೆ ಕೈಗಾರಿಕೆ ಪ್ರಾರಂಭಿಸಲು ಮಂಜೂರು ಮಾಡಿದ್ದ ಒಂಬತ್ತು ಎಕರೆ ಭೂಮಿ. ಅದು ಬರುಡಾಗಿಯೇ ಬಿದ್ದಿತ್ತು, ಕೈಗಾರಿಕೆ ಪ್ರಾರಂಭವಾಗಿಯೇ ಇರಲಿಲ್ಲ, ನಿಗಮದವರು ಕಾನೂನು ಪುಸ್ತಕ ತೆರೆದು ನೋಡಿದರು. ಅದರಲ್ಲಿ ಭೂಮಿ ಮಂಜೂರಾದ ಎರಡು ವರ್ಷಗಳಲ್ಲಿ ಕೈಗಾರಿಕೆ ಪ್ರಾರಂಭಿಸಬೇಕು ಎಂದು ಇತ್ತು, ಅರೆ ಆಗಲೇ ಮಂಜೂರಾಗಿ 25 ವರ್ಷ ಕಳೆದಿವೆ. ಆದರೂ ಕೈಗಾರಿಕೆ ಪ್ರಾರಂಭ ಆಗಿಲ್ಲ, ಭೂಮಿ ಹಿಂಪಡೆದು ಅದರಲ್ಲಿ ಎರಡು ಎಕರೆಯನ್ನು ಈ ಉತ್ಸಾಹಿ ಯುವಕರಿಗೆ ಮಂಜೂರು ಮಾಡಿದರು.

ಅರ್ಜಿ ನೀಡಿದ ಕೆಲವೇ ದಿವಸಗಳಲ್ಲಿ ಇದು ಹೇಗೆ ಸಾಧ್ಯ ಆಯಿತು? ಇದೂ ಹಗರಣ ಅಂತಾರೆ. ತಡಮಾಡಿದ್ರೆ ಲಂಚ ಸಿಗಲಿ ಎಂದು ಹೀಗೆ ಮಾಡ್ತಿದಾರೆ ಅಂತಾರೆ; ದಕ್ಷತೆ ಮೆರೆದರೂ ಹೀಗಂತಾರೆ. ಈ ನಿಗಮ ಇರೋದು ಬಡವರ ಭೂಮಿ ಕಿತ್ತು ಸಿರಿವಂತರ ಬಾಯಿಗೆ ಹಾಕೋಕೆ ಅಂತ ಜರೀತಾರೆ. ಏನು ಸಾಯಬೇಕು ಅದು...

* * * * *

ಯಡ್ಯೂರಪ್ಪನವರ ಗ್ರಹಗತೀನೇ ಕ್ರೂರ ಆಗಿರುವಂತಿದೆ. ಯಾವುಯಾವುದೋ ಒಂದು ಸುತ್ತಂತ ಕುಂತವೆ. ಎಲ್ಲಿಯ ರಾಜಾ ಎಲ್ಲಿಯ ಯಡ್ಯೂರಪ್ಪ? ಆ ರಾಜಾ ಅನ್ನೋ ಕೇಂದ್ರದ ಟೆಲಿಕಾಂ ಮಂತ್ರಿಯಾಗಿದ್ದೋನು ಅದೆಷ್ಟೋ ಕೋಟಿ ಹಗರಣದಲ್ಲಿ ಸಿಗಾಕಿಕೊಂಡನಂತೆ. 176 ಮುಂದೆ ಹತ್ತು ಸೊನ್ನೆ ಹಾಕಬೇಕಂತೆ. ಅಷ್ಟು ದೊಡ್ಡ ಹಗರಣವಂತೆ ಅದು. ಒಂದು ರೀತೀಲಿ ಹಗರಣಗಳ ರಾಜ ಅನ್ನಬಹುದೇನೋ ಅವನ್ನ. ಅವನು ಅಂತ ಭಾರೀ ಹಗರಣ ಮಾಡಿದರೆ ಯಡ್ಯೂರಪ್ಪ ಏನು ಮಾಡ್ತಾರೆ ಪಾಪ. ಇದಕ್ಕೇ ಗ್ರಹಚಾರ ಅನ್ನೋದು.

ರಾಜನ ತೆಗೀರಿ ಅಂತ ಭಾಜಪ ಕೂಗಾಡಿದ್ರು. ಜಯಲಲಿತಾ ಅವನ್ನ ತೆಗೆದ್ರೆ ನಾವು ಸರ್ಕಾರ ಬೆಂಬಲಿಸ್ತೀವಿ ಅಂದ್ರು. ಡಿಎಂಕೆಗೋ ಅದಮ ಸಂಕಟ. 'ರಾಜೀನಾಮೆ ಬಿಸಾಕು' ಅಂದ್ರೆ ಭ್ರಷ್ಟ ಅಂತ ಒಪ್ಕೊಂಡಂಗೆ. 'ಬ್ಯಾಡ' ಅಂದ್ರೆ ಜನ ಒಪ್ಪಲ್ಲ, ಅದಕೆ ಬಲೇ ಹುಷಾರೀಲಿ ಮುಳ್ಳು ಮೇಲಿನ ಮಲ್ಲು ಪಂಚೆ ಬಿಡ್ಸಿದಂಗೆ 'ಅವನೇನೋ ಅಪ್ಪಟ ಬಂಗಾರ. ಸಂಸತ್ತು ಸುಲಲಿತವಾಗಿ ನಡೆಯಲಿ ಎಂದು ರಾಜೀನಾಮೆ ನೀಡ್ತಿದಾನೆ' ಅಂತು. ಅಷ್ಟೇ ಆಗಿದ್ರೆ ನಿರಾಳವಾಗಿರಬಹುದಿತ್ತು, ಬಿಜೆಪಿ ತಾನೆ ರಾಜಾ ರಾಜೀನಾಮೆಗೆ ಪಟ್ಟು ಹಿಡಿದದ್ದು. ಅದಕ್ಕೆ ಬುದ್ಧಿ ಕಲಿಸಬೇಕು ಅಂತಾವ ಯಡ್ಯೂರಪ್ಪನವರ ಬೆಂಗಳೂರಿನ ಸರ್ಕಾರಿ ಜಾಗಾನಾ ಬಲೇ ಜನ ಲಪಟಾಯಿಸಿದ್ದರಂತೆ. ಇವ್ರು ಇವರ ತರಹನೆ ಸ... ಭೂಮಿ ಲಪಟಾಯಿಸಿರೊ ಕಳ್ಳ ಖದೀಮರನ್ನೆಲ್ಲ ಹಿಡಿದು ಹಾಕಬೇಕು ಅಂತಾವ ಸರಕಾರ ಏನು ಮಾಡ್ತು? ಸದನ ಸಮಿತಿ ರಚಿಸಿತು. ಅದರ ಕ... ನ್ಯಾಯ ಒದಗಿಸಬೇಕಾದ ಎಸ್ಪಿ ಸಾಹೇಬರು ಭೂ... ಒತ್ತುವರಿ ಮಾಡಿಕೊಂಡಿರುವುದು ಬಿತ್ತಂತೆ. ಅವ... ಸಮಿತಿ ಕರುಸ್ತಂತೆ.

ಅವರ ನಡುವಿನ ಮಾತು ಈ ಧಾಟಿಯಲ್ಲಿತ್ತು...

'ನೋಡಿ ಇದು ನಿಮ್ಮ ಜಮೀನಿನ ನಕ್ಷೆ... ನಿ... ಇಷ್ಟು ಜಮೀನನ್ನ ಒತ್ತುವರಿ ಮಾಡಿಕೊಂಡಿದ್ದೀರಿ...'

'ಅದೇನೋ ನನಗೆ ಗೊತ್ತಿಲ್ಲ.'

'ನಿಮ್ ಜಮೀನು. ಒತ್ತುವರಿ ಮಾಡಿಕೊಂಡಿ... ನಿಮಗೇ ತಿಳಿದಿಲ್ಲ ಅಂದ್ರೆ ಹೇಗ್ರಿ?'

'ಈ ಜಮೀನು ನನ್ದಲ್ಲ.'

'ಇನ್ನಾರ್ದು?'



ಭೂಹಗರಣವನ್ನು ಸಂಸತ್ತಿನಲ್ಲಿ ಎತ್ತಿ ಅವರ ಮಾನ ಹರಾಜಾಕ್ತೀವಿ ಅಂತ ಕುಂತವೆ.

ಇದೆಲ್ಲ ಗೊತ್ತಿರುವುದರಿಂದಲೇ ಯಡ್ಯೂರಪ್ಪನವರು ಪತ್ರಿಕಾಗೋಷ್ಠಿ ಕರೆದಿದ್ರು. ನಾನೇನೂ ಹೊಸ ಜಾಡು ಹಿಡಿದಿಲ್ಲ, ಹಿಂದಿನೋರು ನಡೆದ ದಾರೀಲೇ ಹೋಗಿದೀನಿ ಅಂದವ್ರೆ. ಅಲ್ಲ ಹಿಂದಿನವರೂ ಕಕ್ಕ ತಿಂದಿದ್ರು, ನಾನು ತಿಂದೆ ಅಂದ್ರೆ... ಜನ ಥೂ ಛೀ ಅನ್ನಲ್ವಾ... ಅದ್ರಬದಲು ನಿಮ್ಮ ಅಧಿಕಾರಿಗಳ ದಾರಿ ಹಿಡಿದಿದ್ರೆ ಸುಗುಮವೇನೋ ಅಂತ...

ಅದೇನು ಅಧಿಕಾರಿ ಮಾರ್ಗ ಅಂತೀರಾ. ಈ ಐಎಎಸ್ಸು, ಐಪಿಎಸ್ಸು ಇಂತಹ ಪರೀಕ್ಷೆಗಳು ಅಂದ್ರೆ ಸುಮ್ಮನೆ ಆಯ್ತಾ. ಅವ ಪಾಸು ಮಾಡಬೇಕಾದ್ರ ಭಲೇ ಜಾಣರೇ ಆಗಿರಬೇಕು. ಪಾಸು ಅಂತ ಆದಮೇಲೆ ಅವರಿಗೆ ತರಬೇತಿನೂ ಕೊಡ್ತಾರಂತೆ. ಅಲ್ಲಿ ನಗರಗಳಲ್ಲಿರುವ ಐನಾತಿ ಭೂಮೀನ ಮುಗುಂ ಆಗಿ ಹೆಂಗೆ ಗುಳುಂ ಅನ್ನಿಸಬೇಕು ಅನ್ನೋದ್ನೂ ಹೇಳಿಕೊಡ್ತಾರೋ ಏನೋ ತಿಳಿದಿಲ್ಲ, ಯಾಕೇಂದ್ರೆ

'ನನ್ನ ಹೆಂಡ್ತೀದು.'

'ಹೆಂಡ್ತೀದು ಅಂದ್ರೆ ಒಟ್ಟು ಜವಾಬ್ದಾರಿ ನಿಮ... ಇರಲ್ವೇನ್ರಿ?'

'ನಾನು ಆಕೇನ ಡೈವೋರ್ಸ್ ಮಾಡಿದೀನಿ'

'ಅವರೆಲ್ಲಿರ್ತಾರೆ?'

'ನಮ್ ಮನೇಲೆ. ಮಹಡೀಲಿ ಆಕೆ ಇರ್ತಾರೆ. ನಾನು ಕೆಳಗೆ ಇರ್ತೀನಿ.'

ಹೌದು ಆತನ ಮಾತಿನಲ್ಲಿ ಸುಳ್ಳಿರಲಿಲ್ಲ.

ಕಾನೂನಿನಲ್ಲಿ ಡೈವೋರ್ಸ್, ವಾಸ್ತವದಲ್ಲಿ ಅಲ್ಲ...

ಇದು ಭ್ರಷ್ಟಾಚಾರದ ಡೈವೋರ್ಸ್!

ಸನ್ಮಾನ್ಯ ಯಡ್ಯೂರಪ್ಪನವರೂ ಈ ಎಸ್ಪಿ ಸಾಹೇಬರ ಮಾರ್ಗ ಹಿಡಿದರೆ ಒಳಿತೇನೋ. ಒಟ... ಕುಟುಂಬದಲ್ಲಿದ್ದುಕೊಂಡೇ ತಮಗೂ ತಮ್ಮ ಮಕ್ಕಳಿಗೂ ಯಾವುದೇ ಸಂಬಂಧ ಇಲ್ಲ ಎಂದು ಘೋಷಿಸಿದರೆ ಹೇಗೆ....

ಎಚ್ಚರದಿಂದಲೂ ಓದುವವರಿರುತ್ತಾರೆ!

ಕೆಳೆದ ಬಾರಿ ನಾನು ಕಳುಹಿಸಿದ್ದ 'ಸ್ವರಚಿತ' 'ಎಕ್ಕ ರಾಜ ರಾಣಿ' ಕವನವನ್ನು 'ಹೊಗಳಿಕೆ ತೆಗಳಿಕೆ'ಯಲ್ಲಿ ಪ್ರಕಟಿಸಿದ್ದಕ್ಕೆ ಧನ್ಯವಾದಗಳು. ಈಗ 'ಎಡವಟ್ಟಾಯ್ತು' ಎಂಬ ಮತ್ತೊಂದು 'ಸ್ವರಚಿತ' ರಾಜಕೀಯ ಕವನವನ್ನು ಕಳುಹಿಸುತ್ತಿದ್ದೇನೆ. ಎಲ್ಲರೂ ಎಂಜಾಯ್ ಮಾಡಲೆಂದು ಇದನ್ನು ಪ್ರಕಟಿಸಬೇಕೆಂದು ಕೋರುತ್ತೇನೆ!

ಯಡ್ಡಿ: ಎಡವಟ್ಟಾಯ್ತು
ಬಿಜೆಪಿ ಕಿತ್‌ಹೋಯ್ತು
ಕೋಟಿಕೋಟಿ ತಿಂದ ಪಾರ್ಟಿ 101 ಆಯ್ತು

ಕಟ್ಟಾ ಮಗ: ಹಗಲೊತ್ತಲ್ಲೆ ಕದ್ದಿದ್ದಾಯ್ತು
ಜನರ ಬೆನ್ನಿಗೆ ಚೂರಿ ಹಾಕಿದ್ದಾಯ್ತು
ಕಂಬಿ ಎಣಿಸಿದ್ದಾಯ್ತು
ಬಿಜೆಪಿ ಕಿತ್‌ಹೋಯ್ತು

ಕಾರಣವಿದ್ದೇ ಜೈಲಿನ ಗೇಟು ಝಳ್ ಎಂದಾಯ್ತು
ಹಗಲೊತ್ತಲೇ ಊಟ ಮಾಡಿ
ಸಿಕ್ಕಿಬಿದ್ದು ಹಿಂಗಾಗೋಯ್ತು
ಕೈಗೆ ಕೋಳ ಹಾಕಿ ಎದೆ ಝಳ್ ಎಂದಂಗಾಯ್ತು

ಯಡ್ಡಿ: ಹಾರಾಡುವ ರೆಡ್ಡಿಗಳ ಪಾದದಾಣೆಗೂ ಹೇಳುವೆನು
ಲೂಸ್ ವರ್ತೂರನ ಕೈ ಕಾಲುಹಿಡಿದೆ
ಮಂತ್ರಿಗಿರಿ ಬೇಕು ಎಂದರೆ ಕೊಡುವೆನು ನಾನು
ರವಿ ಕ್ಷಮಿಸಬೇಕು
ನೀನು 4 ನೇ ಬಾರಿ ಫೇಲು
ಮುಮ ನಾನು, ಶಾಸಕ ನೀನು ಲೆಕ್ಕ ಚಾಲು ಆಯ್ತು

ರವಿ: ಗೂಟದ ಕಾರು ಸಿಕ್ಕಂಗಾಯ್ತು
ಎಡವಟ್ಟಾಯ್ತು
ಕಾರು ನಿಂತೋಯ್ತು
ಬಿಜೆಪಿ ಕಿತ್‌ಹೋಯ್ತು
ಕೋಟಿಕೋಟಿ ತಿಂದ ಪಾರ್ಟಿ 101 ಆಯ್ತು

ಯಡ್ಡಿ: ಬೆಳಗಾಗೆದ್ದು ಕದ್ದಿದ್ದಾಯ್ತು
ಮಾನ ಬಿಟ್ಟು ಕೂತಿದ್ದಾಯ್ತು
ಹರಳೆಣ್ಣೆ ಕುಡಿದು ರೆಡ್ಡಿಗಳ ಮುಂದೆ ನಿಂತಿದ್ದಾಯ್ತು

ವರ್ತೂರ್: ಬುಲಾವು ಬಂತು
ಮಾರಿ ಕುಳಿತೆನು ಸೀಟನ್ನೇ
ಸೇಲ್ ಆಗಿ ಹೋಯ್ತು
ಸಿಕ್ಕಿದ್ದು 50 ಕೋಟಿ.
ನಿಂತಲ್ಲೇ ಡೀಲು
ಮಾಡಿ ಮುಗಿಸಿದೆವು ನಾವಿಂದು,
ಸಂದೊಳ್ಗೆ ಛಾನ್ಸು,
ಬನ್ನಿ ತಿನ್ನಿ ಸ್ವೀಟನ್ನು,



ಇತರೆ ಶಾಸಕರು: ಶಾಸಕನಾಗಿ ಬಾಳು ಕೊನೆಗೂ
ಕ್ಲೋಸ್ ಆಗಿಹೋಯ್ತು
ಯಡ್ಡಿ: ಎಡವಟ್ಟಾಯ್ತು
ಬಿಜೆಪಿ ಕಿತ್‌ಹೋಯ್ತು
ಕೋಟಿ ಕೋಟಿ ತಿಂದ ಪಾರ್ಟಿ 101 ಆಯ್ತು....

-ನಿರಂಜನ್ ಪಟೇಲ್, ಹುಣಸಿನಹ...

"1939 ರಲ್ಲಿ ಬಿಎ ಪಡೆದು, ಎರಡು ವರ್ಷ ಹಿಂದೆ ಹೋಗಿ 1937 ರ... ಎಂ.ಎ ಪದವಿ ಪಡೆದ ಜಿ. ವೆಂಕಟಸುಬ್ಬಯ್ಯ...." ನಿಜಕ... ಗ್ರೇಟ್!

ನಿಮ್ಮ ಪತ್ರಿಕೆಯನ್ನು ಪ್ರೀತಿಯಿಂದಷ್ಟೇ ಅಲ್ಲ... ಎಚ್ಚರದಿಂದಲೂ ಓದುವವರಿರುತ್ತಾರೆ! ಇಂತ... ತಪ್ಪುಗಳಾಗದಂತೆ ಗಮನವಿರಲಿ ಎಂದು ಆಶಿಸುತ್ತೇನೆ.

-ರಂಗಸ್ವಾಮಿ, ಮೈಸೂರ...

ನಮ್ಮ 'ಸೌಹಾರ್ದ ದೀಪಾವಳಿ' ಬಗ್ಗೆ ಚೆಂದವಾ... ಬರೆದದ್ದಕ್ಕೆ ಧನ್ಯವಾದಗಳು.

ನಿಮ್ಮ ತಂಡ ನಮಗೆ ಇನ್ನಷ್ಟು ಆತ್ಮವಿಶ್ವಾಸ ಮತ್ತು ಸ್ಫೂರ್ತಿಯನ್ನು ನೀಡಿದೆ.

ನಾವು ಕಟ್ಟುವೆವು ಸೌಹಾರ್ದದ ನಾಡನ್ನು!

-ಶಶಿಧರ ಹೆಮ್ಮಾಡಿ, ಕುಂದಾಪು...


'ಭೂತಾಯಿ 33 ಮಕ್ಕಳನ್ನು ಹಡೆದಾಗ' ಎಂಬ ಸಂಪಾದಕೀಯ ತುಂಬ... ಚೆನ್ನಾಗಿತ್ತು. ಮಾನವೀಯತೆಯನ್ನು ಮರೆದ ಅಂತಹ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು...

-ವಿದ್ಯಾಧರ ರೈ, ಮದಿಕೇ...

ಮೋಸದ 'ಕಾಂಟ್ರಾಕ್ಟ್' ಅರ್ಜುನ್ ಸರ್ಜಾ!

ಒಂದೇ ಒಂದು ವಾರದ ಮುಂಚೆಯಷ್ಟೇ ಟ್ರಾಕ್ಟ್' ಅನ್ನೋ ಸಿನಿಮಾವೊಂದು ಹೂರ್ತವನ್ನಾಚರಿಸಿಕೊಂಡಿತು. ಸೌತ್ ಯಾದ ಖ್ಯಾತನಟ, ನಮ್ಮ ಕನ್ನಡದ ಅರ್ಜುನ್ ಈ ಚಿತ್ರದ ಹೀರೋ. ಅರ್ಜುನ್ ಜೊತೆಗೆ ಗು ನಟ ಜೆಡಿ ಚಕ್ರವರ್ತಿ ಕೂಡಾ ಸುತ್ತಿದ್ದಾರೆ.

ಈ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ರ್ಜುನ್ ಸರ್ಜಾ, ಜೆಡಿ ಚಕ್ರವರ್ತಿ ಮುಂತಾದವರು ಸಿನಿಮಾ ಕನ್ನಡದಲ್ಲಿ ನಿರ್ಮಾಣವಾಗುತ್ತಿದ್ದು, ತೆಲುಗಿಗೂ ಡಬ್ ಮಾಡುವ ಸಾಧ್ಯತೆಯಿದೆ" ದ್ದರು. "'ಶ್ರೀ ಮಂಜುನಾಥ' ಚಿತ್ರದ ನಂತರ ಹತ್ತು ವರ್ಷ ಕನ್ನಡದಲ್ಲಿ ಯಾವ ಾಗಳಲ್ಲೂ ನಟಿಸಲು ಸಾಧ್ಯವಾಗಿರಲಿಲ್ಲ. ಾ ಒಳ್ಳೆಯ ಸ್ಕ್ರಿಪ್ಟು ಸಿಕ್ಕಿದ್ದರಿಂದ ಈ ಚಿತ್ರದಲ್ಲಿ ುತ್ತಿದ್ದೇನೆ" ಎಂದು ಸರ್ಜಾ ಪತ್ತುಕೊಂಡಿದ್ದರು.



ಈಗ ಬಂದಿರುವ ಲೇಟೆಸ್ಟ್ ಸುದ್ದಿಯೇನೆಂದರೆ ಕನ್ನಡದಲ್ಲಿ ಆರಂಭವಾದ 'ಕಾಂಟ್ರಾಕ್ಟ್' ಚಿತ್ರ ಬರ್ ತಿಂಗಳಲ್ಲೇ ತೆಲುಗಿನಲ್ಲಿ ಆರಂಭವಾಗಿ ಬಹಳಷ್ಟು ಭಾಗದ ಚಿತ್ರೀಕರಣವನ್ನು ಸಲಾಗಿದೆ! ಅಂದರೆ ಅಂದು ಈ ರವನ್ನೆಲ್ಲಾ ಅರ್ಜುನ್ ಸರ್ಜಾ, ಜೆಡಿ ಚಕ್ರವರ್ತಿ ಮಾಗಿ ಪ್ರತಿಯೊಬ್ಬರೂ ಇಲ್ಲಿ ಮುಚ್ಚಿಟ್ಟಿದ್ದರು.

ಈ ಸಿನಿಮಾವನ್ನು ಜೆಡಿ ಚಕ್ರವರ್ತಿ ಮತ್ತು ಗೋಪಾಲ್ ವರ್ಮಾ ಜೊತೆಗೆ ಅಸಿಸ್ಟೆಂಟ್ ಆಗಿದ್ದ ಸಮೀರ್ ಎಂಬಾತ ನಿರ್ದೇಶಿಸುತ್ತಿದ್ದಾನೆ. ಈತ ಉಪೇಂದ್ರರಿಗೆ 'ಶ್ರೀಮತಿ' ಚಿತ್ರದಲ್ಲೂ ಸಹ ಸಹಾಯಕನಾಗಿದ್ದ. ಕನ್ನಡದ ಗಂಧ ಗಾಳಿಯೇ ಗೊತ್ತಿಲ್ಲದ ಸಮೀರ್ ಕಂಠೀರವ ಸ್ಟುಡಿಯೋದಲ್ಲಿ ದಿಗಿಲಿಗೆ ಬಿದ್ದವನಂತೆ ಆಡುತ್ತಿದ್ದಾಗಲೇ ಈ 'ಕಾಂಟ್ರಾಕ್ಟ್'ನ ಹಿಂದೆ ಏನೋ ಮಸಲತ್ತಿದೆ ಎಂಬ ಅನುಮಾನ ಉದ್ಭವಿಸಿತ್ತು. ಈಗದು ನಿಜವಾಗಿದೆ.

ಇಲ್ಲಿನ ಮುಖ್ಯ ಅಂಶ ಯಾವುದೆಂದರೆ: ಈ ಮೊದಲೇ ಈ ಚಿತ್ರವನ್ನು ತೆಲುಗಲ್ಲಿ ಆರಂಭಿಸಿ, ಅಲ್ಲಿ ಚಿತ್ರೀಕರಣಗೊಂಡಿರುವ ಭಾಗಗಳಿಗೆ ಇಲ್ಲಿ ಕನ್ನಡದ ಒಂದಿಷ್ಟು ನಟರನ್ನು ಬಳಸಿಕೊಂಡು ಅಲ್ಪಸ್ವಲ್ಪ ದೃಶ್ಯಗಳನ್ನು ಸೇರಿಸಿ ಯಥಾವತ್ತು ತೆಲುಗು ಚಿತ್ರವನ್ನೇ ಡಬ್ ಮಾಡುವ ಸಂಚು ಇದು ಎಂಬುದು.

ವರ್ಷಕ್ಕೆ ಮುನ್ನ ಕನ್ನಡದಿಂದ ತೆಲುಗು ಚಿತ್ರೋದ್ಯಮಕ್ಕೆ ಹೋಗಿ ಅಲ್ಲಿ ಒಂದಷ್ಟು ಫ್ಲಾಪ್ ಸಿನಿಮಾಗಳನ್ನು ನಿರ್ದೇಶಿಸಿ, ನಿರ್ಮಿಸಿದ್ದ ಮಧುಸೂದನ್ ಅಲಿಯಾಸ್ ಮದನ್ ಎಂಬ ಆಸಾಮಿ 'ಮರ್ಮ' ಎಂಬ ತೆಲುಗು ಸಿನಿಮಾವನ್ನು ಕನ್ನಡೀಕರಿಸಲು ಇಲ್ಲಿಗೆ ಬಂದು ಸಿಕ್ಕುಬಿದ್ದಿದ್ದ. ತಲೆಬುಡವಿಲ್ಲದ ಹಾರರ್ ಸಿನಿಮಾಗಳಿಗೇ ಹೆಸರಾದ ರಾಮ್‌ನಾರಾಯಣ್ ಎಂಬ ನಿರ್ದೇಶಕ ಇತ್ತೀಚೆಗೆ 'ಬೊಂಬಾಟ್ ಕಾರ್' ಎಂಬ ತಮಿಳು ಸಿನಿಮಾವನ್ನು ಕನ್ನಡೀಕರಿಸಿ ಬಿಡುಗಡೆ ಮಾಡಿದ್ದ.



ಇತ್ತೀಚೆಗೆ ನಿರ್ಮಾಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್ ಚಂದ್ರಶೇಖರ್ ಅವರು ಬಿ. ರಾಮಮೂರ್ತಿ ನಿರ್ದೇಶನದ ಬೇಬಿ ಶ್ಯಾಮಿಲಿ ನಟಿಸಿರುವ 'ಶ್ವೇತಾನಾಗರ' ಎಂಬ ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿ ಚಾನೆಲ್ ರೈಟ್ಸ್ ಪಡೆದಿದ್ದರು. ಈ ಚಿತ್ರ ಡಬ್ಬಿಂಗ್ ಚಿತ್ರವೆಂದು ನಾಗಾಭರಣ ನೇತೃತ್ವದ ಸಮಿತಿ ವರದಿ ನೀಡಿತ್ತು. ಕರ್ನಾಟಕದಲ್ಲಿ ಡಬ್ಬಿಂಗ್ ಚಿತ್ರಗಳ ಪ್ರಸಾರಕ್ಕೆ ಅವಕಾಶವಿಲ್ಲದಿರುವುದರಿಂದ ಸುವರ್ಣ ಚಾನೆಲ್‌ನಲ್ಲಿ 'ಶ್ವೇತನಾಗರ' ಚಿತ್ರ ಪ್ರಸಾರವಾಗಿ ಚಿತ್ರರಂಗದಲ್ಲಿ ಕೋಲಾಹಲವನ್ನೇ ಎಬ್ಬಿಸಿತ್ತು.

ಮೊದಮೊದಲು ಕೆ.ಸಿ.ಎನ್. ಚಂದ್ರಶೇಖರ್, ಅಜಂತಾ ರಾಜು ಮತ್ತು ಎಚ್.ಎನ್. ಮಾರುತಿ ಎಂಬ ಹಿರಿಯ ತಲೆಗಳು 'ಶ್ವೇತನಾಗರ' ಡಬ್ಬಿಂಗ್ ಚಿತ್ರ ಅಲ್ಲವೇ ಅಲ್ಲ ಎಂದು ವಾದಿಸಿದ್ದರು. ನಂತರ ಬಂಡವಾಳ ಬಟಾಬಯಲಾದಾಗ ಈ ಮೂವರೂ ಮಹಾನ್ ಪ್ರಾಮಾಣಿಕರು 'ತಪ್ಪಾಗಿದೆ ಕ್ಷಮಿಸಿ' ಎಂದು ಅಂಗಲಾಚುವ ಸ್ಥಿತಿ ಬಂದೊದಗಿತ್ತು.

ಡಬ್ಬಿಂಗ್ ಪರವಾದ ವಾದವಿವಾದಗಳು ತಾರಕಕ್ಕೇರಿರುವ ಇದೇ ಸಂದರ್ಭದಲ್ಲಿ ಅರ್ಜುನ್ ಸರ್ಜಾರಂಥ ಗಣ್ಯ ನಟರು ಕನ್ನಡಕ್ಕೆ ದ್ರೋಹ ಬಗೆಯುವ 'ಕಾಂಟ್ರಾಕ್ಟ್'ನಲ್ಲಿ ತೊಡಗಿರುವುದು ದುರಂತವಲ್ಲದೆ ಮತ್ತಿನ್ನೇನು?


• ಅರುಣ್.ಜಿ

ೀಲು ಸುತ್ತೋರ ಐಲು!

ಫಿಲ್ಮ್ ಚೇಂಬರ್ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ಸದ್ಯಕ್ಕೆ ಬಚಾವಾಗಿದ್ದಾರೆ.

ಳೆದ ವಾರ ಸಾ.ರಾ.ಗೋವಿಂದು ಮತ್ತು ರಾಕ್‌ಲೈನ್ ವೆಂಕಟೇಶ್ ನೇತೃತ್ವದಲ್ಲಿ ದಿಢೀರನೆ ಚೇಂಬರ್ ಪದಾಧಿಕಾರಿಗಳು ಲರ ವಿರುದ್ಧ ಬಂಡೆದ್ದು ಹದಿನೈದು ದಿನಗಳೊಳಗೆ ಪಾಟೀಲರು ಅಧ್ಯಕ್ಷ ಕುರ್ಚಿಯನ್ನು ಖಾಲಿ ಮಾಡಬೇಕು ಗಡುವು ನೀಡಿದ್ದರು. ಆಗ ಪಾರ್ವತಮ್ಮ ರಾಜ್‌ಕುಮಾರ್ ಮತ್ತು ಅಂಬರೀಶ್ ಮಧ್ಯ ಪ್ರವೇಶಿಸಿ ಪಾಟೀಲರ -ಮರ್ಯಾದೆಯನ್ನು ಚೇಂಬರ್ ಪದಾಧಿಕಾರಿಗಳು ಬಹಿರಂಗವಾಗಿ ಹರಾಜು ಹಾಕುವುದನ್ನು ತಪ್ಪಿಸಿದರು.

ಸೇ ಆದರೂ ಜನವರಿ 28ರೊಳಗೆ ಚುನಾವಣೆಯನ್ನು ಘೋಷಿಸಬೇಕು ಎಂದು ಪಾಟೀಲರಿಗೆ ಉದ್ಯಮದ ರೆಲ್ಲಾ ಆದೇಶ ನೀಡಿದ್ದಾರೆ. ಅಷ್ಟೇ ಅಲ್ಲ, ಜನವರಿಯಲ್ಲಿ ಚುನಾವಣೆಯಾಗುವತನಕ ಪಾಟೀಲರು ಯಾವುದೇ ನಿರ್ಣಯನ್ನು ಏಕಪಕ್ಷೀಯವಾಗಿ ಘೋಷಿಸಕೂಡದು ಎಂದು ಆದೇಶಿಸಿದ್ದಾರೆ. ವಾಸ್ತವವಾಗಿ ಇದಕ್ಕೆಲ್ಲ ಮುಖ್ಯಕಾರಣ ಯನ್ಸ್‌ನವರು ಚೇಂಬರ್ ವಿರುದ್ಧ ಹೂಡಿರುವ 25 ಕೋಟಿ ರೂ. ಮಾನನಷ್ಟ ಮೊಕದ್ದಮೆ.



ಆರಂಭದಲ್ಲಿ ಪರಭಾಷಾ ಚಿತ್ರಗಳ ವಿರುದ್ಧದ ಹೋರಾಟಕ್ಕೆ ಪಾಟೀಲರನ್ನು ಎತ್ತಿಕಟ್ಟಿದ್ದೇ ಚೇಂಬರ್‌ನ ಪದಾಧಿಕಾರಿಗಳು. ಆದರೆ ರಿಲಯನ್ಸ್‌ನವರು ಮಾನನಷ್ಟ ಮೊಕದ್ದಮೆ ಹೂಡಿದ ಕೂಡಲೇ ಅವರೆಲ್ಲರ 'ಕನ್ನಡ ಪ್ರೇಮ'ದಲ್ಲಿ ಬದಲಾವಣೆಯಾಗಿದೆ. ಈಗ ರಿಲಯನ್ಸ್‌ನವರನ್ನು ಮೆಚ್ಚಿಸಲು 'ನಾ ಮುಂದು, ತಾ ಮುಂದು' ಎಂಬಂತೆ ಚೇಂಬರ್‌ನ ಪದಾಧಿಕಾರಿಗಳಲ್ಲಿ ಪೈಪೋಟಿ ನಡೆಯುತ್ತಿದೆ. "ಒಮ್ಮೆ ಪಾಟೀಲರನ್ನು ಅಧಿಕಾರದಿಂದ ಇಳಿಸಿ. ಅನಂತರ ನಾವು ಕೇಸ್ ವಾಪಸ್ ಪಡೆಯುತ್ತೇವೆ" ಎಂದು ರಿಲಯನ್ಸ್ ಸಂಸ್ಥೆಯವರು ಪಟ್ಟು ಹಿಡಿದು ಕುಳಿತಿದ್ದಾರೆ.

ಇದರ ಜೊತೆಗೆ ರಿಲಯನ್ಸ್ ಜೊತೆ ಸಂಬಂಧ ಕುದುರಿಸಿಕೊಂಡರೆ ವಿಶ್ವದಾದ್ಯಂತ ತಮ್ಮ ಚಿತ್ರಗಳ ಬಿಡುಗಡೆಗೆ ಸಹಾಯವಾಗುತ್ತದೆ ಎಂಬ ಆಸೆ ಕನ್ನಡದ ನಿರ್ಮಾಪಕರನ್ನು ಕಾಡುತ್ತಿದೆ.

ಪರಭಾಷಾ ಚಿತ್ರಗಳ ವಿರುದ್ಧ ಕನ್ನಡ ಚಿತ್ರೋದ್ಯಮ ಸಾರಿದ್ದ ಸಮರದ ಕ್ಲೈಮಾಕ್ಸ್‌ನಲ್ಲಿ ಅದೇ ಸಮರದಲ್ಲಿ ಅತ್ಯುತ್ಸಾಹದಲ್ಲಿ ಪಾಲ್ಗೊಂಡು ಮುನ್ನುಗ್ಗಿದ್ದ ದಂಡನಾಯಕ ಬಸಂತಕುಮಾರ್ ಪಾಟೀಲ್ 'ದಂಡ' ತೆರಲಿದ್ದಾರೆ. ಅದು ವಿಷಾದನೀಯ.



ಅಲೆಮಾರಿ ಹುಡುಗರು

ಪುನೀತ್ ರಾಜ್‌ಕುಮಾರ್, ಶ್ರೀನಗರ ಕಿಟ್ಟಿ ಮತ್ತು ಲೂಸ್ ಮಾದ ಯಾನೆ ಯೋಗೇಶ್ ಇವರೆಲ್ಲ ಮೊದಲ ಬಾರಿಗೆ ಒಟ್ಟಾಗಿ ತಮಿಳಿನ 'ನಾಡೋಡಿಗಳ್' ಚಿತ್ರದ ಕನ್ನಡ ಅವತರಣಿಕೆಯಲ್ಲಿ ನಟಿಸುತ್ತಿರುವುದು ನಿಮಗೆಲ್ಲಾ ಗೊತ್ತಿದೆ. 'ನಾಡೋಡಿಗಳ್' ಎಂದರೆ 'ಅಲೆಮಾರಿ'ಗಳು ಎಂದರ್ಥ. ಆದ್ದರಿಂದ ಈ ಚಿತ್ರಕ್ಕೆ 'ಅಲೆಮಾರಿಗಳು' ಎಂದೇ ಹೆಸರಿಡುತ್ತಾರೆ ಎಂಬ ಸುದ್ದಿ ಆರಂಭದಲ್ಲಿ ಹರಡಿತ್ತು. ಆದರೆ ಈ ಟೈಟಲ್ ಅಶ್ವಿನಿ ರಾಮಪ್ರಸಾದ್ ಅವರ ಸಹೋದರ ಕೃಷ್ಣಪ್ರಸಾದ್ ಕೈಲಿತ್ತು. ಅವರು ಯಾವುದೇ ಕಾರಣಕ್ಕೂ ಈ ಟೈಟಲನ್ನ ನೀಡುವುದಿಲ್ಲವೆಂದು ಹಠಹಿಡಿದು ಕುಳಿತರು. ಶಿವರಾಜ್‌ಕುಮಾರ್ ಅಭಿನಯದ 'ಮೈಲಾರಿ' ಚಿತ್ರ ಆರಂಭವಾದಗಲೂ ಅಶ್ವಿನಿ ರಾಮಪ್ರಸಾದ್ ಇದೇರೀತಿ ಟೈಟಲ್ ತನ್ನ ಬಳಿ ಇದೆಯೆಂದು ಗಟ್ಟಿಯಾಗಿ ಕುಳಿತಿದ್ದರು. ಒಂದು ಲೆಕ್ಕಾಚಾರದ ಪ್ರಕಾರ ಅಶ್ವಿನಿ ರಾಮಪ್ರಸಾದ್ ಸುಮಾರು 25ಕ್ಕೂ ಹೆಚ್ಚು ಈ ರೀತಿಯ ಟೈಟಲ್‌ಗಳನ್ನು ರಿಜಿಸ್ಟರ್ ಮಾಡಿಟ್ಟುಕೊಂಡಿದ್ದಾರಂತೆ! ಮುಂದೊಂದು ದಿನ ಅವೆಲ್ಲವೂ ಸಿನಿಮಾಗಳಾಗಬಹುದು.

ಇದೀಗ ಈ ಚಿತ್ರಕ್ಕೆ 'ಹುಡುಗರು' ಎಂದು ಸಿಂಪಲ್ಲಾಗಿ ಹೆಸರಿಟ್ಟಿದ್ದಾರೆ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 1-12-2010 RNI No. KARKAN20



ಸೂರಿ ಈಗ ಕೋಟಿ ನಿರ್ದೇಶಕ !

'ಜಾಕಿ' ಚಿತ್ರದ ನಂತರ ಸೂರಿ ಒಂದು ಸಿನಿಮಾವನ್ನು ನಿರ್ದೇಶಿಸಲು ಒಂದು ಕೋಟಿ ರೂ. ಸಂಭಾವನೆ ಪಡೆಯುತ್ತಿದ್ದಾರೆ. ರಾಮು ಈ ಚಿತ್ರದ ನಿರ್ಮಾಪಕ. ಚಾಲೆಂಜಿಂಗ್ ಸ್ಟಾರ್ ದರ್ಶನ್ ಈ ಚಿತ್ರದ ನಾಯಕ.

ಕನ್ನಡ ಚಿತ್ರರಂಗದಲ್ಲಿ ಕೋಟಿ ರೂಪಾಯಿ ಸಂಭಾವನೆ ಪಡೆಯುವ ಎರಡನೇ ನಿರ್ದೇಶಕ ಎಂಬ ಗೌರವಕ್ಕೆ ಸೂರಿ ಪಾತ್ರರಾಗಿದ್ದಾರೆ. ಸೂರಿಯವರ ಆಪ್ತ ಸ್ನೇಹಿತ ಯೋಗರಾಜ್ ಭಟ್ ಒಂದು ಕೋಟಿ ಸಂಭಾವನೆ ಪಡೆದ ಮೊದಲ ನಿರ್ದೇಶಕ.

ಯೋಗರಾಜ್ ಭಟ್ ಮತ್ತು ಸೂರಿ ಇಂತಹ ಬಡ್ತಿ ಪಡೆದಿರುವಾಗಲೇ ಗಾಂಧಿನಗರದ ಹಲವು ಸಾಂಪ್ರದಾಯಿಕ ನಿರ್ದೇಶಕರು ಇವರಿಬ್ಬರನ್ನು ಹೀಯಾಳಿಸುತ್ತಿದ್ದಾರೆ. "ಇವರಿಬ್ಬರ ಚಿತ್ರಗಳಲ್ಲಿ ಏನು ಬದನೆಕಾಯಿ ಕಥೆಯಿದೆ? ಅವುಗಳಲ್ಲಿ ಯಾವ ಸಂದೇಶವಿದೆ?..." ಎಂಬುದು ಅವರ ವಾದ.

ನಿಜ, ಭಟ್ಟರ 'ಪಂಚರಂಗಿ' ಮತ್ತು ಸೂರಿಯ 'ಜಾಕಿ'ಯಲ್ಲಿ ಕಥೆಯೇ ಇಲ್ಲ, ಇದ್ದರೂ ಅದು ತುಂಬಾ ತೆಳುವಾಗಿದೆ. ಆದರೆ ತಮ್ಮ ಚಿತ್ರದ ಪ್ರಚಾರ ಮಾಡುವಾಗ ಅವರಿಬ್ಬರೂ "ಇದರ ಕಥೆ ಹೇಳಲು ಸಾಧ್ಯವಿಲ್ಲ... ಅದೇನಿದ್ದರೂ ಅದನ್ನು ಚಿತ್ರಕಥೆಯ ಬೆಂಬಲದಿಂದ ಹೆಣೆಯಲಾಗಿದೆ" ಎಂದೇ ಹೇಳಿದ್ದರು. ಅವರ ಚಿತ್ರ ನೋಡಿದ ಪ್ರೇಕ್ಷಕರ ಮತ್ತು ವಿಮರ್ಶಕರ ಮಾತೂ "ಚಿತ್ರದಲ್ಲಿ ಕತೆಯಿಲ್ಲ, ಆದರೂ ಒಂದು ಸಾರಿ ನೋಡಬಹುದು" ಎಂಬುದೇ ಆಗಿತ್ತು.

ಆದರೂ ಅವರ ಚಿತ್ರಗಳ ಯಶಸ್ಸನ್ನು ನೋಡಿದ ನಂತರ 'ಕಣ್ಣೀರ ಕಥೆ', 'ಅಣ್ಣತಮ್ಮನ ಕಥೆ', 'ಕಳ್ಳ-ಪೊಲೀಸ್ ಕಥೆ', 'ಮಚ್ಚು-ಲಾಂಗು ಕಥೆ', 'ಭೂಗತ ಲೋಕದ ಕಥೆ', 'ತ್ರಿಕೋನ ಪ್ರೇಮಕಥೆ' ಇತ್ಯಾದಿಗಳನ್ನೆಲ್ಲ ನೋಡಿ ನೋಡಿ ಪ್ರೇಕ್ಷಕರ ತಲೆ ಚಿಟ್ಟುಹಿಡಿದು, ಈಗ ಅದೇ ಫಾರ್ಮುಲ ಕಥೆ ನೋಡುವ ಬದಲು ಪ್ರೇಕ್ಷಕ ಇವತ್ತು ಅಪ್ಪಟ ಮನರಂಜನೆ ಕೊಡುವ ಚಿತ್ರಗಳತ್ತ ಮನಸ್ಸು ಮಾಡಿರಬಹುದೇ ಎಂದೆನಿಸದಿರದು.

ಅದೆಲ್ಲ ಬದಿಗಿರಲಿ, ಇಲ್ಲಿ ಇನ್ನೊಂದು ವಿಶೇಷವನ್ನು ಗಮನಿಸಬೇಕು. ಭಟ್ಟರ 'ಪಂಚರಂಗಿ' ಮತ್ತು ಸೂರಿಯ 'ಜಾಕಿ' ಚಿತ್ರಗಳು ಪಡ್ಡೆ ಹುಡುಗರಿಗೆ ಮೀಸಲಿಟ್ಟ ಚಿತ್ರಗಳು ಎಂಬುದು. 'ಪಂಚರಂಗಿ' ಚಿತ್ರದ ನಾಯಕ ದಿಗಂತ್ ಸೋಂಭೇರಿ. 'ಜಾಕಿ' ಚಿತ್ರದಲ್ಲೂ ನಾಯಕ ಪುನೀತ್ ಬಹುತೇಕ ಅದೇ ಗುಂಪಿಗೆ ಸೇರಿದವನು. ಹೀಗಾಗಿ ಈ ನಾಯಕನಟರು ಮಾತನಾಡುವ ಭಾಷೆ ಮತ್ತು ಆಟೋಟಗಳು ಪಡ್ಡೆ ಹುಡುಗರಿಗೆ ಬಹಳ ಇಷ್ಟವಾಗಿರಬಹುದು. 'ಪಂಚರಂಗಿ'ಯಲ್ಲಿ ಭಟ್ಟರ ಸಂಭಾಷಣೆ ಚಿತ್ರವನ್ನು ಗೆಲ್ಲಿಸಿದರೆ, 'ಜಾಕಿ'ಯಲ್ಲಿ ಭಟ್ಟರ ಸಂಭಾಷಣೆ ಮಾದರಿಯ ಹಾಡುಗಳು, ಹರಿಕೃಷ್ಣ ಅವರ ಸಂಗೀತ ಆ ಹುಡುಗರನ್ನು ನರ್ತಿಸುವಂತೆ ಮಾಡಿತು.

ಆದೇನೇ ಇದ್ದರೂ, ಒಂದು ಚಿತ್ರದ ಯಶಸ್ಸು ಈಗ ಅದರ ನಾಯಕ ನಟನಿಗಿಂತ ನಿರ್ದೇಶಕನಿಗೆ ಲಭಿಸುತ್ತಿರುವುದು ಸಂತೋಷದ ವಿಷಯ.

ಯಾರು ಪಾಸ್, ಯಾರು ಫೇಲ್ ?

"ಇತ್ತೀಚೆಗೆ ಕತೆಗಳೇ ಇಲ್ಲದ ಸಿನಿಮಾಗಳು ಗೆಲ್ಲುತ್ತಿರುವುದನ್ನು ನೋಡಿ ಓರ್ವ ಹಳೇ ನಿರ್ದೇಶಕ ಗೋಳು ಹೊಯ್ದು ಕೊಂಡಿದ್ದು ಹೀಗೆ: "ನಮ್ಮ ಕಾಲದಲ್ಲಿ ಒಂದು ಸಿನಿಮಾ ಮಾಡಿ, ಕನಿಷ್ಠ 35 ಅಂಕಗಳನ್ನು ಗಳಿಸಿ ಪಾಸ್ ಆಗುತ್ತಿದ್ದೆವು. ಆದರೀಗ ಒಂದು ಸಿನಿಮಾಗೆ ಕೇವಲ 10 ಅಂಕಗಳನ್ನು ಗಳಿಸಿದವರೆಲ್ಲಾ ರ್‍ಯಾಂಕ್ ಪದವೀಧರ ಅನ್ನಿಸಿಕೊಳ್ಳುತ್ತಿದ್ದಾರೆ!"

ನಮಿತಾಪಹರಣಂ!



ಮತ್ತೆ ಪಡ್ಡೆಗಳು ಗುಮ್ ಗುಮ್ ಗುಮ್ ಎಂದು ಅಬ್ಬರಿಸುತ್ತಿದ್ದಾರೆ. ಯಾಕೆಂದರೆ ಯುವಕರ ಮೈಮನಸ್ಸನ್ನು ಗುಮ್ಮುವ ನಟಿ ನಮಿತಾ ಮತ್ತೆ ಸ್ಯಾಂಡಲ್‌ವುಡ್ಡಿಗೆ ಬಂದಿದ್ದಾಳೆ!

'ನೀಲಕಂಠ'ದಲ್ಲಿ ಮೈಚಳಿ ಬಿಟ್ಟು ರವಿಚಂದ್ರನ್ ಅವರ ಜೊತೆ ಕುಣಿದು ಹೋಗಿದ್ದ ನಟಿ ನಮಿತಾ, ಇತ್ತೀಚೆಗೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಜೊತೆ 'ಇಂದ್ರ'ನಲ್ಲಿ 'ಗುಮ್ ಗುಮ್ ಗುಮ್‌ತಾಳೆ ಗುಮ್' ಎಂದು ಡ್ಯುಯೆಟ್ ಹಾಡಿದ್ದಳು. ನಂತರ ಮತ್ತೆ ರವಿಯೊಂದಿಗೆ 'ನೂಕು ನುಗ್ಗಲು ಏನೋ ಹರುಷವು' ಅಂತಾ 'ಹೂ'ವಿನಂತೆ ಕುಣಿದಿದ್ದಳು. ಈಗ ಆಕೆಯ ಹೆಸರಿನಲ್ಲೇ ನಿರ್ಮಾಣವಾಗುತ್ತಿರುವ 'ನಮಿತಾ ಐ ಲವ್ ಯೂ' ಚಿತ್ರದಲ್ಲಿ ಈಕೆ ಕಾಣಿಸಿಕೊಳ್ಳುತ್ತಿದ್ದಾಳೆ. ಅದೂ ಯೋಗ ಕಲಿಸುವ ಟೀಚರ್ ಪಾತ್ರದಲ್ಲಿ!!

ಇತ್ತೀಚೆಗೆ ಈಕೆ ತಮಿಳುನಾಡಿನ ತಿರುಚನಾಪಳ್ಳಿಗೆ ಕಾರ್ಯಕ್ರಮವೊಂದಕ್ಕೆ ಹೋಗಿದ್ದಳು. ತಿರುಚ್ಚಿ ವಿಮಾನ ನಿಲ್ದಾಣದಲ್ಲಿ ಈಕೆಯ ಕಾರ್ ಡ್ರೈವರ್ ಕಾದು ನಿಂತಿದ್ದನಂತೆ. ಆದರೆ ಮತ್ತೊಬ್ಬ ಟ್ಯಾಕ್ಸಿ ಚಾಲಕ ಈಕೆಯನ್ನು ಕರೆದೊಯ್ಯಲು ಬಂದಿರುವುದು ತಾನೇ ಎಂದು ಪರಿಚಯಿಸಿಕೊಂಡು ಆಕೆಯನ್ನು ಕಿಡ್ನಾಪ್ ಮಾಡಿದನಂತೆ. ಈ ವಿಷಯ ಒರಿಜಿನಲ್ ಡ್ರೈವರ್‌ಗೆ ಗೊತ್ತಾದ ತಕ್ಷಣ ನಮಿತಾಳನ್ನು ಬಚಾವು ಮಾಡಿದನಂತೆ.

ನಮಿತಾಳ ಮಾದಕತೆಯನ್ನು ಲಕ್ಷಾಂತರ ಜನ ಆರಾಧಿಸುತ್ತಾರೆ. ನಟಿ ಖುಷ್ಬೂ ನಂತರ ಅಭಿಮಾನಿಗಳಿಂದ ದೇವಾಲಯ ನಿರ್ಮಿಸಿಕೊಂಡ ಎರಡನೇ ಜನಪ್ರಿಯ ನಟಿ ನಮಿತಾ. ಆಕೆಯನ್ನು ನೇರವಾಗಿ ನೋಡಲು ಸಾಧ್ಯವಾಗದ ಅಭಿಮಾನಿಗಳು ದೇಗುಲದಲ್ಲಿ ಆಕೆಯ ಶಿಲೆಯನ್ನು ನಿರ್ಮಿಸಿಕೊಂಡು ಸರ್ವಾಂಗ ಆರಾಧನೆ ಮಾಡುತ್ತಿದ್ದರೆ, ಇನ್ನೊಬ್ಬ ತಿಕ್ಕಲು ಭಕ್ತ ಆಕೆಯನ್ನು ಅಪಹರಿಸಲು ಹೋಗಿ ಪೊಲೀಸರ ಅತಿಥಿಯಾಗಿದ್ದಾನೆ!

ಇಷ್ಟು ದಿನ ಇಂಟರ್‌ನೆಟ್‌ನಲ್ಲಿ ಈಕೆಯನ್ನೇ ಹೋಲುವ ಬ್ಲೂ ಫಿಲಂಗಳದ್ದೇ ಕಾರುಬಾರಿತ್ತು. ಸದ್ಯ ಈ ಸೆಕ್ಸೀ ನಟಿಯ ಹೈಜಾಕ್ ಪ್ರಕರಣ ನೆಟ್ಟಾಭಿಮಾನಿಗಳಿಗೆ ಹಾಟ್ ನ್ಯೂಸ್ ಆಗಿದೆ...



ಮಾರುಕಟ್ಟೆಯಲ್ಲಿ ಬೇರೆಲ್ಲಾ ಪತ್ರಿಕೆಗಳನ್ನು ಮೀರಿಸಿರುವ...

ಗ್ರೇಡ್

SDA-FDA ನೇಮಕಾತಿ ಪರೀಕ್ಷೆ, ಪೊಲೀಸ್ ನೇಮಕಾತಿಯ ಸಮಗ್ರ ಮಾಹಿತಿಗಳ

ವಿಶೇಷಾಂಕ

ಎಲ್ಲೆಡೆ ಲಭ್ಯ

ನವೆಂಬರ್ 2010ರ ಸಂಚಿಕೆ

ಪ್ರತಿಗಳಿಗಾಗಿ ಸಂಪರ್ಕಿಸಿ:
9880302817, 26676427

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore
Fax : 26604536, E-mail :lankesh70@rediffmail.com. Printed at ...